ಸಂಪುಟ: 04 ಸಂಚಿಕೆ: 329 ಪುಟಗಳು: 08 ಸೋಮವಾರ 10 ಫೆಬ್ರವರಿ 2025
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833
9448225696 +91 8035841833 ₹5

**ಮುಂಜಾನೆ ಮಾತು**

ನಿನ್ನ ಕಣ್ಣೀರನ್ನು ಯಾರು ಗಮನಿಸುವುದಿಲ್ಲ. ನಿನ್ನ ನೋವನ್ನು ಯಾರು ಗುರುತಿಸುವುದಿಲ್ಲ. ನಿನ್ನ ಕಷ್ಟಗಳನ್ನು ಯಾರು ತೀರಿಸುವುದಿಲ್ಲ. ಆದರೆ ಎಲ್ಲರೂ ನಿನ್ನ ತಪ್ಪುಗಳನ್ನು ಹುಡುಕುವ ಕೆಲಸದಲ್ಲಿ ಮುಂದೆ ಇರುತ್ತಾರೆ.

# ಉದಯ ವಾಹಿನಿ

UV
ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

## ಮತ್ತೆ ದೆಹಲಿ ಪ್ರವಾಸಕ್ಕೆ ಸಜ್ಜಾದ ಬಿಜೆಪಿ ರೆಬಲ್ ನಾಯಕರು

• ಉದಯವಾಹಿನಿ, ದಾವಣಗೆರೆ

ಬಿಜೆಪಿ ರೆಬಲ್ ನಾಯಕರ ಬಣ ಮತ್ತೆ ದೆಹಲಿ ಪ್ರವಾಸಕ್ಕೆ ಸಜ್ಜಾಗಿದೆ. ಯತ್ನಾಳ್ ಬಣದ ಟೀಂ ದಾವಣಗೆರೆಯಲ್ಲಿ ಬೀಡುಬಿಟ್ಟಿದ್ದು, ಜಿಎಂಐಟಿ ಅತಿಥಿ ಗೃಹದಲ್ಲಿ ಎರಡನೇ ಸುತ್ತಿನ ಸಭೆ ನಡೆಸಿದ್ದಾರೆ. ಸಭೆಗೂ ಮುನ್ನ ಸುದ್ದಿಗಾರರೊಂದಿಗೆ ಮಾತನಾಡಿದ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್, ನಾವು ಮತ್ತೆ ದೆಹಲಿಗೆ ಹೋಗುತ್ತೇವೆ. ನಮ್ಮ ಹೋರಾಟ, ಪ್ರಯತ್ನ ಮುಂದುವರೆಸುತ್ತೇವೆ ಎಂದು ತಿಳಿಸಿದ್ದಾರೆ. ಹಾದಿ ಬೀದಿಯಲ್ಲಿ ಹಂದಿಗಳು ಹೇಳುತ್ತವೆ ಎಂದರೆ ನಾವ್ಯಾಕೆ ಮಾತನಾಡಬೇಕು? ದಾವಣಗೆರೆಯಲ್ಲಿ ಎರಡು ಹಂದಿಗಳಿವೆ. ನಾವು ದೆಹಲಿಗೆ ಹೋಗಿ ಅಲ್ಲಿಯೇ ಮಾತುಕತೆ ನಡೆಸುತ್ತೇವೆ ಎಂದರು.

ಇನ್ನು ಮಾಜಿ ಸಚಿವ ಶ್ರೀರಾಮುಲು ದೆಹಲಿ ಪ್ರವಾಸ ವಿಚಾರವಾಗಿ, ಅವರ ತೀರ್ಮಾನ ಒಳ್ಳೆಯದೇ. ಒಡೆದ ಮನಸುಗಳನ್ನು ಒಂದುಗೂಡಿಸುವುದು ಒಳ್ಳೆಯದು. ರಾಮುಲು ವಿಚಾರವನ್ನು ಸ್ವಾಗತಿಸುತ್ತೇವೆ ಎಂದರು. ನಾವು ಭ್ರಷ್ಟಾಚಾರ, ಕುಟುಂಬ ರಾಜಕಾರಣದ ವಿರುದ್ಧ ಇದ್ದವರು ಎಂದು ಹೇಳಿದರು.

### ಬಿಜೆಪಿ ನೂತನ ರಾಜ್ಯಾಧ್ಯಕ್ಷರ ಬಗ್ಗೆ ಯತ್ನಾಳ್ ಮಹತ್ವದ ಮಾಹಿತಿ

ಕರ್ನಾಟಕದ ಬಿಜೆಪಿ ಅಧ್ಯಕ್ಷರ ಬದಲಾವಣೆ ವಿಚಾರದಿಂದ ಕಮಲದ ಮನೆಯಲ್ಲಿ ಒಡಕು ಮೂಡಿದೆ. ಹಾಲಿ ಅಧ್ಯಕ್ಷ ಬಿವೈ ವಿಜಯೇಂದ್ರ ಹಾಗೂ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅವರ ನಡುವೆ ರಾಜ್ಯಾಧ್ಯಕ್ಷ ಸ್ಥಾನಕ್ಕೆ ಪೈಪೋಟಿ ಜೋರಾಗಿದೆ. ಇದೇ ವಿಚಾರವಾಗಿ ಯತ್ನಾಳ್ ಅವರು ಮಹತ್ವದ ಮಾಹಿತಿ ಹಂಚಿಕೊಂಡಿದ್ದಾರೆ. ಬಿಜೆಪಿ ರಾಜ್ಯಾಧ್ಯಕ್ಷ ಸ್ಥಾನ ಮಾತ್ರವಲ್ಲ, ರಾಜ್ಯದ ಮುಖ್ಯಮಂತ್ರಿ ಆಗುವ ಎಲ್ಲಾ ಅರ್ಹತೆ ನನಗೆ ಇದೆ ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ್ ಹೇಳಿದ್ದಾರೆ. ಈ ಮೂಲಕ ಯತ್ನಾಳ್ ಅವರು ಮುಂದೆ ಬಿಜೆಪಿಯಿಂದ ಸಿಎಂ ಆಗುವ ಕನಸನ್ನು ಬಹಿರಂಗಪಡಿಸಿದ್ದಾರೆ. ಕರ್ನಾಟಕವನ್ನ ಭ್ರಷ್ಟಾಚಾರದಿಂದ ಮುಕ್ತಗೊಳಿಸುವ ಪ್ರಯತ್ನ ಮಾಡುತ್ತಿದ್ದೇವೆ. ಅಲ್ಲದೆ ಕುಟುಂಬ ರಾಜಕಾರಣ ಹಾಗೂ ಭ್ರಷ್ಟಾಚಾರದ ವಿರುದ್ಧ ನಮ್ಮ ಹೋರಾಟ ಮುಂದುವರಿಯಲಿದೆ. ಇದೇ ವಿಚಾರವಾಗಿ ನಮ್ಮ ಪ್ರಯತ್ನ ನಡೆಯುತ್ತಿದೆ ಎಂದಿದ್ದಾರೆ. ಅಲ್ಲದೆ ಯತ್ನಾಳ್ ಅವರು ಮತ್ತೆ ದೆಹಲಿಗೆ ಹೋಗುತ್ತಿರುವುದಾಗಿ ಹೇಳಿ ದ್ದಾರೆ. ಕೇಂದ್ರ ಸಚಿವ ವಿ.ಸೋಮಣ್ಣ ಅವರ ಗೃಹಪ್ರವೇಶ ಇರುವ ಕಾರಣ ಮತ್ತೆ ದೆಹಲಿಗೆ ಹೋಗುತ್ತಿದ್ದೇವೆ. ಆಗ ಪಕ್ಷದ ವರಿಷ್ಠರನ್ನು ಕೂಡ ಭೇಟಿ ಮಾಡುತ್ತೇವೆ. ಆದರೆ ಹೈಕಮಾಂಡ್ ನಾಯಕರು ಸಿಗುತ್ತಾರೋ ಇಲ್ಲವೋ ಎಂಬುದನ್ನು ನಿಮಗೆ ಏಕೆ ಹೇಳಬೇಕು? ಎಂದು ಮಾಧ್ಯಮಗಳ ವಿರುದ್ಧ ಗರಂ ಆಗಿದ್ದಾರೆ. ಪಕ್ಷದಲ್ಲಿ ಮೂಡಿರುವ ಒಡಕನ್ನು ಸರಿಮಾಡಬೇಕಿದೆ.ಇನ್ನು ಶ್ರೀರಾಮುಲು ಅವರ ಯಾತ್ರೆ ನಿರ್ಧಾರ ಸ್ವಾಗತಾರ್ಹ ಎಂದು ಹೇಳಿದ್ದಾರೆ.

## ರಾಜ್ಯ ಬಿಜೆಪಿಯಲ್ಲಿನ ಗೊಂದಲ ಸುಖಾಂತ್ಯವಾಗಲಿದೆ: ಸಂಸದ

• ಉದಯವಾಹಿನಿ, ದಾವಣಗೆರೆ

ಚುನಾವಣೆಯಲ್ಲಿ ಸೋತಾಗ ಇವಿಎಂ ಬಗ್ಗೆ ಮಾತನಾಡುವುದು ಫ್ಯಾಷನ್ ಆಗಿದೆ. ವಿರೋಧ ಪಕ್ಷಗಳು ನಿರಂತರವಾಗಿ ಈ ಆರೋಪವನ್ನು ಮಾಡುತ್ತಿವೆ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ. ದಾವಣಗೆರೆ ಜಿಲ್ಲೆಯ ಹರಿಹರದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ದೆಹಲಿ ವಿಧಾನಾಭೆ ಚುನಾವಣೆ ಸ್ಪಷ್ಟ ಸಂದೇಶ ನೀಡಿದೆ. ಯಾರು ದೇಶದ ಬಗ್ಗೆ ಚಿಂತನೆ ಮಾಡುತ್ತಾರೆ. ದೇಶದ ಅಭಿವೃದ್ಧಿ ಮಾಡುತ್ತಾರೆ. ಯಾರು ದೇಶ ಕಟ್ಟುತ್ತಾರೆ ಅವರಿಗೆ ಜನ ಬೆಂಬಲ ಇದೆ ಎನ್ನುವುದು ಬಹಳ ಸ್ಪಷ್ಟವಾಗಿದೆ. ದೇಶದ ವಿಭಜನೆ ಬಗ್ಗೆ ದೇಶದ ಹಿತವನ್ನು ಮರೆತು ವಿದೇಶದಲ್ಲಿ ಮಾತನಾಡುವವರಿಗೆ ಜನರು ಪಾಠ ಕಲಿಸಿದ್ದಾರೆ ಎಂದರು. ಇವಿಎಂ ಬಗ್ಗೆ ಮಾತನಾಡುವುದು ಫ್ಯಾಷನ್ ಆಗಿದೆ. ತಮ್ಮ ಸೋಲನ್ನು ಒಪ್ಪಿಕೊಳ್ಳದೇ ಕುಂಟು ನೆಪ ಹೇಳುವುದು ನಾಯಕನ ಲಕ್ಷಣ ಅಲ್ಲ. ವಿರೋಧ ಪಕ್ಷಗಳು ನಿರಂತರವಾಗಿ ಈ ಆರೋಪವನ್ನು ಮಾಡುತ್ತಿವೆ ಎಂದು ಹೇಳಿದರು.

ರಾಜ್ಯ ಬಿಜೆಪಿಯಲ್ಲಿ ಯಾವುದೇ ಗೊಂದಲ ಇಲ್ಲ. ನಮ್ಮದು ಪ್ರಜಾಪ್ರಭುತ್ವ ಇರುವ ಪಕ್ಷ. ನಮ್ಮ ಹೈಕಮಾಂಡ್ ಬಹಳ ಗಟ್ಟಿಯಾಗಿದೆ. ಈಗ ದೆಹಲಿ ಚುನಾವಣೆ ಮುಗಿದಿದೆ. ಸಂಘಟನೆಗೆ ಹೆಚ್ಚು ಸಮಯ ನೀಡುತ್ತಾರೆ. ಆಗ ಕರ್ನಾಟಕದ ಬಗ್ಗೆಯೂ ನಿರ್ಣಯ ಆಗುತ್ತದೆ. ಎಲ್ಲವೂ ಅತ್ಯಂತ ಸುಖಾಂತ್ಯವಾಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ರಾಜ್ಯಾಧ್ಯಕ್ಷ ಸ್ಥಾನಕ್ಕೆ ಕೇಂದ್ರ ಸಚಿವ ವಿ. ಸೋಮಣ್ಣ ಅವರ ಹೆಸರು ಸೂಚಿಸಿದ್ದೀರಾ ಎನ್ನುವ ಕುರಿತು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು ನಾನು ಯಾರ ಹೆಸರನ್ನೂ ಸೂಚಿಸಿಲ್ಲ. ನಾನು ಸಂಸದನಾಗಿ ನನ್ನ ಕೆಲಸವನ್ನು ಮಾಡುತ್ತಿದ್ದೇನೆ. ನಿಮ್ಮ ಮೂಲಗಳಿಗೆ ನೀವೆ ಉತ್ತರ ಕೊಡಬೇಕು. ಏನೇ ಇದ್ದರೂ ಪಕ್ಷದ ಹೈಕಮಾಂಡ್ ಒಳ್ಳೆಯ ತೀರ್ಮಾನ ಮಾಡುತ್ತದೆ ಎನ್ನುವ ವಿಶ್ವಾಸ ಇದೆ. ಹೈಕಮಾಂಡ್ ಯಾರನ್ನು ಆಯ್ಕೆ ಮಾಡುತ್ತಾರೋ ಅವರೇ ಉತ್ತಮ ಎಂದು ಹೇಳಿದರು.

# ಭಾರತ-ಅಮೆರಿಕ ಸಂಬಂಧ ವೃದ್ಧಿ ಜಗತ್ತಿನ ಗಮನ ಸೆಳೆದ ಮೋದಿ






- 14 ರಾಜ್ಯಗಳಲ್ಲಿ ಬಿಜೆಪಿಗೆ ಸ್ವಂತ ಬಲದ ಅಧಿಕಾರ
- ಇಂದಿನಿಂದ 4 ದಿನ ಪ್ರಧಾನಿ ವಿದೇಶ ಪ್ರವಾಸ..! ಕುತೂಹಲ ಕೆರಳಿಸಿದ ಮೋದಿ-ಟ್ರಂಪ್ ಭೇಟಿ...!
- ಪ್ರಧಾನಿ ಮೋದಿ ಯುಎಸ್ ಟೂರ್ ಬಳಿಕ ದಿಲ್ಲಿ ಸಿಎಂ ಪ್ರಮಾಣವಚನ....?
- ಅಲ್ಲಿತನಕ ಮುಖ್ಯಮಂತ್ರಿ ಹುಡುಕಲಿದೆ ಬಿಜೆಪಿ,
- ದೆಹಲಿ ಮುಖ್ಯಮಂತ್ರಿ ಪ್ರಮಾಣವಚನ ಯಾವಾಗ...?

**ಮೋದಿ ಅಮೆರಿಕ ಪ್ರವಾಸ**

• ಉದಯವಾಹಿನಿ, ನವದೆಹಲಿ

ಪ್ರಧಾನಿ ಮೋದಿ ಅವರು ಇಂದಿನಿಂದ ನಾಲ್ಕು ದಿನಗಳ ಕಾಲ ವಿದೇಶ ಪ್ರವಾಸ ಹಮ್ಮಿಕೊಂಡಿದ್ದಾರೆ. ತಮ್ಮ ವಿದೇಶ ಪ್ರವಾಸದ ವೇಳೆ ಪ್ರಧಾನಿ ಮೋದಿ, ಫ್ರೆಂಚ್ ಅಧ್ಯಕ್ಷರು ಮತ್ತು ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರನ್ನು ಭೇಟಿಯಾಗಿದ್ದು, ಟ್ರಂಪ್ ಭೇಟಿ ಭಾರೀ ಕುತೂಹಲ ಮೂಡಿಸಿದೆ. ಫ್ರೆಂಚ್ ಅಧ್ಯಕ್ಷರ ಆಹ್ವಾನದ ಮೇರೆಗೆ, ಭಾರತದ ಪ್ರಧಾನಿ ಮೋದಿ ಫೆ.10-12 ರಿಂದ ಫ್ರಾನ್ಸ್‌ಗೆ ಭೇಟಿ ನೀಡಲಿದ್ದಾರೆ. ಮೋದಿ ಅವರು ಅಲ್ಲಿ ನಡೆಯುವ ಎಐ ಶೃಂಗಸಭೆಯ ಸಹ-ಅಧ್ಯಕ್ಷತೆಯನ್ನುವಹಿಸಲಿದ್ದಾರೆ, ಇದರಲ್ಲಿ ಅಮೆರಿಕದ ಉಪಾಧ್ಯಕ್ಷರು ಮತ್ತು ಚೀನಾದ ಉಪ ಪ್ರಧಾನ ಮಂತ್ರಿಗಳು ಸೇರಿ ಹಲವಾರು ರಾಷ್ಟ್ರಗಳ ಮುಖ್ಯಸ್ಥರು ಭಾಗವಹಿಸಲಿದ್ದಾರೆ. ಫೆ. 10ರಂದು ಸಂಜೆ ಪ್ರಧಾನಿ ಮೋದಿ ಪ್ಯಾರಿಸ್ ತಲುಪಲಿದ್ದು, ಅಲ್ಲಿ ಫ್ರೆಂಚ್ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರನ್ ಆಯೋಜಿಸಿರುವ ಭೋಜನಕೂಟದಲ್ಲಿ ಭಾಗವಹಿಸಲಿದ್ದಾರೆ.

ಇದಾದ ನಂತರ ಮೋದಿ ಅಮೆರಿಕಕ್ಕೂ ಭೇಟಿ ನೀಡಲಿದ್ದಾರೆ. ಪ್ರಧಾನಮಂತ್ರಿ ಮೋದಿ ಅವರು ತಮ್ಮ ಅಮೆರಿಕ ಪ್ರವಾಸದಿಂದ ಹಿಂದಿರುಗಿದ ನಂತರವೇ, ನೂತನ ದೆಹಲಿ ಮುಖ್ಯಮಂತ್ರಿಯ ಪ್ರಮಾಣ ವಚನ ಸಮಾರಂಭ ನಡೆಯಲಿದೆ ಎಂದು ಬಿಜೆಪಿ ಮೂಲಗಳು ಖಚಿತ ಪಡಿಸಿವೆ. 27 ವರ್ಷಗಳ ಬಳಿಕ ದೆಹಲಿಯಲ್ಲಿ ಪಕ್ಷ ಅಧಿಕಾರಕ್ಕೆ ಬಂದಿರುವುದರಿಂದ, ಮುಖ್ಯಮಂತ್ರಿ ಪ್ರಮಾಣವಚನ ಸ್ವೀಕಾರ ಸಮಾರಂಭವನ್ನು ಅದ್ದೂರಿಯಾಗಿ ಆಯೋಜಿಸಲು ಬಿಜೆಪಿ ನಿರ್ಧರಿಸಿದೆ.

ದೆಹಲಿ ಮುಖ್ಯಮಂತ್ರಿ ಪ್ರಮಾಣವಚನ ಸ್ವೀಕಾರ ಸಮಾರಂಭಕ್ಕೆ, ಎನ್‌ಡಿಎ ಆಡಳಿತವಿರುವ ಎಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳನ್ನು ಆಹ್ವಾನಿಸಲಾಗುವುದು ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆಪಿ ನಡ್ಡಾ ಅವರನ್ನು ಭೇಟಿಯಾಗಿ ರಾಷ್ಟ್ರ ರಾಜಧಾನಿಯಲ್ಲಿ ಸರ್ಕಾರ ರಚನೆ ಕುರಿತು ಚರ್ಚೆ ನಡೆಸಲಿದ್ದಾರೆ.


ದೆಹಲಿ ಬಿಜೆಪಿ ಮುಖ್ಯಸ್ಥ ವೀರೇಂದ್ರ ಸಚ್‌ದೇವ್ ಅವರು ಹೊಸದಾಗಿ ಆಯ್ಕೆಯಾದ 48 ಶಾಸಕರನ್ನು ಭೇಟಿಯಾಗಲಿದ್ದಾರೆ. ಬಿಜೆಪಿ ಪ್ರಧಾನ ಕಚೇರಿಯಲ್ಲಿ ಪ್ರಧಾನಿ ಮೋದಿ, ಅಮಿತ್ ಶಾ, ಜೆಪಿ ನಡ್ಡಾ ಅವರು ದೆಹಲಿ ಸರ್ಕಾರ ರಚನೆ, ಪ್ರಮಾಣ ವಚನ ಸಮಾರಂಭದ ಕುರಿತು ಚರ್ಚೆ ನಡೆಸಿದ್ದಾರೆ. ಈ ವೇಳೆ ಪ್ರಧಾನಿ ಮೋದಿ ಅವರು ಅಮೆರಿಕ ಪ್ರವಾಸದಿಂದ ಮರಳಿದ ಮೇಲೆ ಪ್ರಮಾಣವಚನ ಸ್ವೀಕಾರ ಸಮಾರಂಭ ಹಮ್ಮಿಕೊಳ್ಳುವ ಒಮ್ಮತದ ನಿರ್ಧಾರ ಮಾಡಲಾಗಿದೆ ಎನ್ನಲಾಗಿದೆ.


1. ದೆಹಲಿ ಸಿಎಂ ಹುಡುಕಾಟ ಆರಂಭಿಸಿದ ಬಿಜೆಪಿ
2. ಪ್ರಧಾನಿ ಮೋದಿ ಯುಎಸ್ ಪ್ರವಾಸದ ಬಳಿಕ ಪ್ರಮಾಣವಚನ
3. ದೆಹಲಿಯಲ್ಲಿ ಭವ್ಯ ಪ್ರಮಾಣವಚನ ಸಮಾರಂಭಕ್ಕೆ ಬಿಜೆಪಿ ಚಿಂತನೆ
4. ಎನ್‌ಡಿಎ ಆಡಳಿತವಿರುವ ರಾಜ್ಯಗಳ ಮುಖ್ಯಮಂತ್ರಿಗಳಿಗೆ ಆಹ್ವಾನ


### ಮುಖ್ಯಮಂತ್ರಿ ಯಾರು...?

ಎಎಪಿ ಮುಖ್ಯಸ್ಥ ಅರವಿಂದ್ ಕೇಜ್ರಿವಾಲ್ ಅವರನ್ನೇ ಸೋಲಿಸಿರುವ ಬಿಜೆಪಿ ನಾಯಕ ಪರ್ವೇಶ್ ವರ್ಮಾ ಸಿಎಂ ರೇಸ್‌ನಲ್ಲಿ ಮುಂಚೂಣಿಯಲ್ಲಿದ್ದಾರೆ. ಜಾಟ್ ಸಮುದಾಯದವರಾಗಿದ್ದು ಜಾತಿ ಕಾರ್ಡ್ ಕೂಡ ಅವರು ಸಿಎಂ ಆಗಲು ಸಹಾಯ ಮಾಡುವ ಸಾಧ್ಯತೆ ಇದೆ. ಸತೀಶ್ ಉಪಾಧ್ಯಾಯ, ವಿಜೇಂದರ್ ಗುಪ್ತಾ, ಆಶಿಶ್ ಸೂದ್, ಪವನ್ ಶರ್ಮಾ ಅವರಂತಹ ಅನುಭವಿ ನಾಯಕರು ಕೂಡ ದೆಹಲಿ ಸಿಎಂ ಸ್ಥಾನದ ಆಕಾಂಕ್ಷಿಯಾಗಿದ್ದಾರೆ.









### ದೆಹಲಿ ಸಿಎಂ ಆಗಿ ಆಯ್ಕೆ ಮಾಡುವ ಸಾಧ್ಯತೆ

ಬಿಜೆಪಿ ನಾಯಕತ್ವವು ಮುಖ್ಯಮಂತ್ರಿ ಸ್ಥಾನಕ್ಕೆ ತನ್ನ ಆಯ್ಕೆಯನ್ನು ಇನ್ನೂ ಘೋಷಿಸದಿದ್ದರೂ, ಆಮ್ ಆದ್ಮಿ ಪಕ್ಷದ (ಎಎಪಿ) ರಾಷ್ಟ್ರೀಯ ಸಂಚಾಲಕ ಅರವಿಂದ್ ಕೇಜ್ರಿವಾಲ್ ಅವರನ್ನು ಸೋಲಿಸುವ ಮೂಲಕ ಗಮನ ಸೆಳೆದಿರುವ ನವದೆಹಲಿ ಶಾಸಕ ಪರ್ವೇಶ್ ವರ್ಮಾ ಅವರನ್ನೇ ದೆಹಲಿ ಸಿಎಂ ಆಗಿ ಆಯ್ಕೆ ಮಾಡುವ ಸಾಧ್ಯತೆ ಹೆಚ್ಚಾಗಿದೆ. ಪಶ್ಚಿಮ ದೆಹಲಿಯಿಂದ ಎರಡು ಬಾರಿ ಸಂಸದರಾಗಿದ್ದ ಪರ್ವೇಶ್ ವರ್ಮಾ ಅವರಿಗೆ, ಕಳೆದ ವರ್ಷ ಸಂಸತ್ ಚುನಾವಣೆ ಟಿಕೆಟ್ ನಿರಾಕರಿಸಲಾಗಿತ್ತು. ವಿಧಾನಸಭಾ ಚುನಾವಣಾ ಅಖಾಡಕ್ಕೆ ಧುಮುಕಿ, ಸತತ ಮೂರು ಬಾರಿ ನವದೆಹಲಿ ಕ್ಷೇತ್ರದಿಂದ ಗೆಲುವು ದಾಖಲಿಸಿದ್ದ ಅರವಿಂದ್ ಕೇಜ್ರಿವಾಲ್ ಅವರನ್ನು ಸೋಲಿಸಿದರು. ಪರ್ವೇಶ್ ವರ್ಮಾ ಅವರು ಅರವಿಂದ್ ಕೇಜ್ರಿವಾಲ್ ಅವರನ್ನು ಬರೋಬ್ಬರಿ 4,000 ಮತಗಳಿಂದ ಸೋಲಿಸಿದ್ದಾರೆ.

### ಸಮರ್ಪಣಾ ಭಾವದಿಂದ ಸೇವೆ

ಪ್ರಧಾನಿ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆಪಿ ನಡ್ಡಾ ಅವರ ಪ್ರಬಲ ನಾಯಕತ್ವದಲ್ಲಿ ನಾವು ದೆಹಲಿಯಲ್ಲಿ ನಿಜವಾದ ಬದಲಾವಣೆಯನ್ನು ತರಲು ಅವಿರತವಾಗಿ ಶ್ರಮಿಸುತ್ತೇವೆ. ಈ ಜನಾದೇಶವು ಜನರು ಪ್ರಾಮಾಣಿಕ, ಪಾರದರ್ಶಕ ಮತ್ತು ಅಭಿವೃದ್ಧಿ-ಚಾಲಿತ ರಾಜಕೀಯವನ್ನು ಬಯಸುತ್ತಾರೆ ಎಂಬ ಸ್ಪಷ್ಟ ಸಂದೇಶವಾಗಿದೆ. ಸಮಗ್ರತೆ ಮತ್ತು ಸಮರ್ಪಣಾ ಭಾವದಿಂದ ಸೇವೆ ಸಲ್ಲಿಸುವ ನನ್ನ ಬದ್ಧತೆ ಅಚಲವಾಗಿದೆ.. ಎಂದು ಪರ್ವೇಶ್ ವರ್ಮಾ ಹೇಳಿದ್ದಾರೆ.


## ದಾವಣಗೆರೆಗೆ ಹೊರಟಿದ್ದ ಬಿವೈ ವಿಜಯೇಂದ್ರ ದೆಹಲಿಗೆ

• ಉದಯವಾಹಿನಿ, ಬೆಂಗಳೂರು

ಕರ್ನಾಟಕ ಬಿಜೆಪಿಯಲ್ಲಿ ಎಲ್ಲವೂ ಸರಿ ಇಲ್ಲ. ಬಲ ಪ್ರದರ್ಶನ ಉಚ್ಚಾಟನೆಗೆ ಒತ್ತಾಯ, ಅಧ್ಯಕ್ಷರ ಬದಲಾವಣೆ ಹೀಗೆ ವಿವಿಧ ವಿಚಾರಕ್ಕಾಗಿ ಆಡಳಿತ ಪಕ್ಷಕ್ಕಿಂತ ರಾಜ್ಯ ದಲ್ಲಿ ಪ್ರತಿಪಕ್ಷವೇ ಸುದ್ದಿಯಲ್ಲಿದೆ. ರಾಜ್ಯಾಧ್ಯಕ್ಷ ಬಿ. ವೈ. ವಿಜಯೇಂದ್ರ ಬದಲಾವಣೆ ಆಗುತ್ತದೆಯೇ? ಎಂಬುದು ಸದ್ಯದ ಕುತೂಹಲವಾಗಿದೆ.

ದೆಹಲಿ ಚುನಾವಣೆ ಮುಗಿಯುತ್ತಿದ್ದಂತೆಯೇ ಬಿಜೆಪಿ ಹೈಕಮಾಂಡ್ ಬಿ. ವೈ. ವಿಜಯೇಂದ್ರಗೆ ದೆಹಲಿಗೆ ಬರುವಂತೆ ಬುಲಾವ್ ನೀಡಿದೆ. ಭಾನುವಾರ ಬಿ. ವೈ. ವಿಜಯೇಂದ್ರ ದಿಢೀರ್ ಆಗಿ ದೆಹಲಿ ವಿಮಾನವೇರಿದ್ದಾರೆ. ಇದಕ್ಕೆ ಕಾರಣ ಒಂದೇ ಒಂದು ಫೋನ್ ಕರೆ. ದಾವಣಗೆರೆಗೆ ಹೋಗುತ್ತಿದ್ದ ಬಿ. ವೈ. ವಿಜಯೇಂದ್ರಗೆ ನೆಲಮಂಗಲದಿಂದ ಬೆಂಗಳೂರಿಗೆ ವಾಪಸ್ ಆಗಿ, ದೆಹಲಿಗೆ ತೆರಳಿದರು. ಪೂರ್ವ ನಿಗದಿತ ಕಾರ್ಯಕ್ರಮದಂತೆ ಬಿ. ವೈ ವಿಜಯೇಂದ್ರ ಭಾನುವಾರ ಹರಿಹರ ತಾಲ್ಲೂಕಿನ ರಾಜನಹಳ್ಳಿಯ ವಾಲ್ಮೀಕಿ ಗುರು ಪೀಠದ ಆವರಣದಲ್ಲಿ ನಡೆಯುತ್ತಿರುವ 7ನೇ ವರ್ಷದ ವಾಲ್ಮೀಕಿ ಜಾತ್ರೆಯಲ್ಲಿ ಪಾಲ್ಗೊಳ್ಳಬೇಕಿತ್ತು. ಅದಕ್ಕಾಗಿ ಅವರು ದಾವಣಗೆರೆಗೆ ಹೊರಟಿದ್ದರು.

**ಒಂದು ಫೋನ್ ಕರೆ:** ಬಿ. ವೈ ವಿಜಯೇಂದ್ರ ನೆಲಮಂಗಲ ಸಮೀಪ ದಲ್ಲಿರುವಾಗ ದೆಹಲಿಯಿಂದ ಹೈಕಮಾಂಡ್ ನಾಯಕರ ಕರೆ ಬಂದಿದೆ. ತಕ್ಷಣ ದೆಹಲಿಗೆ ಬರುವಂತೆ ಸೂಚನೆ ನೀಡಲಾಗಿದ್ದು, ಬಿ. ವೈ. ವಿಜಯೇಂದ್ರ ಬೆಂಗಳೂ ರಿಗೆ ವಾಪಸ್ ಆಗಿ, ದೆಹಲಿಗೆ ಪ್ರಯಾಣಿಸಿದ್ದಾರೆ. ಈ ದಿಢೀರ್ ದೆಹಲಿ ಭೇಟಿ ಕುತೂಹ ಲಕ್ಕೆ ಕಾರಣವಾಗಿದೆ. ಬಸನಗೌಡ ಪಾಟೀಲ್ ಯತ್ನಾಳ್, ರಮೇಶ್ ಜಾರಕಿಹೊಳಿ, ಕುಮಾರ್ ಬಂಗಾರಪ್ಪ, ಅರವಿಂದ ಲಿಂಬಾವಳಿ ಮುಂತಾದ ನಾಯಕರು ಕಳೆದ ವಾರ ದೆಹಲಿ ಭೇಟಿ ಕೈಗೊಂಡಿದ್ದರು. ಹೈಕಮಾಂಡ್ ನಾಯಕನ್ನು ಭೇಟಿ ಮಾಡಿ ಬಿ. ವೈ. ವಿಜಯೇಂದ್ರ ವಿರುದ್ಧ ದೂರು ನೀಡಿದ್ದರು. ದೆಹಲಿ ಭೇಟಿ ಬಳಿಕ ಮಾತನಾಡಿದ್ದ ಬಸನಗೌಡ ಪಾಟೀಲ್ ಯತ್ನಾಳ್ ಫೆಬ್ರವರಿ 10ರಂದು ಒಳ್ಳೆಯ ಸುದ್ದಿ ತಿಳಿಯಲಿದೆ ಎಂದು ಹೇಳಿದ್ದರು. ಆದ್ದರಿಂದ ಬಿ. ವೈ. ವಿಜಯೇಂದ್ರ ದೆಹಲಿ ಭೇಟಿ ಬಗ್ಗೆ, ಭಾರೀ ಚರ್ಚೆಗಳು ಆರಂಭವಾಗಿದೆ. ಮತ್ತೊಂದು ಕಡೆ ಮಾಜಿ ಸಚಿವ ಬಿ. ಶ್ರೀರಾಮುಲು ಕರ್ನಾಟಕದಲ್ಲಿ ಬಿಜೆಪಿ ಬಲಪಡಿಸಲು, ಒಡೆದ ಮನಸ್ಸುಗಳನ್ನು ಒಂದುಗೂಡಿಸಲು ರಾಜ್ಯಾದ್ಯಂತ ಯಾತ್ರೆ ಕೈಗೊಳ್ಳುವುದಾಗಿ ಘೋಷಣೆ ಮಾಡಿದ್ದಾರೆ. ಬಿ. ಶ್ರೀರಾಮುಲು ಪಕ್ಷದ ನಾಯಕರು, ಹೈಕಮಾಂಡ್ ವಿರುದ್ಧ ಅಸಮಾಧಾನಗೊಂಡಿದ್ದಾರೆ. ಬಿ. ಶ್ರೀರಾಮುಲು ಸೋಮವಾರ ದೆಹಲಿಗೆ ಭೇಟಿ ನೀಡಲಿದ್ದಾರೆ. ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ, ಕೇಂದ್ರ ಗೃಹ ಸಚಿವ ಅಮಿತ್ ಶಾ ಕರೆ ಮಾಡಿದರೂ ಸಹ ದೆಹಲಿಗೆ ಭೇಟಿ ನೀಡದ ಬಿ. ಶ್ರೀರಾಮುಲು ಈಗ ಸೋಮವಾರ ದೆಹಲಿಗೆ ತೆರಳುತ್ತೇನೆ ಎಂದು ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಬಳಿ ಹೇಳಿಕೊಂಡಿದ್ದಾರೆ.



**ಬಿಜೆಪಿಯಲ್ಲಿ ಕುತೂಹಲ**

## ಡಿಸಿಎಂ ಡಿಕೆಶಿ, ಪತ್ನಿ ಉಷಾ ಪುಣ್ಯಸ್ನಾನ

• ಉದಯವಾಹಿನಿ, ಬೆಂಗಳೂರು

ಉತ್ತರ ಪ್ರದೇಶ ಇಲ್ಲಿ ನಡೆಯುತ್ತಿರುವಂತ ಪ್ರಯಾಗ್ ರಾಜ್ ನಲ್ಲಿನ ಮಹಾ ಕುಂಭಮೇಳದಲ್ಲಿ ಕರ್ನಾಟಕದ ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಹಾಗೂ ಅವರ ಪತ್ನಿ ಉಷಾ ಪುಣ್ಯ ಸ್ನಾನ ಮಾಡಿದ್ದಾರೆ.

ಭಾನುವಾರ ಬೆಂಗಳೂರಿನಿಂದ ಕುಂಭಮೇಳಕ್ಕೆ ಆಗಮಿಸಿದ ಡಿಸಿಎಂ ಡಿ ಕೆ ಶಿವಕುಮಾರ್ ಹಾಗೂ ಅವರ ಪತ್ನಿ ಉಷಾ ಅವರನ್ನು ಉತ್ತರ ಪ್ರದೇಶ ಕೈಗಾರಿಕೆ ಸಚಿವ ನಂದಗೋಪಾಲ ಗುಪ್ತಾ ಅವರು ಪ್ರಯಾಗ್ ರಾಜ್ ವಿಮಾನ ನಿಲ್ದಾಣದಲ್ಲಿ ಬರ ಮಾಡಿಕೊಂಡರು.



ಅಲ್ಲಿಂದ ಉತ್ತರ ಪ್ರದೇಶದ ಪ್ರಯಾಗ್ ರಾಜ್ ನ ಕುಂಭಮೇಳಕ್ಕೆ ಡಿಸಿಎಂ ಡಿ ಕೆ ಶಿವಕುಮಾರ್ ಅವರು ಪತ್ನಿ ಉಷಾ ತೆರಳಿದರು. ಆ ಬಳಿಕ ಗಂಗಾ ನದಿಯಲ್ಲಿ ಡಿಸಿಎಂ ಡಿ.ಕೆ ಶಿವಕುಮಾರ್ ಹಾಗೂ ಅವರ ಪತ್ನಿ ಉಷಾ ಪುಣ್ಯಸ್ನಾನ ಮಾಡಿದರು.

## ಪಕ್ಷ ಒಗ್ಗೂಡಿಸಲು ರಾಜ್ಯದಾದ್ಯಂತ ಯಾತ್ರೆ

• ಉದಯವಾಹಿನಿ, ದಾವಣಗೆರೆ

ಮುಂಬರುವ ದಿನಗಳಲ್ಲಿ ಬಿಜೆಪಿ ಅಧಿಕಾರಕ್ಕೆ ತರಲು ಹಾಗೂ ಪಕ್ಷದ ಒಡೆದ ಮನಸುಗಳನ್ನು ಒಂದುಗೂಡಿಸಲು ರಾಜ್ಯದಾದ್ಯಂತ ಯಾತ್ರೆ ಹಮ್ಮಿಕೊಳ್ಳಲಾಗುವುದು ಎಂದು ಮಾಜಿ ಸಚಿವ ಬಿ. ಶ್ರೀರಾಮುಲು ತಿಳಿಸಿದರು. ಹರಿಹರ ತಾಲ್ಲೂಕಿನ ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದಲ್ಲಿ ಮಾಧ್ಯಮದ ಪ್ರತಿನಿಧಿಗಳೊಂದಿಗೆ ಮಾತನಾಡಿದರು. ರಾಜ್ಯದ ಎಲ್ಲಾ ಜಿಲ್ಲೆಯಲ್ಲಿ ಯಾತ್ರೆ ಮಾಡುವ ಸಂಬಂಧ ಅನೇಕರೊಂದಿಗೆ ಚರ್ಚೆ ನಡೆಸಿದ್ದೇನೆ. ಇದರಲ್ಲಿ ಯಾವುದೇ ಸ್ವಾರ್ಥ ಇಲ್ಲ ಬಿಜೆಪಿ ನಾಯಕರು ಹಾಗೂ ಸಂಘಪರಿವಾರದ ಸಂಘಟನೆಯ ಎಲ್ಲರೂ ಒಗ್ಗೂಡಬೇಕು ಎಂಬುದಷ್ಟೇ ನನ್ನ ಆಶಯ. ಈಯಾತ್ರೆಗೆ ಎಲ್ಲರೂ ಬರುತ್ತಾರೆ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯೆ ನೀಡಿದರು.

# ರಾಜ್ಯ ಸರ್ಕಾರ 10 ಕೆಜಿ ಅಕ್ಕಿ ನೀಡಲು ಮೀನ ಮೇಷ

## ಅನ್ನ ಭಾಗ್ಯ ಯೋಜನೆಯಡಿಯಲ್ಲಿ ಡಿಬಿಟಿ ಮುಖಾಂತರ ಹಣದ ಬದಲು ಅಕ್ಕಿ, ದಿನಬಳಕೆ ವಸ್ತುಗಳನ್ನು ನೀಡಲು ಒತ್ತಾಯ

• ವರದಿ ಉಮೇಶ್ ಬಾಣಾವರ

• ಉದಯವಾಹಿನಿ ಬೆಂಗಳೂರು

ಕರ್ನಾಟಕ ರಾಜ್ಯ ಸರ್ಕಾರವು ಬಡ ಮಧ್ಯಮ ವರ್ಗದ ಬಿಪಿಎಲ್ ಕುಟುಂಬಗಳಿಗೆ ಕೇಂದ್ರ ಸರ್ಕಾರ ನೀಡುತ್ತಿರುವ 5 ಕೆಜಿ ಅಕ್ಕಿಯನ್ನು ಮಾತ್ರ ನೀಡುತ್ತಿದ್ದು ರಾಜ್ಯ ಸರ್ಕಾರದ 5 ಕೆಜಿ ಅಕ್ಕಿಯ ಬದಲು ಕುಟುಂಬದ ಸದಸ್ಯರೊಬ್ಬರಿಗೆ 170 ರೂಗಳಂತೆ ಹಣ ನೀಡುತ್ತಿದ್ದು ಈ ಹಣವು ಕೂಡ ಕಳೆದ ಮೂರು ನಾಲ್ಕು ತಿಂಗಳಿಂದ ಸರಿಯಾಗಿ ಬಿಪಿಎಲ್ ಕುಟುಂಬದ ಸದಸ್ಯರಿಗೆ ಹಣ ಜಮಾ ಆಗದೆ ತುಂಬಾ ತೊಂದರೆಯಾಗಿರುತ್ತದೆ ಕೇಂದ್ರ ಸರ್ಕಾರವು ಕಡಿಮೆ ಬೆಲೆಯಲ್ಲಿ ಪಡಿತರ ಅಕ್ಕಿಯನ್ನು ನೀಡಲು ಸಿದ್ದರಿದ್ದರು ಸಹ ರಾಜ್ಯ ಸರ್ಕಾರವು ಡಿಬಿಟಿ ಮುಖಾಂತರ ಹಣ ನೀಡುತ್ತಿರುವುದರಿಂದ ಸರ್ಕಾರಕ್ಕೆ ಹೆಚ್ಚುವರಿಯಾಗಿ ಹಣ ವೆಚ್ಚವಾಗುತ್ತಿದೆ ಕೇಂದ್ರ ಸರ್ಕಾರವು 22. 80 ರೂಗೆ ಅಕ್ಕಿಯನ್ನು ನೀಡಲು ಸಿದ್ಧವಿದ್ದರೂ ಸಹ ರಾಜ್ಯ ಸರ್ಕಾರ 10 ಕೆಜಿ ಅಕ್ಕಿಯನ್ನು ನೀಡಲು ಮೀನ ಮೇಷ ಎಣಿಸುತ್ತಿರುವುದು ಸರಿಯಲ್ಲ ಬರುವ ದಿನಗಳಲ್ಲಿ ರಾಜ್ಯದಲ್ಲಿ ಜಿಲ್ಲಾ ಪಂಚಾಯತ್ ತಾಲ್ಲೂಕು ಪಂಚಾಯಿತಿ ಚುನಾವಣೆ ಸಮೀಪಿಸುತ್ತಿದ್ದು 10 ಕೆಜಿ ಅಕ್ಕಿಯನ್ನು ಬಿಪಿಎಲ್ ಕುಟುಂಬದ ಸದಸ್ಯರಿಗೆ ನೀಡಿದರೆ ಸರ್ಕಾರಕ್ಕೂ ಸಹ ಸಾವಿರಾರು ಕೋಟಿ ಉಳಿತಾಯವಾಗುತ್ತದೆ ಇದಲ್ಲದೆ ರಾಜ್ಯ ಸರ್ಕಾರವೇ ಸಹ ಈ ಹಿಂದೆ ಬಿಪಿಎಲ್ ಕಾರ್ಡ್‌ದಾರರ ಸಮೀಕ್ಷೆ ನಮ್ಮ ನಡೆಸಿ ಸಮೀಕ್ಷೆಯಲ್ಲಿ ಶೇಕಡ 98 ರಷ್ಟು ಕಾರ್ಡುದಾರರು ಡಿ ಬಿ ಟಿ ಹಣ ಬೇಡ ಅಕ್ಕಿಯನ್ನು ನೀಡಬೇಕೆಂದು ಸಮೀಕ್ಷೆಯನ್ನು ತಿಳಿಸಿರುವುದು ಸಮೀಕ್ಷಾ ವರದಿಯು ಸರ್ಕಾರದ ಬಳಿ ಇದೆ ಈ ಎಲ್ಲಾ ಅಂಶಗಳನ್ನು ಗಮನಿಸಿ ರಾಜ್ಯದಲ್ಲಿ ಬಡ ಕುಟುಂಬದವರಿಗೆ ಅನುಕೂಲವಾಗಿ ಸರ್ಕಾರಕ್ಕೂ ಸಹ ಸಿಎಂ ಸಿದ್ದರಾಮಯ್ಯನವರು ಜನರಿಂದ ಅನ್ನರಾಮಯ್ಯ ಎಂಬ ಖ್ಯಾತಿಯನ್ನು ಪಡೆದಿದ್ದು ಸಾಮಾಜಿಕ ಕಳಕಳಿ ಉಳ್ಳ ಮುಖ್ಯಮಂತ್ರಿಗಳು, ಆಹಾರ ಸಚಿವರು ಬರುವ ಬಜೆಟ್ ಅಧಿವೇಶನ ದಲ್ಲಿ ರಾಜ್ಯದ ಬಿಪಿಎಲ್ ಕಾರ್ಡ್‌ದಾರರಿಗೆ 10 ಕೆಜಿ ಅಕ್ಕಿಯನ್ನು ನೀಡುವುದರ ಜೊತೆಗೆ ಬೇಳೆ ಸೋಪು ಸಕ್ಕರೆ, ಅಡಿಗೆ ಎಣ್ಣೆಯನ್ನು ನೀಡಲು ಘೋಷಣೆ ಮಾಡಬೇಕೆಂದು ರಾಜ್ಯದ ಪಡಿತರ ಕಾರ್ಡ್‌ದಾರರ ಅಭಿಪ್ರಾಯವಾಗಿದೆ ಎಂದು ಉದಯವಾಹಿನಿ ಪತ್ರಿಕೆಯು ಸಹ ಸರ್ಕಾರದ ಗಮನಸೆಳೆಯಲು ಇಚ್ಛಿಸಿದೆ.




### ರಾಜ್ಯ ಪಡಿತರ ವಿತರಕರ ಸಂಘದ ಅಧ್ಯಕ್ಷ, ರಾಷ್ಟ್ರೀಯ ಕಾರ್ಯಾಧ್ಯಕ್ಷಕೃಷ್ಣಪ್ಪ ಪ್ರತಿಕ್ರಿಯೆ



ಕೃಷ್ಣಪ್ಪ ಉದಯವಾಹಿನಿ ಯೊಂದಿಗೆ ಮಾತನಾಡಿ ರಾಜ್ಯದಲ್ಲಿ ಪಡಿತರ ಕಾರ್ಡ್‌ದಾರರಿಗೆ ಹೆಚ್ಚುವರಿಯಾಗಿ ಅಕ್ಕಿ ಬೇಳೆ ಸೋಪು ಸಕ್ಕರೆ ಅಡುಗೆ ಎಣ್ಣೆಯನ್ನು ನೀಡಬೇಕು ಇದನ್ನು ಬರುವ ಬಜೆಟ್ ಅಧಿವೇಶನದಲ್ಲಿ ಘೋಷಿಸಬೇಕೆಂದು ಈಗಾಗಲೇ ಪಡಿತರ ವಿತರಕರ ಸಂಘದ ವತಿಯಿಂದ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಮತ್ತು ಆಹಾರ ಸಚಿವ ಕೆ ಹೆಚ್ ಮುನಿಯಪ್ಪ ನವರಿಗೆ ಮತ್ತು ಆಹಾರ ಇಲಾಖೆ ಕಾರ್ಯದರ್ಶಿಯವರನ್ನು ಸಹ ಭೇಟಿ ಮಾಡಿ ನಮ್ಮ ಸಂಘದ ವತಿಯಿಂದ ಮನವಿ ಸಲ್ಲಿಸಲಾಗಿದ್ದು ಇದರಿಂದ ಡಿ ಬಿ ಟಿ ಮುಖಾಂತರ ನೀಡುವ ಹಣದ ಬದಲು ಅಕ್ಕಿ ಮತ್ತು ದಿನಬಳಕೆ ವಸ್ತುಗಳನ್ನು ನೀಡಿದರೆ ಸರ್ಕಾರಕ್ಕೆ ಸಾವಿರಾರು ಕೋಟಿ ರೂ ಹಣ ಉಳಿಕೆಯಾಗುತ್ತದೆ ಆದ್ದರಿಂದ ಬರುವ ಬಜೆಟ್ ಅಧಿವೇಶನದಲ್ಲಿ ಹೆಚ್ಚುವರಿ 5 ಕೆ.ಜಿ ಅಕ್ಕಿ ಜೊತೆಗೆ ಬೇಳೆ ಸೋಪು ಸಕ್ಕರೆ ಹಾಗೂ ಅಡಿಗೆ ಎಣ್ಣೆಯನ್ನು ನೀಡುವಂತೆ ಘೋಷಣೆ ಮಾಡಿದರೆ ಸರ್ಕಾರಕ್ಕೂ ಸಹ ಉತ್ತಮ ಹೆಸರು ಬರುತ್ತದೆ ಹಣವು ಉಳಿತಾಯವಾಗುತ್ತದೆ ಎಂದು ಕರ್ನಾಟಕ ರಾಜ್ಯ ಪಲಿತರ ವಿತರಕರ ಸಂಘದ ಅಧ್ಯಕ್ಷ, ಕಾರ್ಯಾಧ್ಯಕ್ಷ ಕೃಷ್ಣಪ್ಪ ಉದಯವಾಹಿನಿ ಪತ್ರಿಕೆಗೆ ಪ್ರತಿಕ್ರಿಯಿಸಿದ್ದಾರೆ.

**ಈ ದಿನದ ದರ** ಪೆಟ್ರೋಲ್: 103.50 ₹/L | ಡೀಸೆಲ್ : 90.03 ₹/L | ಬಂಗಾರ: ₹8,667/Gram24ct ₹7,945/Gram22ct | ಬೆಳ್ಳಿ: ₹99.50/Gram



## ಸಿದ್ಧಸೂಕ್ತಿ

**ಡಾ ಆರೂಢಭಾರತೀ ಸ್ವಾಮೀಜಿ**
ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ
ರಾಮೋಹಳ್ಳಿ

# ಗಂಗೆಯಲ್ಲಿ ಮಿಂದೆದ್ದರೆ ಬಡತನ ತೊಲಗುವುದೇ?

ಭೂಮಿ ಜಲಗಳನ್ನು ಮಾತೆ ಎನ್ನುತ್ತೇವೆ. ವಾಯು ಆಕಾಶ ಅಗ್ನಿಗಳನ್ನು ದೇವರೆನ್ನುತ್ತೇವೆ. ಮಾನವನಿಗೆ ಮಾತ್ರವಲ್ಲ ಸಕಲ ಜೀವಿಗಳಿಗೂ ಈ ಐದು ಬೇಕೇಬೇಕು. ಇವುಗಳಿಗೆ ಕೃತಜ್ಞತೆ ತೋರಲು ಪೂಜಿಸುತ್ತೇವೆ, ಮಿಂದೇಳುತ್ತೇವೆ. ಇಂಥವುಗಳಿಂದ ಹೊಟ್ಟೆ ತುಂಬುತ್ತದೆ, ಬಟ್ಟೆ ದೊರಕುತ್ತದೆ, ಬಡತನ ತೊಲಗುತ್ತದೆ, ಕೆಲಸ ಮಾಡದೇ ಆರಾಮಾಗಿ ಇರಬಹುದು ಎಂದಲ್ಲ. ಭಾವ ಶುದ್ಧ ಸಂತೃಪ್ತವಾಗುತ್ತದೆ. ಬದುಕೆಂದರೆ ಕಾಣುವ ದೇಹದ ಸಂರಕ್ಷಣೆಮಾತ್ರ ಎಂದಲ್ಲ. ಹಾರ್ಡವೇರ್ ದೇಹದಲ್ಲಿನ ಸಾಫ್ಟ್‌ವೇರ್ ಚೈತನ್ಯದ ಸಂತೃಪ್ತಿ ಅದಕ್ಕಿಂತಲೂ ಮುಖ್ಯ. ಈ ಸಂತೃಪ್ತಿ ಪದಾರ್ಥಗಳನ್ನೇ ಅವಲಂಬಿಸಿಲ್ಲ. ಬದಲಾಗಿ ಭಾವನೆಗಳನ್ನವಲಂಬಿಸಿದೆ. ಭಾವ ಪೂರಕವಾದರೆ ಮಿತ್ರ ಸಂಬಂಧಿ, ವಿರೋಧವಾದರೆ ಶತ್ರು ಅಸಂಬಂಧಿ. ದೀಪ ಬೆಳಗುವಾಗ ಉಳಿದವರು ಬೆಳಗುವಾತನ/ಳ ಕೈ ಹಿಡಿಯುವರು. ತಾವೇ ಬೆಳಗಿದ ಸಂತೃಪ್ತಿ! ಸತ್ತವರಿಗೆ ತಿಥಿ ಮಾಡಿ ನೈವೇದ್ಯ ಅರ್ಪಿಸುವರು. ಸತ್ತವರೇನು ತಿನ್ನುವರೇ? ಇಲ್ಲಿಟ್ಟ ಊಟವನ್ನು ಅಲ್ಲಿರುವ ಬದುಕಿರುವವರೇ ಉಣಲಾಗದು. ಆದರೂ ಅವರಿಗೆ ನೈವೇದ್ಯ ನಮ್ಮ ಕರ್ತವ್ಯ ಕೃತಜ್ಞತೆ ಸಂತೃಪ್ತಿಗಾಗಿ. ಮೊನ್ನೆ ಬೆಂಗಳೂರಿನ ಅರಮನೆಯ ಆವರಣದಲ್ಲಿ ನಡೆದ ಶಾಸಕರ ಮಗಳ ಮದುವೆಗೆ ಹೋಗಿದ್ದೆ. ನೆರೆದವರೆಲ್ಲ ಬಹುದೂರದಿಂದ ಅಕ್ಷತೆ ಹಾಕಿದೆವು. ಕೆಳಗಿದ್ದ ಸಮೂಹದವರ ಯಾವ ಅಕ್ಷತೆಯೂ ವಧೂವರರ ತಾಗಲಿಲ್ಲ. ಆದರೂ ಅಕ್ಷತೆ ಹಾಕಿದ ಪಡೆದ ಸಂತೃಪ್ತಿ!

# ದಕ್ಷಿಣದ ಮೇಲೆ ಹಿಂದಿ ಹೇರಿಕೆ: ಇದಕ್ಕಿಂತ ಸಾಕ್ಷಿ ಬೇಕಾ ಎಂದ ನೆಟ್ಟಿಗರು!

## ■ ಎಚ್.ಡಿ ಕುಮಾರಸ್ವಾಮಿ ಅವರು ಈ ಹಿಂದೆ ಹಿಂದಿ ಹೇರಿಕೆಗೆ ವಿರೋಧ ವ್ಯಕ್ತಪಡಿಸಿದ್ದರು

• **ಉದಯವಾಹಿನಿ, ಬೆಂಗಳೂರು**

ಕೇಂದ್ರ ಸಚಿವ ಎಚ್.ಡಿ ಕುಮಾರಸ್ವಾಮಿ ಅವರು ಹಿಂದಿ ಕಲಿಯುವುದಕ್ಕೆ ಶುರು ಮಾಡಿಕೊಂಡಿದ್ದಾರೆ ಎನ್ನುವ ವಿಷಯ ಚರ್ಚೆಯಾಗುತ್ತಿದೆ. ಇದರ ನಡುವೆಯೇ ಈ ಹಿಂದೆ ಅವರು ಹಿಂದಿಯ ಬಗ್ಗೆ ಹೇಳಿದ್ದ ಟ್ವೀಟ್ ವೈರಲ್ ಆಗುತ್ತಿದೆ. ದಕ್ಷಿಣ ಭಾರತದ ರಾಜ್ಯಗಳ ಮೇಲೆ ಹಾಗೂ ಇಲ್ಲಿನ ರಾಜಕಾರಣಿಗಳು ಉನ್ನತ ಸ್ಥಾನ ತಲುಪಿದರೂ ಹೇಗೆ ಅನಿವಾರ್ಯವಾಗಿ ಹಿಂದಿ ಕಲಿಯುವಂತೆ ಮಾಡಲಾಗುತ್ತಿದೆ ಎನ್ನುವ ಟ್ವೀಟ್ ವೈರಲ್ ಆಗುತ್ತಿದೆ.

ಎಚ್.ಡಿ ಕುಮಾರಸ್ವಾಮಿ ಅವರು ಈ ಹಿಂದೆ ಹಿಂದಿ ಹೇರಿಕೆಗೆ ವಿರೋಧ ವ್ಯಕ್ತಪಡಿಸಿದ್ದರು. ಇದೀಗ ಆ ಟ್ವೀಟ್‌ಗಳು ವೈರಲ್ ಆಗಿದ್ದು, ಕೇಂದ್ರ ಸರ್ಕಾರ ಯಾವ ರೀತಿ ಹಿಂದಿ ಅನಿವಾರ್ಯತೆಯನ್ನು ಸೃಷ್ಟಿ ಮಾಡಿದೆ ಇನ್ನುವುದನ್ನು ತೋರಿಸುತ್ತದೆ ಎಂದು ನೆಟ್ಟಿಗರು ಹೇಳಿದ್ದಾರೆ. ಹಿಂದಿ ಹೇರಿಕೆಯ ಬಗ್ಗೆ ಪದೇ ಪದೇ ಚರ್ಚೆಯಾಗುತ್ತಲೇ ಇರುತ್ತದೆ. ಕರ್ನಾಟಕದಲ್ಲಿ ಹಿಂದಿ ಹೇರಿಕೆಯ ಬಗ್ಗೆ ಚರ್ಚೆಯಾಗುತ್ತಿರುವಾಗಲೇ ಕೇಂದ್ರ ಸಚಿವ ಎಚ್.ಡಿ ಕುಮಾರಸ್ವಾಮಿ ಅವರು ಹಿಂದಿ ಕಲಿಕೆಯ ವಿಷಯ ಮುನ್ನೆಲೆಗೆ ಬಂದಿದೆ. ಸೋಷಿಯಲ್ ಮೀಡಿಯಾದಲ್ಲಿ ಈ ಬಗ್ಗೆ ಪರ - ವಿರೋಧ ಚರ್ಚೆ ನಡೆಯುತ್ತಿದೆ. ಅದೇನು ಎನ್ನುವ ವಿವರ ಇಲ್ಲಿದೆ. ಸೋಷಿಯಲ್ ಮೀಡಿಯಾ ಎಕ್ಸ್‌ನಲ್ಲಿ ಟ್ವೀಟ್ ಮಾಡಿರುವ ರವಿ ಅವರು, ಈ ಹಿಂದೆ ಹಿಂದಿ ಹೇರಿಕೆಯ ಬಗ್ಗೆ ಎಚ್.ಡಿ ಕುಮಾರಸ್ವಾಮಿ ಆಕ್ಷೇಪ ವ್ಯಕ್ತಪಡಿಸಿದ್ದರು. ಆದರೆ, ಇಂದು ಅದೇ ಕೇಂದ್ರ ಸಚಿವರು ಹಿಂದಿ ಕಲಿಕೆಗೆ ಮುಂದಾಗಿದ್ದಾರೆ. ಹಿಂದಿ ರಾಜ್ಯಗಳಲ್ಲಿ ಸಂವಹನಕ್ಕೆ ಹಿಂದಿ ಕಲಿಯುತ್ತಿರುವುದಾಗಿ ಅವರು ಹೇಳಿಕೊಂಡಿದ್ದಾರೆ. ಆದರೆ ಕೇಂದ್ರದ ಹಿಂದಿ ಮಾತನಾಡುವ ಒಬ್ಬ ಬಬ್ಬರು ಸಚಿವರಾದರೂ ಕನ್ನಡದ ಒಂದು ಪದವನ್ನು ಕಲಿಯಲು ಪ್ರಯತ್ನಿಸಿಲ್ಲ ಎನ್ನುವುದನ್ನು ಎಚ್.ಡಿ ಕುಮಾರಸ್ವಾಮಿ ಅವರು ಮರೆತಂತೆ ತೋರುತ್ತದೆ ಎಂದಿದ್ದಾರೆ.

ಭಾರತ ಹಿಂದಿಗೆ ಆದ್ಯತೆ ನೀಡುತ್ತದೆ. ಆದರೆ ಹಿಂದಿಯೇತರ ಭಾಷೆಗಳು ಅಪಾಯದ ಅಂಚಿನಲ್ಲಿವೆ ಎಂಬುದನ್ನು ಇದು ಸ್ಪಷ್ಟವಾಗಿ ತೋರಿಸುತ್ತದೆ. #HindiImposition

### ಹಿಂದಿ ಕಲಿಯುತ್ತಿರುವ ವಿ. ಸೋಮಣ್ಣ

ಇನ್ನು ಕೇಂದ್ರ ಸಚಿವ ವಿ.ಸೋಮಣ್ಣ ಅವರು ಸಹ ಹಿಂದಿ ಕಲಿಯುತ್ತಿರುವುದಾಗಿ ಈಚೆಗೆ ಹೇಳಿದ್ದರು. ನಿತ್ಯವೂ ಒಂದು ತಾಸು ಹಿಂದಿ ಕಲಿಯತ್ತಿರುವುದಾಗಿ ಅವರು ಹೇಳಿದ್ದರು. ಇದೀಗ ಎಚ್.ಡಿ ಕುಮಾರಸ್ವಾಮಿ ಅವರು ಹಿಂದಿ ಕಲಿಯುವುದಕ್ಕೆ ಶುರು ಮಾಡಿಕೊಂಡಿದ್ದಾರೆ.

**ಕರ್ನಾಟಕದಲ್ಲಿ ಹಿಂದಿ ಹೇರಿಕೆಯ ಬಗ್ಗೆ ಚರ್ಚೆ**



**ನನಗೂ ಇದೇ ರೀತಿಯ ಅನುಭವಗಳಾಗಿವೆ. ನಾನು ಎರಡು ಬಾರಿ ಲೋಕಸಭಾ ಸದಸ್ಯನಾಗಿದ್ದೆ. ಆಡಳಿತ ವರ್ಗವು ದಕ್ಷಿಣ ಭಾರತವನ್ನು ತಿರಸ್ಕಾರ ಮನೋಭಾವದಿಂದ ನೋಡುತ್ತದೆ. ಹಿಂದಿ ರಾಜಕಾರಣಿಗಳು ಹೇಗೆ ತಂತ್ರಗಳನ್ನು ಬಳಸುತ್ತಾರೆ ಎಂಬುದನ್ನು ನಾನು ಹತ್ತಿರದಿಂದ ನೋಡಿದ್ದೇನೆ. ಅವರಲ್ಲಿ ಹೆಚ್ಚಿನವರು ಹಿಂದಿಯೇತರ ರಾಜಕಾರಣಿಗಳನ್ನು ಗೌರವಿಸುವುದಿಲ್ಲ ಎಂದೂ ಅವರು ಹೇಳಿದ್ದರು.**

ಪೂರ್ಣ ಪ್ರಮಾಣದಲ್ಲಿ ನಡೆಯುತ್ತಿದೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ. ಕೇಂದ್ರ ಸಚಿವ ಎಚ್.ಡಿ ಕುಮಾರಸ್ವಾಮಿ ಅವರು ಈ ಹಿಂದೆ ಹಿಂದಿ ಹೇರಿಕೆಯನ್ನು ವಿರೋಧಿಸಿ ಸರಣಿ ಟೀಟ್ ಮಾಡಿದ್ದರು. ಹಿಂದಿ ರಾಜಕೀಯವು ಅನೇಕ ದಕ್ಷಿಣ ಭಾರತೀಯರು ಪ್ರಧಾನಿಯಾಗುವುದನ್ನು ತಡೆಯುತ್ತಿದೆ. ಎಚ್.ಡಿ ದೇವೇಗೌಡ ಅವರು, ಕರುಣಾನಿಧಿ ಮತ್ತು ಕಾಮರಾಜ್ ಅವರು ಇದರಲ್ಲಿ ಪ್ರಮುಖರು, ದೇವೇಗೌಡ ಅವರು ಈ ತಡೆಗೋಡೆಯನ್ನು ಬೀಳಿಸುವಲ್ಲಿ ಯಶಸ್ವಿಯಾದರೂ, ಭಾಷೆಯ ಕಾರಣಕ್ಕಾಗಿ ಅವರನ್ನು ಟೀಕಿಸಿದ ಮತ್ತು ಅಪಹಾಸ್ಯ ಮಾಡಿದ ಹಲವು ಘಟನೆಗಳು ನಡೆದಿವೆ ಎಂದಿದ್ದರು.

# ಬೆಂಗಳೂರಿನಲ್ಲಿ ಕಾರ್ಮಿಕನಿಂದಲೇ ಲಾರಿ ಮಾಲೀಕನ ಬರ್ಬರ ಹತ್ಯೆ

• **ಉದಯವಾಹಿನಿ,ಬೆಂಗಳೂರು**

ಬೆಂಗಳೂರಿನಲ್ಲಿ ಕಾರ್ಮಿಕನೊಬ್ಬ ಲಾರಿ ಮಾಲೀಕನನ್ನೇ ಬರ್ಬರವಾಗಿ ಹತ್ಯೆಗೈದಿರುವ ಘಟನೆ ನಡೆದಿದೆ. ಮೊಹಬೂಬ್ ಕೊಲೆಯಾಗಿರುವ ಲಾರಿ ಮಾಲಿಕ. ಮೆಹಬೂಬ್ ಅವರನ್ನು ಚಾಕುವಿನಿಂದ ಇರಿದು ಕಾರ್ಮಿಕ ಖಾಲಿಯಾ ಹತ್ಯೆಗೈದು ಪರಾರಿಯಾಗಿದ್ದಾನೆ. ತಮಿಳುನಾಡು ಮೂಲದ ಆರೋಪಿ ಖಾಲಿಯಾ, ಮೆಹಬೂಬ್ ಬಳಿ ಕೆಲಸಕ್ಕಿದ್ದ. ಎರಡು ದಿನಗಳ ಹಿಂದೆ ಖಾಲಿಯಾ ಹಾಗೂ ಮೆಹಬೂಬ್ ನಡುವೆ ಜಗಳವಾಗಿತ್ತು. ಇಂದು ಭೇಟಿಗೆಂದು ಬಂದ ಖಾಲಿಯಾ ಏಕಾಏಕಿ ಮೆಹಬೂಬ್ ಅವರನ್ನು ಚಾಕುವಿನಿಂದ ಇರಿದು ಹತ್ಯೆಗೈದು ಪರಾರಿಯಾಗಿದ್ದಾನೆ. ಸಂಪಿಗೇನಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ. ಆರೋಪಿ ಪತ್ತೆಗಾಗಿ ಪೊಲೀಸರು ಶೋಧ ನಡೆಸಿದ್ದಾರೆ.

# ನಡು ರಸ್ತೆಯಲ್ಲಿಯೇ ಹೊತ್ತಿ ಉರಿದ ಕಾರು ಕೂದಲೆಳೆಯ ಅಂತರದಲ್ಲಿ ಚಾಲಕ ಪಾರು!

• **ಉದಯವಾಹಿನಿ,ಬೆಂಗಳೂರು**

ನಡು ರಸ್ತೆಯಲ್ಲಿಯೇ ಕಾರೊಂದು ಹೊತ್ತಿ ಉರಿದ ಘಟನೆ ಬೆಂಗಳೂರಿನ ದೊಮ್ಮಲೂರಲ್ಲಿ ಜರುಗಿದೆ. ಅದೃಷ್ಟವಶಾತ್ ಕೂದಲೆಳೆಯ ಅಂತರದಲ್ಲಿ ಚಾಲಕ ಬಚಾವ್ ಆಗಿದ್ದಾನೆ. ನಿನ್ನೆ ರಾತ್ರಿ 8 ಗಂಟೆಯ ಸುಮಾರಿಗೆ ಈ ಘಟನೆ ಸಂಭವಿಸಿದೆ. ಘಟನೆಯಿಂದ ಟಾಟಾ ನೆಕ್ಸಾನ್ ಎಲೆಕ್ಟ್ರಿಕ್ ಕಾರು ಧಗ ಧಗಿಸಿದೆ. ಚಾಲಕ ಇಳಿದು ಹೋದ ಕೆಲ ನಿಮಿಷದಲ್ಲಿಯೇ ಕಾರು ಹೊತ್ತಿ ಉರಿದಿದೆ.

# ಕಲ್ಯಾಣಿಯಲ್ಲಿ ಈಜಲು ಹೋಗಿ ನೀರು ಪಾಲಾದ ಇಬ್ಬರು ಯುವಕರು!

• **ಉದಯವಾಹಿನಿ,ಬೆಂಗಳೂರು**

ಕಲ್ಯಾಣಿಯಲ್ಲಿ ಈಜಲು ಹೋಗಿ ಇಬ್ಬರು ವಿದ್ಯಾರ್ಥಿಗಳು ನೀರುಪಾಲಾಗಿರುವ ಘಟನೆ ಬನ್ನೇರುಘಟ್ಟ ಸಮೀಪದ ಸುವರ್ಣಮುಖಿ ಕಲ್ಯಾಣಿಯಲ್ಲಿ ಜರುಗಿದೆ. ದೀಪು (20), ಯೋಗಿಶ್ವರನ್ (20) ಮೃತ ವಿದ್ಯಾರ್ಥಿಗಳು. ಹೆಬ್ಬಗೋಡಿಯ ಕಾಲೇಜುವೊಂದರ ಐವರು ವಿದ್ಯಾರ್ಥಿಗಳು ಬನ್ನೇರುಘಟ್ಟ ಸುವರ್ಣಮುಖಿ ಕಲ್ಯಾಣಿಗೆ ಈಜಲು ತೆರಳಿದ್ದರು. ಈ ಪೈಕಿ ದೀಪು, ಯೋಗೀಶ್ವರನ್‌ಗೆ ಈಜಲು ಆಗದೆ ಪರಾದಾಟ ನಡೆಸಿದ್ದಾರೆ. ಕೆಲಕಾಲ ಜೀವ ಉಳಿಸಿಕೊಳ್ಳಲು ಹೋರಾಟ ನಡೆಸಿದ ವಿದ್ಯಾರ್ಥಿಗಳು ನೀರಿನಲ್ಲಿ ಮುಳುಗಿ ಕೊನೆಯುಸಿರೆಳೆದಿದ್ದಾರೆ. ವಿದ್ಯಾರ್ಥಿಗಳು ಮುಳುಗುತ್ತಿದ್ದ ವೇಳೆ ರಕ್ಷಣೆ ಮಾಡಲು ಸಾಧ್ಯವಾಗದೇ ಉಳಿದ ಸ್ನೇಹಿತರು ಪರದಾಡಿದ್ದಾರೆ. ಈಜಲು ಬಾರದೇ ಒಬ್ಬರಾದ ಮೇಲೆ ಒಬ್ಬರಂತೆ ನೀರಿನಲ್ಲಿ ಮುಳುಗಿ ಸ್ನೇಹಿತರ ಕಣ್ಣೆದುರೇ ಇಬ್ಬರು ವಿದ್ಯಾರ್ಥಿಗಳು ಮೃತಪಟ್ಟಿದ್ದಾರೆ

# ಹಳದಿ ಕಾಮಗಾರಿ ಪೂರ್ಣ: ಹಳಿಗೆ ಒಂದೊಂದೇ ಮೆಟ್ರೋಬೋಗಿ ಎಂಟ್ರಿ

• **ಉದಯವಾಹಿನಿ,ಬೆಂಗಳೂರು**

ನಮ್ಮ ಮೆಟ್ರೋ ಹಳದಿ ಮೆಟ್ರೋ ಕಾಮಗಾರಿ ಪೂರ್ಣ ಹಿನ್ನೆಲೆ ಒಂದೊಂದೇ ಮೆಟ್ರೋಬೋಗಿ ಹಳಿಗೆ ಎಂಟ್ರಿ ಕೊಡುತ್ತಿವೆ. ಹಳದಿ ಮಾರ್ಗಕ್ಕೆ ಇನ್ನೆರಡು ಮೆಟ್ರೋ ಬೋಗಿ ಆಗಮಿಸಿದ್ದು, ರಸ್ತೆ ಮೂಲಕವಾಗಿ BMRCL ಹಳದಿ ಮಾರ್ಗದ ಮೆಟ್ರೋ ಬೋಗಿ ತರೆಸಿಕೊಂಡಿದೆ.

ಹಳದಿ ಮಾರ್ಗದ ಕೊನೆಯ ಪರೀಕ್ಷಾರ್ಥ ಕಾಮಗಾರಿ ಬಾಕಿ ಉಳಿದಿವೆ. ಬಾಕಿ ಇರುವಾಗಲೇ ಎರಡು ಬೋಗಿಗಳು ಬೆಂಗಳೂರಿಗೆ ಎಂಟ್ರಿ ಕೊಟ್ಟಿವೆ. ನಮ್ಮ ಮೆಟ್ರೋ, ಮಾರ್ಚ್‌ಗೆ ಸಿಗ್ನಲಿಂಗ್ ಪರೀಕ್ಷೆ ಪೂರ್ಣಗೊಳಿಸಲಿವೆ. ಮಾರ್ಚ್ ಮೊದಲ ವಾರದಿಂದ ಇತರೆ ರೈಲು ಪರೀಕ್ಷೆಗಳು ಪ್ರಾರಂಭವಾಗಲಿದೆ. ಮೂರನೇ ರೈಲಿನ ಬೋಗಿ ಮಾರ್ಚ್ 2025 ರ ಅಂತ್ಯದಲ್ಲಿ ಆಗಮಿಸಲಿದೆ. ಈ ಬಗ್ಗೆ BMRCL ಅಧಿಕಾರಿಗಳಿಂದ ಮಾಹಿತಿ ನೀಡಿದೆ.

# ಸಿಎಂ ಕುಟುಂಬವೇ ಸಂತ್ರಸ್ತರು ಎಂದ ಲೋಕಾ- ವರದಿಯಲ್ಲಿ ಏನಿದೆ?

• **ಉದಯವಾಹಿನಿ,ಬೆಂಗಳೂರು**

ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ಸಿದ್ದರಾಮಯ್ಯ ಕುಟುಂಬವೇ ಸಂತ್ರಸ್ತರು ಎಂದು ಲೋಕಾಯುಕ್ತ ತಿಳಿಸಿದೆ. ಸಿಎಂ, ಕುಟುಂಬದ ವಿರುದ್ಧದ ಮುಡಾ ಪ್ರಕರಣಕ್ಕೆ ಸಂಬಂಧಿಸಿದಂತೆ ಲೋಕಾಯುಕ್ತ ಅಂತಿಮ ವರದಿ ತಯಾರಿಸಿದ್ದು, ಇದರಲ್ಲಿನ ಸ್ಫೋಟಕ ಅಂಶಗಳು ಲಭ್ಯವಾಗಿದೆ.

ಮೈಸೂರಿನ ಕೆಸರೆಯಲ್ಲಿನ ತಮ್ಮ ಜಮೀನಿಗೆ ಬದಲಿಯಾಗಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ವಿಜಯನಗರದ 3 ಮತ್ತು 4ನೇ ಹಂತಗಳಲ್ಲಿ ವಿವಿಧ ಅಳತೆಯಲ್ಲಿ ಸಿಎಂ ಕುಟುಂಬಕ್ಕೆ 14 ನಿವೇಶನಗಳನ್ನ ಹಂಚಿಕೆ ಮಾಡಿತ್ತು. ಇದರಲ್ಲಿ ಅಕ್ರಮ ನಡೆದಿದೆ ಎಂದು ಪ್ರಕರಣ ದಾಖಲಾದ ಬಳಿಕ ಹೈಕೋರ್ಟ್ ಲೋಕಾಯುಕ್ತ ತನಿಖೆಗೆ ನೀಡಿತ್ತು. ಇದೀಗ ತನಿಖೆ ನಡೆಸಿದ 'ಲೋಕಾ' ಅಂತಿಮ ವರದಿ ತಯಾರಿಸಿದ್ದು, ಸಿಎಂ ಕುಟುಂಬವೇ ಸಂತ್ರಸ್ತರು ಎಂದು ಉಲ್ಲೇಖಿಸಿದೆ ಎನ್ನಲಾಗಿದೆ.

ಮುಡಾದ ಮಾಜಿ ಆಯುಕ್ತ ನಟೇಶ್ ಈ ಪ್ರಕರಣ ಪ್ರಮುಖ ಆರೋಪಿ.

ಭೂ ಮಾಲೀಕ ಎನ್ನಲಾದ ದೇವರಾಜು ಭೂಮಿ ಮಾರುವಾಗ ಸಾಕಷ್ಟು ಮಾಹಿತಿ ಮುಚ್ಚಿಟ್ಟಿದ್ರು ಭೂಮಿಯನ್ನು ಮುಡಾ ವಶಕ್ಕೆ ಪಡೆದಿದ್ದ ಮಾಹಿತಿಯನ್ನೂ ಮುಚ್ಚಿಟ್ಟಿದ್ರು. ಈ ವಿಷಯ ತಿಳಿಯದೇ ಮಲ್ಲಿಕಾರ್ಜುನ್ ದೇವರಾಜು ಬಳಿಯಲ್ಲಿ ಜಮೀನು ಖರೀದಿ ಮಾಡಿದ್ದಾರೆ. ಆದ್ರೆ ಅಂದಿನ ಮುಡಾ ಆಯುಕ್ತರಾಗಿದ್ದ ನಟೇಶ್ ಸರ್ಕಾರದ ನಡಾವಳಿಯನ್ನು ಸಂಪೂರ್ಣವಾಗಿ ಗಾಳಿಗೆ ತೂರಿದ್ದಾರೆ ಎಂದು ಲೋಕಾಯುಕ್ತ ವರದಿಯಲ್ಲಿ ಉಲ್ಲೇಖಿಸಿರುವುದಾಗಿ ಮೂಲಗಳಿಂದ ತಿಳಿದುಬಂದಿದೆ.


☛ ಉದಯವಾಹಿನಿ ಚಿತ್ರ

**ದೇವರಾಜು ಭೂಮಿ ಮಾರುವಾಗ ಸಾಕಷ್ಟು ಮಾಹಿತಿ**

**ಸಿಎಂ ಮತ್ತು ಕುಟುಂಬದ ಸದಸ್ಯರು ಈ ಪ್ರಕರಣದಲ್ಲಿ ಸಂತ್ರಸ್ತರಾಗಿದ್ದಾರೆ. ಭೂಮಿ ಖರೀದಿ ಮಾಡುವಾಗ ಆಗಲಿ, ದಾನ ಮಾಡುವಾಗ ಆಗಲಿ ಯಾವುದೇ ಪ್ರಭಾವ ಬೀರಿಲ್ಲ. ಸಿಎಂ ಸಿದ್ದರಾಮಯ್ಯ ಸಹ ಅಧಿಕಾರ ದುರುಪಯೋಗ ಮಾಡಿಕೊಂಡಿರುವುದಾಗಲಿ ಪ್ರಭಾವ ಬೀರಿರುವುದಾಗಲಿ ಸಾಕ್ಷ್ಯ ಸಿಕ್ಕಿಲ್ಲ. ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿಯೂ ಪ್ರಭಾವ ಬೀರಿರೋದಕ್ಕೆ ಸಾಕ್ಷ್ಯಗಳು ಇಲ್ಲ ಎಂದು ಹೇಳಿದೆ.**


# ಕಂದಾಯ ಇಲಾಖೆ ಸಾಫ್ಟ್‌ವೇರ್ ಹ್ಯಾಕ್

• **ಉದಯವಾಹಿನಿ,ಬೆಂಗಳೂರು**

ರಾಜಧಾನಿ ಬೆಂಗಳೂರಿನಲ್ಲಿ ಸೈಬರ್ ಹ್ಯಾಕರ್ಸ್ ಕಾವೇರಿ 2.0 ಸಾಫ್ಟ್‌ವೇರ್ ಹ್ಯಾಕ್ ಮಾಡಿದ್ದಾರೆ. ಆಸ್ತಿ ಖರೀದಿ ಮಾರಾಟ ನೋಂದಣಿ ಪ್ರಕ್ರಿಯೆಗೆ ಬಳಸುವ ಕಾವೇರಿ 2.0 ತಂತ್ರಾಂಶ ಇದಾಗಿದ್ದು, ರಾಜ್ಯ ನೋಂದಣಿ ಮುದ್ರಾಂಕ ಇಲಾಖೆ ಆಯುಕ್ತ ಕೆ ಎ ದಯಾನಂದ್ ದೂರು ನೀಡಿದ್ದಾರೆ.

ಆಸ್ತಿ ಖರೀದಿ, ಮಾರಾಟ ಸೇರಿ ನೋಂದಣಿ ಪ್ರಕ್ರಿಯೆಗೆ ಬಳಸುವ ಕಾವೇರಿ 2.0 ಸಾಫ್ಟ್‌ವೇರ್ ಅನ್ನು ಅಪರಿಚಿತರು ಹ್ಯಾಕ್ ಮಾಡಿರುವ ಪ್ರಕರಣ ಬೆಳಕಿಗೆ ಬಂದಿದೆ. ಈ ಬಗ್ಗೆ ನೊಂದಣಿ ಮಹಾ ನಿರೀಕ್ಷಕ (ಐಜಿಆರ್) ಕೆ.ಎ.ದಯಾನಂದ ಅವರು ನೀಡಿದ ದೂರಿನ ಮೇರೆಗೆ ಅಪರಿಚಿತ ವ್ಯಕ್ತಿಗಳ ವಿರುದ್ಧ ಕೇಂದ್ರ ಸಿಇಎನ್ ಠಾಣೆ ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ. ಸರ್ವರ್ ಸಮಸ್ಯೆಯಿಂದ ಕಳೆದ ಕೆಲ ದಿನಗಳಿಂದ ರಾಜ್ಯದ ಉಪನೋಂದಣಾಧಿಕಾರಿಗಳ ಕಚೇರಿಯಲ್ಲಿ ರಿಜಿಸ್ಟ್ರೇಷನ್ ಕಾರ್ಯ ಸ್ಥಗಿತಗೊಂಡಿತ್ತು. ಈ ಹಿನ್ನೆಲೆಯಲ್ಲಿ ಐಜಿಆರ್ ಪರಿಶೀಲಿಸಿದಾಗ ದುರುದ್ದೇಶದಿಂದ ಅಪರಿಚಿತರು ಕಾವೇರಿ 2.0 ಸಾಫ್ಟ್‌ವೇರ್ ಅನ್ನು ಹ್ಯಾಕ್ ಮಾಡಿ, ವೆಬ್‌ಸೈಟ್ ಪ್ರವೇಶಿಸಿ ಅದರಲ್ಲಿರುವ ಡೇಟಾಗಳನ್ನು ಕಳವು ಮಾಡಲು ನಕಲಿ ಖಾತೆಗಳನ್ನು ತೆರೆದಿರುವುದು ಪತ್ತೆಯಾಗಿದೆ. ಬಂಧನಕಳೆದ ತಿಂಗಳು ಸೈಬರ್ ದಾಳಿಕೋರರು ಹ್ಯಾಕ್ ಮಾಡಿದ್ದು, ಕಾವೇರಿ ವೆಬ್‌ಸೈಟ್‌ನಲ್ಲಿ ಸರ್ವರ್ ಸಮಸ್ಯೆ ಉಂಟಾಗಿತ್ತು. ಆಗ ಸಾಮಾನ್ಯ ದಿನಗಳಿಗಿಂತ 8 ಪಟ್ಟು ಹೆಚ್ಚಾಗಿತ್ತು.

ಕೆಲವು ಹಂತಗಳಲ್ಲಿ ಕೇವಲ ಎರಡು ಗಂಟೆಗಳ ಅವಧಿಯಲ್ಲಿ ದುರುದ್ದೇಶಪೂರಿತ ಬಳಕೆದಾರರಿಂದ 6.2 ಲಕ್ಷ ವಿನಂತಿಗಳನ್ನು ಸ್ವೀಕರಿಸಲಾಗಿದೆ ಎಂದು ಸಿಎಜಿ ವರದಿ ನೀಡಿತ್ತು. ಸರ್ಕಾರಿ ವೆಬ್‌ಸೈಟ್‌ಗಳನ್ನು ಗುರಿಯಾಗಿಕೊಂಡು ಸೈಬರ್ ದಾಳಿ ನಡೆದಿದೆ



# ನಮ್ಮ ಮೆಟ್ರೋ 2ನೇ ಡ್ರೈವರ್‌ಲೆಸ್ ರೈಲು

• **ಉದಯವಾಹಿನಿ,ಬೆಂಗಳೂರು**

ಬೆಂಗಳೂರಿನ ಜೀವನಾಡಿ ನಮ್ಮ ಮೆಟ್ರೋ ಸಾರಿಗೆಯ ಹೊಸ ಮಾರ್ಗವಾದ ಹಳದಿ ಮಾರ್ಗಕ್ಕೆ ಎರಡನೇ ಡ್ರೈವರ್‌ಲೆಸ್ ರೈಲು ಕೊನೆಗೂ ಬೆಂಗಳೂರಿಗೆ (ಫೆಬ್ರವರಿ 09) ಬೆಳಗ್ಗೆ ತಲುಪಿದೆ. ಕೊಂಚ ವಿಳಂಬದ ಹೊರತಾಗಿ ರಸ್ತೆ ಮಾರ್ಗವಾಗಿ ಹೊಸ ರೈಲ್ವೆ ಕೋಚ್ ಬೆಂಗಳೂರು ತಲುಪಿದೆ ಎಂದು 'ಬೆಂಗಳೂರು ಮೆಟ್ರೋ ರೈಲು ನಿಗಮ'ಮಾಹಿತಿ ನೀಡಿದೆ.ಹಾಗಾದರೆ ಹೊಸ ರೈಲು ಪರೀಕ್ಷೆ ಯಾವಾಗ? ಇಲ್ಲಿದೆ ಅಪ್ಡೇಟ್ ಮಾಹಿತಿ.

ನಮ್ಮ ಮೆಟ್ರೋ ಹಳದಿ ಮಾರ್ಗಕ್ಕೆ ನಿಯೋಜನೆಗೊಳ್ಳಲು ಕೊಲ್ಕತ್ತಾದ ಟಿಟಾಘರ್ ರೈಲ್ ಸಿಸ್ಟಮ್ ಕಂಪನಿಯಿಂದ ಜನವರಿ 06ರಂದು ಬೆಂಗಳೂರಿಗೆ ಪ್ರಯಾಣ ಬೆಳೆಸಿತ್ತು ಜನವರಿ ಅಂತ್ಯಕ್ಕೆ ದೇಶಿಯ ಮೊದಲ ಡ್ರೈವರ್‌ಲೆಸ್ ರೈಲು ಬೆಂಗಳೂರಿಗೆ ಬರಲಿದೆ ಎನ್ನಲಾಗಿತ್ತು ಕೊಂಚ ವಿಳಂಬದ ಬಳಿಕ ಇದೀಗ ಭಾನುವಾರ ಬೆಂಗಳೂರು ಮೆಟ್ರೋ ಡಿಪೋಗೆ ಆಗಮಿಸಿದೆ. ವರ್ಷದ ಹಿಂದೆ ಹಳದಿ ಮಾರ್ಗಕ್ಕೆ ಮೊದಲ ಚಾಲಕ ರಹಿತ ಮೆಟ್ರೋ ರೈಲು ಆಗಮಿಸಿತ್ತು. ಇದು ಎರಡನೇ ಮೆಟ್ರೋ ರೈಲು ಆಗಿದ್ದು, ದೇಶಿಯ ಮೊದಲ ಡ್ರೈವರ್‌ಲೆಸ್ ರೈಲು ಅಂತಲೂ ಕರೆಯಲಾಗುತ್ತಿದೆ. ಇನ್ನೊಂದು ವಾರದಲ್ಲಿ ಈ ರೈಲುಗಳನ್ನು ಪರೀಕ್ಷೆಗಾಗಿ ಹಳಿ ಮೇಲೆ ಜೋಡಿಸಲಾಗುತ್ತದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

**1,900 ಕಿ.ಮೀ. ಕ್ರಮಿಸಿದ 6 ಬೋಗಿಗಳು ಕೊಲ್ಕತ್ತಾದ ಟಿಟಾಘರ್ ಕಂಪನಿಯಿಂದ ಕರ್ನಾಟಕದ ಬೆಂಗಳೂರಿಗೆ 1,900 ಕಿಲೋಮೀಟರ್ ಕ್ರಮಿಸಿದ ರೈಲ್ ಹೊತ್ತ ಲಾರಿ ಬೆಂಗಳೂರಿನ ಹೆಬ್ಬಗೋಡಿ ಡಿಪೋ ಪ್ರವೇಶಿಸುವ ವಿಡಿಯೋವನ್ನು ಃ ಒಖಅಐ ಹಂಚಿಕೊಂಡಿದೆ. ಹಳದಿ ಮಾರ್ಗದ ಎರಡನೇ ರೈಲಿನ ಮೊದಲ ಬೆಳಗಾವಿ ಕೋಚ್ ಬೆಳಗ್ಗೆ 8.30 ರ ಸುಮಾರಿಗೆ ಮೆಟ್ರೋ ಡಿಪೋ ಪ್ರವೇಶಿಸುತ್ತಿರುವುದು ವಿಡಿಯೋದಲ್ಲಿದೆ. ಒಟ್ಟು ಆರು ಬೋಗಿಗಳ ಒಂದು ರೈಲ್ ಸೆಟ್ ಇದಗಿದೆ.**

# ಪೆರಿಫೆರಲ್ ವರ್ತುಲ ರಸ್ತೆ: ಆಸ್ತಿ ಮಾಲೀಕರಿಗೆ ನೋಟಿಸ್!

• **ಉದಯವಾಹಿನಿ,ಬೆಂಗಳೂರು**

ಪೆರಿಫೆರಲ್ ವರ್ತುಲ ರಸ್ತೆ (ಪಿಆರ್‌ಆರ್) ನಿರ್ಮಾಣಕ್ಕೆ ಭರ್ಜರಿ ಸಿದ್ಧತೆ ಶುರುವಾಗಿದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಈ ನಿಟ್ಟಿನಲ್ಲಿ ಭೂಸ್ವಾಧೀನ ಪ್ರಕ್ರಿಯೆಯನ್ನು ಶುರು ಮಾಡಿದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ)ವು ಹೊಸೂರು ರಸ್ತೆ ಹಾಗೂ ಮೈಸೂರು ರಸ್ತೆಯನ್ನು ಬನ್ನೇರುಘಟ್ಟ ಮತ್ತು ಕನಕಪುರ ಮೂಲಕ ಸಂಪರ್ಕಿಸಲಿರುವ 52 ಕಿ.ಮೀ ಉದ್ದದ ಪೆರಿಫೆರಲ್ ರಿಂಗ್ ರಸ್ತೆಗೆ ಭರ್ಜರಿ ಸಿದ್ಧತೆ ಶುರು ಮಾಡಿಕೊಂಡಿದೆ.

ಈ ಭಾಗದ ಆಸ್ತಿದಾರರಿಗೆ ನೋಟಿಸ್ ಸಹ ಕೊಡಲಾಗುತ್ತಿದೆ. ಭೂಸ್ವಾಧೀನ ಪ್ರಕ್ರಿಯೆ ಹೇಗಿದೆ ಹಾಗೂ ಇದಕ್ಕೆ ಯಾವ ರೀತಿ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ ಎನ್ನುವ ಸಂಪೂರ್ಣ ವಿವರ ಇಲ್ಲಿದೆ. ಬಿಡಿಎ ಬೆಂಗಳೂರು ಬ್ಯುಸಿನೆಸ್ ಕಾರಿಡಾರ್ ಎನ್ನುವ ಹೆಸರಿನಲ್ಲಿ 73 ಕಿ.ಮೀ. ಉದ್ದದ ರಸ್ತೆಯನ್ನು ಅಭಿವೃದ್ಧಿ ಮಾಡುವುದಕ್ಕೆ ಮುಂದಾಗಿದೆ. ಇದನ್ನು ಬರೋಬ್ಬರಿ 30,000 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣ ಮಾಡಲಾಗುತ್ತಿದೆ. ತುಮಕೂರು ರಸ್ತೆ ಹೊಸೂರು ರಸ್ತೆ ಸಂಪರ್ಕಿಸುವ 8 ಪಥದ ರಸ್ತೆ ಯೋಜನೆ ಇದಾಗಿದ್ದು. ಇದನ್ನು 2007ರಲ್ಲಿ ಪೆರಿಫೆರಲ್ ವರ್ತುಲ ರಸ್ತೆ (ಪಿಆರ್ ಆರ್) ಹೆಸರಿನಲ್ಲಿ ರಸ್ತೆ ಎನ್ನುವ ಹೆಸರಿನಲ್ಲಿ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಇದೀಗ ಈ ಯೋಜನೆಗೆ ಅಗತ್ಯವಿರುವ ಅಂದಾಜು 1,800 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು 9 ಪ್ರತ್ಯೇಕ ತಂಡಗಳನ್ನು ರಚಿಸಲಾಗಿದೆ ಎಂದು ಆಊ ವರದಿ ಮಾಡಿದೆ. ಬೆಂಗಳೂರಿನಲ್ಲಿ ಟ್ರಾಫಿಕ್ ಜಾಮ್ ಸಮಸ್ಯೆ ಹೆಚ್ಚಳವಾಗುತ್ತಿದ್ದು ಟ್ರಾಫಿಕ್ ಜಾಮ್‌ಗೆ ಕಡಿವಾಣ ಹಾಕುವ ಉದ್ದೇಶದಿಂದ ಈ ಯೋಜನೆಯನ್ನು ರೂಪಿಸಲಾಗಿದೆ.


☛ ಉದಯವಾಹಿನಿ ಚಿತ್ರ

**ನೈಸ್ ಕಾರಿಡಾರ್‌ಗೆ ಸಮಾನಾಂತರವಾಗಿ ಈ ಮಾರ್ಗ ಸಾಗಲಿದೆ. ಆದರೆ, ಕನಿಷ್ಠ 4 ಕಿ.ಮೀ ಅಂತರ ಇರಲಿದೆ. ನಗರದ ಸುತ್ತಲೂ ಸಂಪೂರ್ಣ ವರ್ತುಲ ರಸ್ತೆಯನ್ನು ರೂಪಿಸುವುದು ಇದರ ಉದ್ದೇಶವಾಗಿದೆ. ಬೆಂಗಳೂರು ಮೂಲಕವಾಗಿ ಸಾಗುವ ವಾಹನಗಳು ವರ್ತುಲ ಮೂಲಕವಾಗಿ ಸಾಗುವುದು ಅಥವಾ ಬೆಂಗಳೂರು ಕೇಂದ್ರವಾಗಿ ಟ್ರಾಫಿಕ್ ಜಾಮ್ ಕಡಿಮೆ ಮಾಡುವುದು ಈ ಯೋಜನೆಯ ಉದ್ದೇಶವಾಗಿದೆ.**

# ಸರ್ಕಾರಕ್ಕೆ ಮೋಸ: ತಹಶೀಲ್ದಾರ್ ಸೇರಿ 6 ಜನ ಅಧಿಕಾರಿಗಳು ಸಸ್ಪೆಂಡ್!

• **ಉದಯವಾಹಿನಿ,ಬೆಂಗಳೂರು**

ಧಾರವಾಡದಲ್ಲಿ ಸರ್ಕಾರಕ್ಕೆ ಮೋಸ ಮಾಡಿದ ಆರೋಪದ ಮೇಲೆ ತಹಶೀಲ್ದಾರ್ ಸೇರಿ 6 ಜನ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಲಾಗಿದೆ. ಧಾರವಾಡದ ಕಲಘಟಗಿಯಲ್ಲಿ ಈ ಘಟನೆ ನಡೆದಿದೆ. ಸರ್ಕಾರಕ್ಕೆ ವಂಚನೆ ಮಾಡಿದ ಅಥವಾ ಕರ್ತವ್ಯ ಲೋಪದ ಆರೋಪದ ಮೇಲೆ ಇಲ್ಲಿನ ತಹಶೀಲ್ದಾರ್ ಹಾಗೂ ಆರು ಜನ ಕೃಷಿ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿ ಆದೇಶ ಹೊರಡಿಸಲಾಗಿದೆ.

ಉದ್ದೇಶಪೂರ್ವಕವಾಗಿ ರೈತರ ಮಾಹಿತಿಯನ್ನು ತಪ್ಪಾಗಿ ನಮೂದಿಸಿದ ಆರೋಪ ಇವರ ಮೇಲಿದೆ. ರೈತರ ಯಾವ ಮಾಹಿತಿಯನ್ನು ತಿರುಚಲಾಗಿತ್ತು. ಏನಿದು ಘಟನೆ ಹಾಗೂ ಯಾವ ಕಾರಣಕ್ಕೆ ಸಸ್ಪೆಂಡ್ ಮಾಡಲಾಗಿದೆ ಎನ್ನುವ ಸಂಪೂರ್ಣ ವಿವರ ಇಲ್ಲಿದೆ. ಕಲಘಟಗಿಯಲ್ಲಿ ಸರ್ಕಾರಿ ಅಧಿಕಾರಿಗಳು ಮಾಡಿರುವ ಕೆಲಸ ಭಾರೀ ಚರ್ಚೆ, ಆಕ್ರೋಶಕ್ಕೆ ಕಾರಣವಾಗಿದೆ. ಇದರ ಬೆನ್ನಲ್ಲೇ ಧಾರವಾಡ ಬೆಳಗಾವಿ ಜಿಲ್ಲೆಯ ಕಲಘಟಗಿ ತಾಲ್ಲೂಕಿನ ತಹಶೀಲ್ದಾರ್ ಸೇರಿ 6 ಜನ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿ ಆದೇಶ ಹೊರಡಿಸಲಾಗಿದೆ.

ರೈತರ ಪ್ರಮುಖ ಮಾಹಿತಿಯನ್ನೇ ತಪ್ಪಾಗಿ ನಮೂದಿಸಿ ವಂಚನೆ ಮಾಡಿದ ಆರೋಪ ಇವರ ಮೇಲೆ ಕೇಳಿ ಬಂದಿದೆ ಎಂದು ಹೇಳಲಾಗಿದೆ. 2024-25ನೇ ಸಾಲಿನ ಬೆಳೆ ಹಾನಿ ವಿವರ ತಂತ್ರಾಂಶದಲ್ಲಿ ತಪ್ಪು ಮಾಹಿತಿ ದಾಖಲಿಸಲಾಗಿದೆ. ಇದರಲ್ಲಿ ಇಲ್ಲಿನ ತಹಶೀಲ್ದಾರ್ ಅವರು ಸಹ ಭಾಗಿಯಾಗಿದ್ದರು ಎನ್ನುವ ಗಂಭೀರ ಆರೋಪ ಕೇಳಿ ಬಂದಿತ್ತು. ಪರಿಶೀಲನೆ ಮಾಡಿದ ನಂತರ ಇದೀಗ ಸಸ್ಪೆಂಡ್ ಆರ್ಡರ್ ಮಾಡಲಾಗಿದೆ.

**ಏನಿದು ಪ್ರಕರಣ:** ಧಾರವಾಡ ಜಿಲ್ಲೆಯ ಕಲಘಟಗಿ ತಾಲ್ಲೂಕಿನಲ್ಲಿ 2024-25ನೇ ಸಾಲಿನ ಬೆಳೆ ಹಾನಿ ವಿವರ ತಂತ್ರಾಂಶದಲ್ಲಿ ತಪ್ಪು ಮಾಹಿತಿ ದಾಖಲಿಸಲಾಗಿದೆ ಎನ್ನುವ ಆರೋಪ ಇದೆ. ಈ ರೀತಿ ತಂತ್ರಾಂಶದಲ್ಲಿ ವಿವರವನ್ನು ಸಲ್ಲಿಸುವಾಗ ಅನರ್ಹ ರೈತರ ವಿವರಗಳನ್ನೂ ಸಹ ದಾಖಲಿಸುವ ಮೂಲಕ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಆರ್ಥಿಕ ನಷ್ಟವನ್ನು ಉಂಟು ಮಾಡಲಾಗಿದೆ ಎಂದು ಹೇಳಲಾಗಿದೆ. ಈ ಪ್ರಕರಣವನ್ನು ರಾಜ್ಯ ಸರ್ಕಾರವು ಗಂಭೀರವಾಗಿ ಪರಿಗಣಿಸಿದ್ದು, ಕ್ರಮ ತೆಗೆದುಕೊಂಡಿದೆ.



**ಈ ಹಿನ್ನೆಲೆಯಲ್ಲಿ ತಹಶೀಲ್ದಾರ್ ವಿ.ಎಸ್. ಮುಳುಗುಂದ ಮಠ ಸಹಾಯಕ ಕೃಷಿ ನಿರ್ದೇಶಕ ಅಮರ ನಾಯ್ಕರ ಹಾಗೂ ಅಲ್ಲದೆ 6 ಜನ ಗ್ರಾಮ ಆಡಳಿತಾಧಿಕಾರಿಗಳನ್ನು ಸಹ ಇದೇ ಕಾರಣಕ್ಕೆ ಸಸ್ಪೆಂಡ್ ಮಾಡುವಂತೆ ಡಿಸಿ ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ಅವರು ಸೂಚನೆ ನೀಡಿದ್ದಾರೆ. ವಿ.ಎಸ್.ಮುಳುಗುಂದಮಠ, ಅಮರ ನಾಯ್ಕರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿ, ಶಿಸ್ತುಕ್ರಮ ಜರುಗಿಸಲು ತಾಕೀತು ಮಾಡಲಾಗಿದೆ. ಕಂದಾಯ ಮತ್ತು ಕೃಷಿ ಇಲಾಖೆ ಸಕ್ಷಮ ಪ್ರಾಧಿಕಾರದವರಿಗೆ ಈ ಸಂಬಂಧ ಸೂಚನೆ ನೀಡಲಾಗಿದೆ.**

# ಸಬ್ಸಿಡಿ, ವಿದ್ಯುತ್ ಉಳಿತಾಯದ ಮಾಹಿತಿ ಹಂಚಿಕೊಂಡ ಬೆಸ್ಕಾಂ!

## ರೂಫ್ ಟಾಪ್ ಸೋಲಾರ್ ಪ್ಯಾಂಟ್ ಹಾಕಿಸಿಕೊಳ್ಳಲು ತಗಲುವ ಖರ್ಚು, ಅದರಿಂದಾಗುವ ಉಳಿತಾಯದ ಬಗ್ಗೆಯೂ ಬೆಸ್ಕಾಂ ವಿವರಣೆ

• **ಉದಯವಾಹಿನಿ,ಬೆಂಗಳೂರು**

ಪ್ರಧಾನಮಂತ್ರಿ ಸೂರ್ಯ ಘರ್ ಮುಕ್ತ ವಿದ್ಯುತ್ ಯೋಜನೆಯಡಿಯಲ್ಲಿನ ಸಬ್ಸಿಡಿ ಮಾಹಿತಿಯನ್ನು ಬೆಸ್ಕಾಂ ತನ್ನ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದೆ. ಐದು ವರ್ಷ ಪಾವತಿಯನ್ನು ಮಾಡಿ, ಇಪ್ಪತ್ತು ವರ್ಷ ಯಾವುದೇ ಹಣ ಪಾವತಿಸದೇ, ವಿದ್ಯುತ್ ಅನ್ನು ಬಳಸಿಕೊಳ್ಳಬಹುದು ಎಂದು ಹೇಳಿದೆ.

5 ವರ್ಷ ಪಾವತಿಯನ್ನು ಮಾಡಿ, 20 ವರ್ಷ ಯಾವುದೇ ಹಣ ಪಾವತಿಸದೇ, ವಿದ್ಯುತ್ ಅನ್ನು ಬಳಸಿಕೊಳ್ಳಬಹುದು ಎಂದು ತಿಳಿಸಿದೆ. ರೂಫ್ ಟಾಪ್ ಸೋಲಾರ್ ಪ್ಯಾಂಟ್ ಹಾಕಿಸಿಕೊಳ್ಳಲು ತಗಲುವ ಖರ್ಚು ಮತ್ತು ಅದರಿಂದಾಗುವ ಉಳಿತಾಯದ ಬಗ್ಗೆಯೂ ಬೆಸ್ಕಾಂ ವಿವರಣೆಯನ್ನು ನೀಡಿದೆ. ಇದಕ್ಕೆ ವಾರ್ಷಿಕ 7% ನಲ್ಲಿ ಬ್ಯಾಂಕ್ ಲೋನ್ ಕೂಡಾ ಲಭ್ಯವಿದೆ. ಹತ್ತು ವರ್ಷದವರೆಗೆ ಇಎಂಐ ಕಟ್ಟುವ ಅವಕಾಶವೂ ಇದೆ ಎಂದು ಬೆಸ್ಕಾಂ ತನ್ನ ಎಕ್ಸ್ ಅಕೌಂಟ್ ನಲ್ಲಿ ಮಾಹಿತಿ ನೀಡಿದೆ. ಇನ್ನಷ್ಟು ತಿಳಿಯಿರಿ ಒಂದು ಕಿಲೋವ್ಯಾಟ್ ಸೋಲಾರ್ ಫಲಕ ಹಾಕಲು 10 X 10 ಜಾಗ ಸಾಕು ಮತ್ತು ಪ್ಯಾಂಟಿನ ಮೊತ್ತ ಐದು ವರ್ಷದ ನಿರ್ವಹಣಾ ವೆಚ್ಚವೂ ಒಳಗೊಂಡಂತೆ ಸೇರಿದೆ ಎಂದು ಬೆಸ್ಕಾಂ ಪ್ರಕಟಣೆಯಲ್ಲಿ ಹೇಳಿದೆ.

ಲೇಟೆಸ್ಟ್ ವಿದ್ಯುತ್ ಬಿಲ್ ಮತ್ತು ಆಧಾರ್ ಕಾರ್ಡಿನ ಕಾಪಿಯೊಂದಿಗೆ ಇದಕ್ಕೆ ಅರ್ಜಿ ಸಲ್ಲಿಸಬಹುದು.

ಮನೆಬಳಕೆಯ ನಂತರ ಉಳಿಯುವ ವಿದ್ಯುತ್ ಅನ್ನು ಮಾರಾಟ ಮಾಡುವ ಮೂಲಕ, ತಿಂಗಳು ತಿಂಗಳು ಹಣವನ್ನೂ ಸಹ ಸಂಪಾದಿಸಬಹುದು ಎಂದು ಬೆಸ್ಕಾಂ ಹೇಳಿದೆ. 1, 2 ಮತ್ತು 3 ಕಿಲೋವ್ಯಾಟ್ ಸಾಮರ್ಥ್ಯದ ಸೋಲಾರ್ ಪ್ಯಾಂಟ್ ಅಳವಡಿಸಬಹುದಾಗಿದೆ.

**ಸಬ್ಸಿಡಿ ಮೊತ್ತದ ವಿವರ ಹೀಗಿದೆ : 1** ಕಿಲೋವ್ಯಾಟ್ : 30 ಸಾವಿರ ರೂಪಾಯಿ. **2ಕಿಲೋವ್ಯಾಟ್ :** 60 ಸಾವಿರ ರೂಪಾಯಿ.

**3 ಕಿಲೋವ್ಯಾಟ್:** 78 ಸಾವಿರ ರೂಪಾಯಿ. ವಸತಿ ಸಮುಚ್ಚಯಗಳಿಗಾದರೆ, 500 ಕಿಲೋವ್ಯಾಟ್ ವರೆಗಿನ ಸಾಮರ್ಥ್ಯದ ಪ್ಯಾಂಟಿಗೆ 18 ಸಾವಿರ ರೂಪಾಯಿ ಸಬ್ಸಿಡಿ. 101 - 200 ಯುನಿಟ್ ಬಳಕೆಯಾಗುತ್ತಿದ್ದರೆ, 1 ಕಿಲೋವ್ಯಾಟ್ ಸೋಲಾರ್ ಪ್ಯಾಂಟ್ ಹಾಕಿಕೊಂಡರೆ, ಅದರ ವೆಚ್ಚ 60 ರಿಂದ 80 ಸಾವಿರ ರೂಪಾಯಿ, ಇದರಿಂದ ವಾರ್ಷಿಕ ಉಳಿತಾಯದ ಮೊತ್ತ 9,600 ರೂಪಾಯಿ. 101 - 200 ಯುನಿಟ್ ಬಳಕೆಯಾಗುತ್ತಿದ್ದರೆ, 2 ಕಿಲೋವ್ಯಾಟ್ ಸೋಲಾರ್ ಪ್ಯಾಂಟ್ ಹಾಕಿಕೊಂಡರೆ, ಅದರ ವೆಚ್ಚ 1.2 ಲಕ್ಷದಿಂದ 1.6ಲಕ್ಷದವರೆಗೆ, ಇದರಿಂದ ವಾರ್ಷಿಕ ಉಳಿತಾಯದ ಮೊತ್ತ 21,600 ರೂಪಾಯಿ. 201 - 300 ಯುನಿಟ್ ಬಳಕೆಯಾಗುತ್ತಿದ್ದರೆ, 3 ಕಿಲೋವ್ಯಾಟ್ ಸೋಲಾರ್ ಪ್ಯಾಂಟ್ ಹಾಕಿಕೊಂಡರೆ, ಅದರ ವೆಚ್ಚ 1.8 ಲಕ್ಷದಿಂದ 2.4 ಲಕ್ಷದವರೆಗೆ, ಇದರಿಂದ ವಾರ್ಷಿಕ ಉಳಿತಾಯದ ಮೊತ್ತ 36,000 ರೂಪಾಯಿ.


☛ ಉದಯವಾಹಿನಿ ಚಿತ್ರ

**ಪಿಎಂ ಸೂರ್ಯಘರ್ ಯೋಜನೆ**


### ಅರ್ಜಿ ಸಲ್ಲಿಕೆ ಹೇಗೆ?

**ಇದಕ್ಕೆ ಯಾರೂ ಬೇಕಾದರೂ ಅರ್ಜಿ ಸಲ್ಲಿಕೆ ಮಾಡಬಹುದು. ಸಬ್ಸಿಡಿ. ಪಡೆಯಲು ಗರಿಷ್ಠ ಪೇಲೋಡ್ ಶೇಕಡಾ 85 ರಷ್ಟು ಮೀರಿರಬಾರದು ಅಷ್ಟೇ. ಅರ್ಜಿ ಸಲ್ಲಿಸಲು ಕೇಂದ್ರ ಸರ್ಕಾರದ ಅಧಿಕೃತ ಪಿಎಂ ಘರ್ ಮುಕ್ತ ಬಿಜಿಲಿ ಯೋಜನೆ ಅಧಿಕೃತ ಇನ್ನಷ್ಟು ತಿಳಿಯಿರಿ (https://www.pmsuryaghar.gov.in/) ಸಲ್ಲಿಕೆ ಮಾಡಬಹುದು. ಯೋಜನೆ ಲಾಭ ಪಡೆಯಲು ಬಯಸಿದವರು ಅಧಿಕೃತ ವೆಬ್‌ಸೈಟ್‌ಗೆ ಲಾಗಿನ್ ಆಗಿ ಕೆಲ ಅಗತ್ಯ ಮಾಹಿತಿ ಹಾಗೂ ದಾಖಲೆ ಸಲ್ಲಿಸಬೇಕು.**

### ಇದರ ಪ್ರಯೋಜನೆಗಳೇನು?

**ವಿದ್ಯುತ್ ಬಿಲ್‌ನಲ್ಲಿ ಉಳಿತಾಯ ಹೆಚ್ಚುವರಿ ವಿದ್ಯುತ್ ಅನ್ನು ಬೆಸ್ಕಾಂಗೆ ಮಾರಾಟ ಮಾಡುವ ಮೂಲಕ ಆದಾಯ ಗಳಿಸಬಹುದು. ಪರಿಸರ ಸ್ನೇಹಿ ವಿದ್ಯುತ್ ವ್ಯವಸ್ಥೆ ಈ ವ್ಯವಸ್ಥೆ ಪಡೆಯಲು ಬೇಕಿರುವ ದಾಖಲೆಗಳು ವಿದ್ಯುತ್ ಬಿಲ್ ಮತ್ತು ಆಧಾರ್ ಕಾರ್ಡ್ ಮಾತ್ರ.**

**ಪ್ರಮುಖವಾಗಿ ವಿದ್ಯುತ್ ಗ್ರಾಹಕರ ಸಂಖ್ಯೆ ಮೊಬೈಲ್ ಸಂಖ್ಯೆ, ಇಮೇಲ್, ವಿದ್ಯುತ್ ವಿತರಣಾ ಕಂಪನಿ ಸೇರಿದಂತೆ ಅಗತ್ಯ ಮಾಹಿತಿ ದಾಖಲಿಸಿ ರೂಫ್ ಟಾಪ್ ಸೋಲಾರ್ ಯೋಜನೆಗೆ ಅರ್ಜಿ ಸಲ್ಲಿಕೆ ಮಾಡಬೇಕು.**



# ಜೀವನದಲ್ಲಿ ಸಕಾರಾತ್ಮಕ ಬದಲಾವಣೆ ಮಠಮಾನ್ಯಗಳಿಂದ ಸಾಧ್ಯ

## ಶಿರಮಳ್ಳಿ ಗ್ರಾಮದ ಪಕ್ಕದಲ್ಲಿ ನೆಲೆಗೊಂಡಿರುವ ಶ್ರೀ ಮುರುಗೀಸ್ವಾಮಿ ವಿರಕ್ತ ಮಠದಲ್ಲಿ ಶ್ರೀ ಬಸವಸ್ವಾಮಿಗಳ ಗದ್ದುಗೆ ಉದ್ಘಾಟನೆ

• **ಉದಯವಾಹಿನಿ, ನಂಜನಗೂಡು**

ತಾಲ್ಲೂಕಿನ ಹುಲ್ಲಹಳ್ಳಿ ಹೋಬಳಿಯ ಶಿರಮಳ್ಳಿ ಗ್ರಾಮದ ಪಕ್ಕದಲ್ಲಿ ನೆಲೆಗೊಂಡಿರುವ ಶ್ರೀ ಮುರುಗೀಸ್ವಾಮಿ ವಿರಕ್ತ ಮಠದಲ್ಲಿ ಶ್ರೀ ಬಸವಸ್ವಾಮಿಗಳ ಗದ್ದುಗೆ ಉದ್ಘಾಟನೆ, ರಾಜದ್ವಾರ(ಆವರಣ ದ್ವಾರ) ಲೋಕಾರ್ಪಣೆ, ಶ್ರೀಮಠದ ಗುದ್ದಲಿಪೂಜೆ ಹಾಗೂ ಪೂಜ್ಯರ 11ನೇ ವರ್ಷದ ಪಟ್ಟಾಧಿಕಾರ ಮಹೋತ್ಸವವು ವಿಧಿವತ್ತಾಗಿ ಅದ್ದೂರಿ ಮತ್ತು ಯಶಸ್ವಿಯಾಗಿ ನೆರವೇರಿದವು.

ಸಮಾರಂಭದಲ್ಲಿ ದಿವ್ಯ ಸಾನಿಧ್ಯ ವಹಿಸಿದ್ದ ಸುತ್ತೂರು ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ಮಾತನಾಡುತ್ತಾ, ಈ ಮಠವು ಊರಿಂದ ಹೊರಭಾಗದಲ್ಲಿ ಇರುವುದರಿಂದ ಪ್ರಶಾಂತವಾದ ಪರಿಸರದಲ್ಲಿ ಜನರಿಗೆ ಉತ್ತಮ ವಾತಾವರಣ ಕಲ್ಪಿಸುತ್ತಿದೆ ಎಂದ ಅವರು ಶ್ರೀಮಠದ ಇತಿಹಾಸ ಮತ್ತು ಪರಂಪರೆಯಲ್ಲಿ ಬಂದಂತಹ ಪೂಜ್ಯರುಗಳನ್ನು ಮೆಲಕು ಹಾಕಿದರು. ಪ್ರಸ್ತುತ ಇಮ್ಮಡಿ ಮುರಗಿ ಸ್ವಾಮಿಗಳು ನಮ್ಮ ಜೆಎಸ್‌ಎಸ್ ಗುರುಕುಲದಲ್ಲಿ ವಿದ್ಯಾಭ್ಯಾಸ ಮಾಡಿದ ಸಂದರ್ಭಗಳನ್ನು ಭಕ್ತರ ಗಮನಕ್ಕೆ ತಂದರು.

ಪೂಜ್ಯರು ಚುರುಕು ವ್ಯಕ್ತಿತ್ವದ ಒಡನಾಡಿಗಳು, ಕ್ರಿಯಾಶೀಲರು ಎಂದು ತಿಳಿಸಿದ ಅವರು ಭಕ್ತರ ಸಹಕಾರ ಶ್ರೀ ಮಠದ ಮೇಲೆ ಇನ್ನು ಹೆಚ್ಚಿನ ರೀತಿಯಲ್ಲಿದ್ದರೆ ವೇಗವಾಗಿ ಮಠವು ಬೆಳೆಯಲು ಸಾಧ್ಯವಾಗುತ್ತದೆ. ಮಠಗಳು ಬೆಳೆದರೆ ಸಮಾಜ ಉಳಿಯುವುದರ ಜೊತೆಗೆ ಸಂಸ್ಕಾರವಂತರಾಗಲು ಸಾಧ್ಯವಾಗುತ್ತದೆ ಎಂದರು.


ಉದಯವಾಹಿನಿ ಚಿತ್ರ

> ನಮ್ಮ ಭಾರತಕ್ಕೆ ಸಾವಿರ ವರ್ಷಗಳ ಇತಿಹಾಸವಿದ್ದು, ದೇವಸ್ಥಾನಗಳು, ಮಠಗಳು, ಆಶ್ರಮಗಳು ಮನಷ್ಯ ಅಭಿವೃದ್ದಿ ಹೊಂದಲು ಬೇಕಾದಂತಹ ಸವಲತ್ತುಗಳು ಇಲ್ಲಿವೆ ಎಂದರು. ತಂದೆ ತಾಯಿಯಂದಿರನ್ನು ಪ್ರೀತಿಸುವಂತಹ ಸಹೃದಯಿಗಳಾಗಬೇಕು ಎಂದು ಭಕ್ತರಿಗೆ ಕಿವಿಮಾತು ಹೇಳಿದರು.

ಸಮಾರಂಭದಲ್ಲಿ ಮುರುಗೀಸ್ವಾಮಿ ವಿರಕ್ತ ಮಠಾಧ್ಯಕ್ಷರಾದ ಇಮ್ಮಡಿ ಮುರುಗೀ ಸ್ವಾಮಿಗಳು ಪ್ರಾಸ್ತವಿಕವಾಗಿ ಮಾತನಾಡುತ್ತಾ ಶ್ರೀ ಬಸವರಾಜ ಸ್ವಾಮಿಗಳವರು ಈ ಭಾಗದಲ್ಲಿ ಹಲವಾರು ಸಂಘಟನೆಗಳೊಂದಿಗೆ ಕರ್ಮಯುಕ್ತವಾದಂತಹ ಸಂಸ್ಕಾರ ಜೀವನವನ್ನು ಕಟ್ಟಿಕೊಳ್ಳಲು ಅನುಕೂಲ ಮಾಡಿಕೊಟ್ಟು ಶ್ರೀ ಮಠಕ್ಕೆ ತಮ್ಮದೇ ಆದಂತಹ ಸೇವಾ ಪ್ರವೃತ್ತಿಯಿಂದ ಸಾಧನೆಗೈದರು. ಮಾತೃ ಸಹೃದಯಿಗಳಾದ ಸುತ್ತೂರು ಪೂಜ್ಯರು ಶ್ರೀಮಠದ ಮೇಲೆ ವಿಶೇಷ ಆಸಕ್ತಿ ಹೊಂದಿರುವುದು ಇಷ್ಟು ದೊಡ್ಡ ಪ್ರಮಾಣದ ಕಾರ್ಯಕ್ರಮ ಅಭಿವೃದ್ದಿಯ ಪರ ಯೋಜನೆಗಳು ನಡೆಯಲಿಕ್ಕೆ ಸಾಧ್ಯವಾದವು ಎಂದರು. ಎಲ್ಲಾ ಸದ್ಭಕ್ತರು ಈ ಕಾರ್ಯಕ್ರಮಕ್ಕೆ ಬೆಂಬಲವಾಗಿದ್ದರಿಂದ ಈ ಕಾರ್ಯಕ್ರಮ ಅದ್ದೂರಿ ಮತ್ತು ಅದ್ಭುತವಾಗಿ ನೆರವೇರಲು ಸಧ್ಯವಾಯಿತು ಎಂದರು.

> ಮಠಮಾನ್ಯಗಳು ಭಕ್ತಾಧಿಗಳ ಸಾರ್ವಜನಿಕರ ಹಿತಾಸಕ್ತಿಗಾಗಿ ಅವರ ಕಲ್ಯಾಣಕ್ಕಾಗಿ ಶ್ರಮಿಸುವಂತಹವು. ಮಠದಲ್ಲಿ ಜ್ಞಾನವನ್ನು ಅಪೇಕ್ಷಿಸಿ ಬಂದಂತವರಿಗೆ ಜ್ಞಾನದೀವಿಗೆ ಮತ್ತು ಹಸಿದು ಬಂದವರ ಹಸಿವನ್ನು ನೀಗಿಸುವಂತಹ, ದುಃಖ ದುಮ್ಮಾನಗಳಿಂದ ಬಂದವರಿಗೆ ಸಂಕಟವನ್ನು ಪರಿಹರಿಸಿ ಜೀನವದಲ್ಲಿ ಸುಖ-ಸಂತೋಷದ ಅವಕಾಶವನ್ನು ಕಲ್ಪಿಸುವಂತಹ ಒಟ್ಟಾರೆ ಒಬ್ಬ ಮನುಷ್ಯನ ಬದುಕಿನ ಜೀವಿತದಲ್ಲಿ ಬೇಕಾದ ಸಕಾರಾತ್ಮಕವಾದಂತಹ ಬದಲಾವಣೆಗಳಿಗೆ ಅವಕಾಶ ಮಾಡಿಕೊಡುವಂತಹವು ಮಠಮಾನ್ಯಗಳು. ಒಟ್ಟಾರೆ ಮನುಷ್ಯನ ಕಲ್ಯಾಣಕ್ಕೋಸ್ಕರ ಎಲ್ಲಾ ಮಠಗಳು ಕೆಲಸ ಮಾಡುತ್ತಿರುವುದು ಕಾಣಬಹುದಾಗಿದೆ ಎಂದರು.

**ಶ್ರೀಮಠದ ಮುಂದಿನ ಯೋಜನೆಗೆ ನೀಲಿನಕ್ಷೆ ಬಿಡುಗಡೆ**

ಸಮಾರಂಭದಲ್ಲಿ ಶ್ರೀಮಠದ ಮುಂದಿನ ಯೋಜನೆಗೆ ನೀಲಿನಕ್ಷೆ ಬಿಡುಗಡೆ ಮಾಡಿ ಮಾತನಾಡಿದ ಶಾಸಕ ದರ್ಶನ್ ಧ್ರುವನಾರಾಯಣ್ ರವರು, ಶ್ರೀ ಮಠದ ಇಮ್ಮಡಿ ಮುರಗಿ ಸ್ವಾಮಿಗಳು ಕಿರಿಯ ವಯಸ್ಸಿನಲ್ಲಿ ಅತಿದೊಡ್ಡ ಜವಾಬ್ದಾರಿಯನ್ನು ತೆಗೆದುಕೊಂಡು ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿದ್ದಾರೆ ಎಂದು ಶ್ರೀಗಳನ್ನು ಅಭಿನಂದಿಸಿದರು. ವಿಶೇಷವಾದ ಸೇವಾ ಕಾರ್ಯಕ್ರಮಗಳನ್ನು ಮಠದ ಮೂಲಕ ನಡೆಸಿಕೊಂಡು ಬರುತ್ತಿದ್ದು, ಇವರ ಈ ಎಲ್ಲಾ ಸೇವಾಕಾರ್ಯಗಳಿಗೆ ನನ್ನ ಸಂಪೂರ್ಣ ಸಹಕಾರ, ಅಭಿಮಾನ ಇರುತ್ತದೆ ಎಂದರು.

ಗುಂಡ್ಲುಪೇಟೆ ಶಾಸಕರಾದ ಗಣೇಶ್‌ಪ್ರಸಾದ್ ರವರು ಮಾತನಾಡಿ, ನಂಜನಗೂಡು ಕ್ಷೇತ್ರ ಉತ್ತಮ ಮಳೆ, ಬೆಳೆ, ಕೈಗಾರಿಕೆಗಳಿಂದ ಕೂಡಿದ್ದು ಸಮೃದ್ದವಾದ ಕ್ಷೇತ್ರವಾಗಿದೆ. ನಮ್ಮ ಗುಂಡ್ಲುಪೇಟೆ ಕ್ಷೇತ್ರಕ್ಕೆ ನಂಜನಗೂಡಿನಿಂದಲೇ ಕುಡಿಯುವ ನೀರು ಪೂರೈಕೆಯಾಗುತ್ತಿರುವುದನ್ನು ಸ್ಮರಿಸಿದ ಅವರು ಶ್ರೀಮಠದ ಅಭಿವೃದ್ದಿಗೆ ನನ್ನ ಸಹಕಾರವು ಕೂಡ ಇದೆ ಎಂದರು.

ಸಮಾರಂಭದಲ್ಲಿ ದಿವ್ಯಸಮ್ಮುಖವನ್ನು, ಗದ್ದುಗೆ ಉದ್ಘಾಟನೆಯನ್ನು ದೇವನೂರಿನ ಶ್ರೀ ಗುರುಮಲ್ಲೇಶ್ವರ ದಾಸೋಹ ಮಠಾಧ್ಯಕ್ಷರಾದ ಶ್ರೀ ಮಹಾಂತಸ್ವಾಮಿಗಳು, ಕನಕಪುರದ ಚೆನ್ನಬಸವಸ್ವಾಮಿಗಳು, ಮೈಸೂರು ಹೊಸಮಠದ ಚಿದಾನಂದ ಸ್ವಾಮಿಗಳು, ವಾಟಾಳು ಮಠದ ಶ್ರೀ ಸಿದ್ದಲಿಂದ ಶಿವಾಚಾರ್ಯ ಸ್ವಾಮಿಗಳು, ಹುಲ್ಲಹಳ್ಳಿಯ ಇಮ್ಮಡಿ ಚೆನ್ನಮಲ್ಲಸ್ವಾಮಿಗಳು ನೆರವೇರಿಸಿದರು.

---

# ಕಲ್ಲಹಳ್ಳಿ: ಮಾಘ ಸ್ನಾನ, ಸೂರ್ಯ ನಮಸ್ಕಾರ

• **ಉದಯವಾಹಿನಿ, ಕೆ.ಆರ್.ಪೇಟೆ**

ತಾಲ್ಲೂಕಿನ ಪುರಾಣ ಪ್ರಸಿದ್ಧ ಕಲ್ಲಹಳ್ಳಿಯ ಭೂವ ರಾಹನಾಥ ಸ್ವಾಮಿ ದೇವಸ್ಥಾನದ ಸಮೀಪದ ತ್ರಿವೇಣಿ ಸಂಗಮದ ಹಿನ್ನೀರಿನ ದಂಡೆಯಲ್ಲಿ ಮಾಘ ಸ್ನಾನ ಮತ್ತು ಸೂರ್ಯ ನಮಸ್ಕಾರ ಶ್ರದ್ಧಾಭಕ್ತಿಯಿಂದ ಭಾನುವಾರ ನಡೆಯಿತು.

ಧಾರ್ಮಿಕ ಚಿಂತಕ ವೇ.ಬ್ರ.ಗೋಪಾಲಕೃಷ್ಣ ಅವದಾನಿಗಳು ಮತ್ತು ಭೂವರಾಹನಾಥಸ್ವಾಮಿ ದೇವಾಲಯದ ವ್ಯವಸ್ಥಾಪಕ ಧರ್ಮದರ್ಶಿ ಶ್ರೀನಿವಾಸ ರಾಘವನ್ ಅವರ ಮಾರ್ಗದರ್ಶನದಲ್ಲಿ ನಡೆದ ಮಾಘ ಸ್ನಾನವು ಮುಂಜಾನೆ 5ರಿಂದ ಆರಂಭವಾಯಿತು. ನೂರಾರು ಸಂಖ್ಯೆಯಲ್ಲಿ ಆಗಮಿಸಿದ್ದ ಭಕ್ತರು ಕೊರೆಯುವ ಚಳಿಯಲ್ಲೂ ಕಾವೇರಿ–ಹೇಮಾವತಿ– ಲಕ್ಷ್ಮಣ ತೀರ್ಥ ನದಿಗಳ ಪವಿತ್ರ ಸಂಗಮದ ಹಿನ್ನೀರಿನಲ್ಲಿ ಮಿಂದು ಮಾಘ ಸ್ನಾನ ಮಾಡಿ ಸೂರ್ಯ ಭಗವಾನನಿಗೆ ಅರ್ಘ್ಯ ಅರ್ಪಿಸಿದರು. ನಂತರ ನದಿಯ ದಂಡೆಯಲ್ಲಿ ರಚಿಸಲಾಗಿದ್ದ ಸೂರ್ಯ ಮಂಡಲಕ್ಕೆ 108 ಬಾರಿ ಪ್ರದಕ್ಷಿಣೆ ಮಾಡಿ ಸೂರ್ಯ ನಮಸ್ಕಾರ ಮಾಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಧಾರ್ಮಿಕ ಚಿಂತಕ ವೇ.ಬ್ರ.ಗೋಪಾಲಕೃಷ್ಣ ಅವದಾನಿ, ಮಾಘ ಮಾಸದಲ್ಲಿ


ಉದಯವಾಹಿನಿ ಚಿತ್ರ

ನದಿ ಸ್ನಾನ ಮಾಡುವದು ಧಾರ್ಮಿಕವಾಗಿ ಮಾತ್ರವಲ್ಲ, ಆರೋಗ್ಯದ ದೃಷ್ಟಿಯಿಂದಲೂ ಶ್ರೇಷ್ಠವಾದುದು. ಈ ಮಾಸದಲ್ಲಿ ಪ್ರಯಾಗರಾಜ್‌ನಲ್ಲಿ ಮಹಾಕುಂಭಮೇಳ ನಡೆಯುತ್ತಿದ್ದು ಭಾಗವಹಿಸಲಾಗದವರು ಮೂರು ನದಿಗಳು ಸಂಗಮಿಸುವ ನದಿ ನೀರಿನಲ್ಲಿ ಸ್ನಾನ ಮಾಡುವದರಿಂದ ಅಷ್ಟೇ ಪುಣ್ಯ ಲಭಿಸುತ್ತದೆ. ಸೋಮವಾರ ದಿಂದ ತಿ.ನರಸೀಪುರದಲ್ಲಿಯೂ ಕುಂಭಮೇಳ ನಡೆಯುತಿದ್ದು, ನಮ್ಮಲ್ಲಿಯೂ 2022ರಲ್ಲಿ ದಕ್ಷಣ ಭಾರತದ ಮಹಾಕುಂಭಮೇಳ ನಡೆದಿತ್ತು.

ಆದ್ದರಿಂದ ನದಿಸ್ನಾನ ಸಂಖ ನಿವಾರಕವಾಗಿದ್ದು, ಅದರೊಂದಿಗೆ ಸೂರ್ಯ ನಮಸ್ಕಾರವನ್ನೂ ಮಾಡಿರುವದರಿಂದ ಎಲ್ಲರಿಗೂ ಶುಭವಾಗುತ್ತದೆಂದು ಹೇಳಿದರು. ಪುರೋಹಿತರಾದ ರೋಹಿತ್ ಶರ್ಮ, ಮಾಲತೇಶ್, ಭಟ್ಟ, ರಾಘವೇಂದ್ರ, ನಾಗಮಂಗಲ ಮಂಜುನಾಥಸ್ವಾಮಿ ಭಾಗವಹಿಸಿದ್ದರು.

---

# ಪ್ರತಿನಿತ್ಯ ಹೆಚ್ಚುತ್ತಿದೆ ಅಗ್ನಿ ಅಪಘಡ: ತುರ್ತಾಗಿ ಬೇಕಿದೆ ಜಲವಾಹನ

• **ಉದಯವಾಹಿನಿ, ತಿಪಟೂರು**

784 ಚ ಕಿ.ಮೀ ವ್ಯಾಪ್ತಿಯ ಭೌಗೋಳಿಕ ಪ್ರದೇಶ ಹಾಗೂ ಹತ್ತು ಸಾವಿರ ಎಕರೆ ಅರಣ್ಯ ಪ್ರದೇಶವಿರುವ ತಾಲ್ಲೂಕಿನಲ್ಲಿ ಬೆಂಕಿ ಅವಘಡಗಳನ್ನು ನಂದಿಸಲು ವ್ಯವಸ್ಥಿತವಾದ ಜಲವಾಹನವಿಲ್ಲ.

ತಾಲ್ಲೂಕಿನಲ್ಲಿ ಬೇಸಿಗೆ ಆರಂಭಕ್ಕೆ ಮುನ್ನವೇ ಈಗಾಗಲೇ ಪ್ರತಿನಿತ್ಯ ಸುಮಾರು 3ರಿಂದ 4 ಕಡೆ ಅಗ್ನಿ ಅವಘಡಗಳು ಸಂಭವಿಸುತ್ತಿದ್ದು, ಬೆಂಕಿ ನಂದಿಸಲು ತಿಪಟೂರು ತಾಲ್ಲೂಕಿನಲ್ಲಿ ಕೇವಲ 500 ಲೀಟರ್ ಸಾಮರ್ಥ್ಯದ ತುರ್ತು ಸ್ಪಂದನಾ ವಾಹನ ಬಿಟ್ಟರೆ (ಕ್ಯೂಆರ್‌ವಿ) ದೊಡ್ಡ ವಾಹನವು ಇಲ್ಲದೆ ತೊಂದರೆಯಾಗಿದೆ ಎಂದು ಸಾರ್ವಜನಿಕರು ದೂರಿದ್ದಾರೆ. 15 ವರ್ಷಗಳಿಂದ 4,500 ಲೀಟರ್ ಸಾಮರ್ಥ್ಯದ ವಾಹನವನ್ನು ನಿರಂತರವಾಗಿ ಅಗ್ನಿ ನಂದಿಸುವ ಕಾರ್ಯಾಚರಣೆಗೆ ಬಳಸಲಾಗುತ್ತಿತ್ತು.

**ಪ್ರತಿವರ್ಷ ಕನಿಷ್ಠ 200ರಿಂದ 250ಕ್ಕೂ ಹೆಚ್ಚು ಅಗ್ನಿ ಅವಘಡ**


ಉದಯವಾಹಿನಿ ಚಿತ್ರ

2024 ಡಿಸೆಂಬರ್ 17ರಂದು ವಾಹನದ ಸಾಮರ್ಥ್ಯ ಪ್ರಮಾಣ ಪತ್ರ (ಎಫ್‌ಸಿ) ಮುಗಿದ ಕಾರಣ ಇದು ಮೂಲೆ ಸೇರಿದೆ.

ಪ್ರತಿವರ್ಷ ಕನಿಷ್ಠ 200ರಿಂದ 250ಕ್ಕೂ ಹೆಚ್ಚು ಅಗ್ನಿ ಅವಘಡಗಳು ಸಂಭವಿಸುತ್ತಿವೆ. ಆದರೆ ಕಳೆದ ಜನವರಿಯಲ್ಲಿ 23 ಪ್ರಕರಣಗಳು ಫೆಬ್ರವರಿಯಲ್ಲಿ ಈಗಾಗಲೇ 21 ಅಗ್ನಿ ಅವಘಡಗಳು ವರದಿಯಾಗಿವೆ. ಅರಣ್ಯ ಹಾಗೂ ರೈತರ ಜಮೀನುಗಳಲ್ಲಿ ಬೆಂಕಿ ನಂದಿಸಲು ಅಗ್ನಿಶಾಮಕದಳದ ಸಿಬ್ಬಂದಿ ಹಾಗೂ ಸಾರ್ವಜನಿಕರು ಹರಸಾಹಸ ಪಡಬೇಕಾಗಿದೆ.

> 500 ಲೀಟರ್ ನೀರು ತುಂಬಿಕೊಳ್ಳುವ ಸಾಮರ್ಥ್ಯದ ಕ್ಯೂಆರ್‌ವಿ ವಾಹನವು ಬೆಂಕಿ ಅವಘಡ ಸಂಭವಿಸುವ ಸ್ಥಳದಿಂದ ತೀರಾ ಕಡಿಮ ವ್ಯಾಪ್ತಿಯಲ್ಲಿ ಕೆಲಸ ನಿರ್ವಹಿಸುವ ಅವಕಾಶವಿರುವುದರಿಂದ ಈ ವಾಹನದಿಂದ ಹೆಚ್ಚು ಉಪಯೋಗವಿಲ್ಲದಂತಾಗಿದೆ.

ಪ್ರಸ್ತುತ 20 ಲೀಟರ್ ಸಾಮರ್ಥ್ಯದ ಎರಡು ಡಬ್ಬಗಳ ಹೊಂದಿರುವ ನೊರೆ ದ್ರಾವಣದ ಬುಲೆಟ್ ದ್ವಿಚಕ್ರ ವಾಹನವಿದ್ದು ಇದನ್ನು ಕೊಬ್ಬರಿ, ಕಾಯಿ ಫ್ಯಾಕ್ಟರಿಗಳಲ್ಲಿ ಅಪಘಡಗಳು ಸಂಭವಿಸಿದಾಗ ಉಪಯೋಗಿಸಲಾಗುತ್ತಿದೆ.

ತಾಲ್ಲೂಕಿನ 150ಕ್ಕೂ ಹೆಚ್ಚು ತೆಂಗಿನ ಕಾರ್ಖಾನೆಗಳಿರುವುದರಿಂದ ಈ ವಾಹನದಿಂದ ಆಗುವ ಉಪಯೋಗವು ಕಡಿಮೆಯಾಗಿದೆ.

---

# ಗ್ರಾಮ ಇರಗಪ್ಪನಹಳ್ಳಿಯಲ್ಲಿ ಶೈಕ್ಷಣಿಕ ಕ್ರಾಂತಿ

• **ಉದಯವಾಹಿನಿ, ಶಿಡ್ಲಘಟ್ಟ**

ತಾಲ್ಲೂಕಿನ ಸಾದಲಿ ಹೋಬಳಿಯಲ್ಲಿ ಇತಿಹಾಸದ ಮೆರುಗನ್ನು ಹೊತ್ತಿರುವ ಪುಟ್ಟ ಗ್ರಾಮ ಇರಗಪ್ಪನಹಳ್ಳಿಯಲ್ಲಿ ಹಲವಾರು ವರ್ಷಗಳಿಂದ ಸರ್ಕಾರಿ ಶಾಲೆಯ ಮೂಲಕ ನಡೆಯುತ್ತಿದೆ.

ಇಲ್ಲಿನ ಶೈಕ್ಷಣಿಕ ಕ್ರಾಂತಿಯಿಂದಾಗಿ ಈ ಸರ್ಕಾರಿ ಶಾಲೆಯಲ್ಲಿ ಓದಿರುವ ವಿದ್ಯಾರ್ಥಿಗಳು ವೈದ್ಯರು, ಎಂಜಿನಿಯರ್, ಉಪನ್ಯಾಸಕರು, ಶಿಕ್ಷಕರು, ವಕೀಲರು ಸೇರಿದಂತೆ ಹಲವು ವೃತ್ತಿಗಳಲ್ಲಿ ತೊಡಗಿಕೊಂಡಿದ್ದಾರೆ. ಈ ಶಾಲೆಯ ಹಿರಿಯ ವಿದ್ಯಾರ್ಥಿಗಳು ಪ್ರತಿ ವರ್ಷ ಶಾಲೆಗಾಗಿ ಹಲವಾರು ಅಗತ್ಯ ವಸ್ತುಗಳನ್ನು ನೀಡುತ್ತಿರುತ್ತಾರೆ. ವರ್ಗಾವಣೆಯಾಗುವ ಶಿಕ್ಷಕರನ್ನು



ಗೌರವಿಸಿ ಕಳುಹಿಸಿಕೊಡುವ ಪರಿಪಾಠ ರೂಢಿಸಿಕೊಂಡಿದ್ದಾರೆ. ಶಾಲೆಗೆ ಧ್ವನಿವರ್ಧಕ, ಟಿವಿ, ಪ್ರಿಂಟರ್, ರಾಷ್ಟ್ರನಾಯಕರು, ಸ್ವಾತಂತ್ರ್ಯ ಹೋರಾಟಗಾರರ ಭಾವಚಿತ್ರ ನೀಡಿದ್ದಾರೆ. ವಿದ್ಯಾರ್ಥಿಗಳಿಗೆ ಪುಸ್ತಕ, ಲೇಖನ ಸಾಮಗ್ರಿ ಹಾಗೂ ಪಠ್ಯಪುಸ್ತಕಕ್ಕೆ ಪೂರಕ ಚಟುವಟಿಕೆ ಪುಸ್ತಕಗಳನ್ನು ಪ್ರತಿ ವರ್ಷ ನೀಡುತ್ತಾರೆ. ಮಕ್ಕಳ ಏಳಿಗೆಗೆ ತುಡಿಯುವ ಎಸ್‌ಡಿಎಂಸಿ ಅಧ್ಯಕ್ಷೆ ಸ್ವಾತಿ ಬಿ.ಪ್ರದೀಪ್ ಎಲ್ಲಾ ವಿದ್ಯಾರ್ಥಿಗಳಿಗೂ ತಟ್ಟೆ ಲೋಟಗಳನ್ನು ಕೊಡಿಸಿದ್ದಾರೆ. ಈ ಶಾಲೆಯ ವಿಶೇಷತೆಯೆಂದರೆ 8ನೇ ತರಗತಿಯ ಬಹುತೇಕ ವಿದ್ಯಾರ್ಥಿಗಳು ಎನ್‌ಎಂಎಂಎಸ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ದ್ವಿತೀಯ ಪಿಯುಸಿ ವರೆಗೂ ವಿದ್ಯಾರ್ಥಿವೇತನ ಪಡೆಯುತ್ತಿರುವರು. ಶಾಲೆಯ ವಿದ್ಯಾರ್ಥಿಗಳು ಮೊರಾರ್ಜಿ, ನವೋದಯ ವಸತಿ ಶಾಲೆಗಳು ನಡೆಸುವ ಪರೀಕ್ಷೆಗಳಲ್ಲಿ ಹೆಚ್ಚೆಚ್ಚು ಮಂದಿ ಉತ್ತೀರ್ಣರಾಗುತ್ತಾರೆ. ಇರಗಪ್ಪನಹಳ್ಳಿಯ ಸರ್ಕಾರಿ ಶಾಲೆ ಆರಂಭವಾದದ್ದು 1965ರಲ್ಲಿ. ಆಗ 1 ರಿಂದ 4ನೇ ತರಗತಿಯವರೆಗೆ ಇದ್ದದ್ದು, ನಂತರ 1996 ರಲ್ಲಿ 5, 6 ಮತ್ತು 7ನೇ ತರಗತಿಗಳು ಪ್ರಾರಂಭಗೊಂಡವು. ಮುಂದೆ, 2003 – 2004ರಲ್ಲಿ ಶಾಲೆಯನ್ನು ಉನ್ನತೀಕರಿಸಿ 8ನೇ ತರಗತಿಯವರೆಗೆ ಶಿಕ್ಷಣಕ್ಕೆ ಅವಕಾಶ ಕಲ್ಪಿಸಲಾಯಿತು.


---

# ಬ್ಯಾಡರಹಳ್ಳಿಯಲ್ಲಿ ಶಾಲಾ ವಿದ್ಯಾರ್ಥಿಗಳು ಬಸ್ ತಡೆದು ಪ್ರತಿಭಟನೆ

• **ಉದಯವಾಹಿನಿ, ಪಾಂಡವಪುರ**

ಸಮರ್ಪಕ ಸಾರಿಗೆ ಬಸ್‌ಗೆ ಒತ್ತಾಯಿಸಿ ತಾಲ್ಲೂಕಿನ ದೊಡ್ಡ ಬ್ಯಾಡರಹಳ್ಳಿಯಲ್ಲಿ ಶಾಲಾ ವಿದ್ಯಾರ್ಥಿಗಳು ಶನಿವಾರ ಬಸ್ ತಡೆದು ಪ್ರತಿಭಟನೆ ನಡೆಸಿದರು.ಮಂಡ್ಯದಿಂದ ಪಾಂಡವಪುರ ಕಡೆಗೆ ತೆರಳುತ್ತಿದ್ದ ಸಾರಿಗೆ ಬಸ್ ತಡೆದು ಪ್ರತಿಭಟನೆ ನಡೆಸಿ ಸಾರಿಗೆ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಸ್ಥಳಕ್ಕೆ ಬಂದ ಸಾರಿಗೆ ಬಸ್ ಡಿಪೋ ಮ್ಯಾನೇಜರ್ ರಘು ಅವರನ್ನು ತರಾಟೆಗೆ ತೆಗುದುಕೊಂಡರು. ಮಂಡ್ಯದಿಂದ ಪಾಂಡವಪುರಕ್ಕೆ ಸಂಪರ್ಕಿಸುವ ಸಾರಿಗೆ ಬಸ್‌ಗಳು ಬೆಳಿಗ್ಗೆ ಮತ್ತು ಸಂಜೆ ಸರಿಯಾದ ಸಮಯಕ್ಕೆ ಬರುತ್ತಿಲ್ಲ. ಇದರಿಂದ ಶಾಲಾ–ಕಾಲೇಜಿಗೆ ತೆರಳುವ ವಿದ್ಯಾರ್ಥಿಗಳಿಗೆ ಅನಾನುಕೂಲ ಉಂಟಾಗುತ್ತಿದೆ. ಜತೆಗೆ ಸಂಜೆ ಸಮಯದಲ್ಲೂ ಸಹ ಬಸ್ ಸಂಚಾರದ ಕೊರತೆ ಇದೆ. ಕಳೆದ ಮೂರು ತಿಂಗಳಿಂದಲೂ ಸಹ ಇದೇ ರೀತಿ ಬಸ್ ಸಮಸ್ಯೆ ಉಂಟಾಗುತ್ತಿದೆ. ವಿದ್ಯಾರ್ಥಿಗಳು ಬಸ್ ನಿಲ್ಲಿಸುವಂತೆ ಕೈತೋರಿಸಿದರೂ ನಿಲ್ಲಿಸುವುದಿಲ್ಲ.


ಉದಯವಾಹಿನಿ ಚಿತ್ರ

> ಡಿಪೋ ಮ್ಯಾನೇಜರ್ ರಘು ಮಾತನಾಡಿ, ಬಸ್ ಸಂಚಾರದಲ್ಲಿ ವ್ಯತ್ಯಯ ಉಂಟಾಗುತ್ತಿರುವುದು ಬಗ್ಗೆ, ಗಮನಹರಿಸಿ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಬಸ್ ನಿಯೋಜನೆ ಮಾಡಲಾಗುವುದು ಎಂದು ಭರವಸೆ ನೀಡಿದರು.

ಈ ಸಂಬಂಧ ಅಧಿಕಾರಿಗಳಿಗೆ ಹಲವು ಬಾರಿ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ ಎಂದು ದೂರಿದರು. ವಿದ್ಯಾರ್ಥಿಗಳಾದ ನಿತ್ಯಶ್ರೀ, ದೀಕ್ಷಿತ, ಕೃಪಶ್ರೀ, ಕೃತಿಕ, ರಂಜಿತಾ, ಪ್ರೀತಿ, ದಿವ್ಯಾ, ರೋಹಿಣಿ, ವರ್ಷ, ಸುಚಿತ್ರಾ, ಚಂದನಾ, ಅಂಜು, ಸೌಮ್ಯ, ಸುಜಿ, ಸಾನ್ನಿ ಇದ್ದರು.

---

# ನಾಲ್ಕುನಾಡು ವ್ಯಾಪ್ತಿಯಲ್ಲಿ ಉರುಸ್ ಸಂಭ್ರಮ

• **ಉದಯವಾಹಿನಿ, ನಾಪೋಕು**

ನಾಲ್ಕುನಾಡು ವ್ಯಾಪ್ತಿಯ ವಿವಿಧ ಗ್ರಾಮಗಳಲ್ಲಿ ಉರುಸ್ ಸಂಭ್ರಮ ಮನೆ ಮಾಡಿದೆ. ಇಲ್ಲಿಗೆ ಸಮೀಪದ ಚೆರಿಯಪರಂಬು, ಕುಂಜಿಲ, ಎಮ್ಮೆಮಾಡು, ಅಯ್ಯಂಗೇರಿ ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಉರುಸ್ ಸಂಭ್ರಮಕ್ಕೆ ಈಗಾಗಲೇ ಚಾಲನೆ ದೊರೆತಿದೆ. ಸಮೀಪದ ಕುಂಜಿಲ ಪೈನರಿ ಮಖಾಂ ಉರುಸ್ ಸಮಾರಂಭಆರಂಭಗೊಂಡಿದ್ದು, ಫೆ.11ರವರೆಗೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ವಿಜೃಂಭಣೆಯಿಂದ ನಡೆಯಲಿದೆ. ಅಯ್ಯಂಗೇರಿ ಗ್ರಾಮದಲ್ಲಿ ಫೆ. 21ರಂದು ಉರುಸ್ ನಡೆಯಲಿದೆ. ಸಮೀಪದ ಎಮ್ಮೆಮಾಡು ಗ್ರಾಮದಲ್ಲಿ ಪ್ರತಿವರ್ಷ ನಡೆಯುವ ವಾರ್ಷಿಕ ಉರುಸ್ ಫೆ. 21ರಿಂದ ಆರಂಭಗೊಳ್ಳಲಿದೆ. ಮಧ್ಯಾಹ್ನ ವಿಶೇಷ ಪ್ರಾರ್ಥನೆ ಹಾಗೂ ಧ್ವಜಾರೋಹಣ ಕಾರ್ಯಕ್ರಮದೊಂದಿಗೆ ಉರುಸ್ ಸಮಾರಂಭಕ್ಕೆ ಚಾಲನೆ ದೊರೆಯಲಿದೆ.

25 ರಂದು ಸಮ್ಮೇಳನ ಹಾಗೂ ಅನ್ನದಾನ ನಡೆಯಲಿದೆ. ಜಿಲ್ಲಾಕೇಂದ್ರ ಮಡಿಕೇರಿಯಿಂದ ಸುಮಾರು 32 ಕಿ.ಮೀ. ದೂರದಲ್ಲಿರುವ ಈ ಪುಟ್ಟ ಗ್ರಾಮ ಸೂಫಿ ಸಂತರ ಸಾನಿಧ್ಯದಿಂದ ಪ್ರಸಿದ್ಧಿ ಪಡೆದಿದೆ. ಸೂಫಿ ಶಹೀದ್ ಎಂಬ ಹೆಸರಿನ ದೈವಭಕ್ತ ಸಮಾಧಿ ಹೊಂದಿರುವ ಇಲ್ಲಿನ ದರ್ಗಾ ಶರೀಫ್‌ನಲ್ಲಿ ಈ ಸಂತರ ಹೆಸರಿನಲ್ಲಿ ಪ್ರತಿ ವರ್ಷ ಉರುಸ್ ನಡೆಯುತ್ತದೆ. ಅನೇಕ ವರ್ಷಗಳ ಹಿಂದೆ ಶಾಂತಿಯ ಸಂದೇಶದೊಂದಿಗೆ ಬಂದ ಸೂಫಿ ಶಹೀದ್ ಸಂತರು ತಮ್ಮ ಜೀವಿತದ ಕೊನೆಗಾಲದಲ್ಲಿ ಎಮ್ಮೆಮಾಡಿಗೆ ಬಂದು ನೆಲೆಸಿದರು.


ಉದಯವಾಹಿನಿ ಚಿತ್ರ

> ಗ್ರಾಮದ ಎಲ್ಲಾ ಜನಾಂಗದ ಬಾಂಧವರೊಂದಿಗೆ ಸ್ನೇಹ ಸೌಹಾರ್ದದ ಬಾಳ್ವೆ ನಡೆಸಿದ ಇವರು ತಮ್ಮ ಹೆಚ್ಚಿನ ವೇಳೆಯನ್ನು ದೈವಸ್ಮರಣೆಯಲ್ಲಿ ಕಳೆಯುತ್ತಿದ್ದರು. ಪೂರ್ವಕಾಲದಲ್ಲಿ ದನಕರುಗಳಿಗೆ ರೋಗ ರುಜಿನಗಳು ಕಾಣಿಸಿಕೊಂಡಾಗ ಎಮ್ಮೆಮಾಡು ದರ್ಗಾಕ್ಕೆ ಭಕ್ತಿಯಿಂದ ಹರಕೆ ಹೊತ್ತಲ್ಲಿ ರೋಗ ಶಮನಗೊಂಡ ಉದಾಹರಣೆಗಳಿವೆ. ಹಸುಕರುವಿನ ಬೆಳ್ಳಿಯ ಪ್ರತಿಕೃತಿಗಳು, ಹಾಲುತುಪ್ಪ ಇತ್ಯಾದಿ ಹೆಚ್ಚಾಗಿ ದರ್ಗಾಕ್ಕೆ ಹರಕೆಯ ರೂಪದಲ್ಲಿ ಬರುತ್ತಿರುತ್ತದೆ.

---

# ಫೆ.12ಕ್ಕೆ ಆರೋಗ್ಯ ತಪಾಸಣೆ, ರಕ್ತದಾನ ಶಿಬಿರ

• **ಉದಯವಾಹಿನಿ, ಮಾಗಡಿ**

ತಾಲ್ಲೂಕಿನ ಸೋಲೂರಿನಲ್ಲಿರುವ ಆರ್ಯ ಈಡಿಗ ಮಹಾ ಸಂಸ್ಥಾನ ಮಠದ ಆವರಣದಲ್ಲಿ ಫೆ. 12ರಂದು ಆರೋಗ್ಯ. ನೇತ್ರ ತಪಾಸಣೆ, ಶಸ್ತ್ರಚಿಕಿತ್ಸೆ ನೋಂದಣಿ ಹಾಗೂ ರಕ್ತದಾನದ ಬೃಹತ್ ಶಿಬಿರ ಆಯೋಜಿಸಲಾಗಿದೆ. ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 3ರವರೆಗೆ ಶಿಬಿರ ನಡೆಯಲಿದೆ. ಬೆಂಗಳೂರಿನ ಹೆಸರಘಟ್ಟದ ಸಪ್ತಗಿರಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ಸ್ಪರ್ಶ್ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ವೈದೇಹಿ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ, ರಾಜಾಜಿನಗರದ ವಾಸನ್ ಐ ಕೇರ್, ಕೆಎಲ್‌ಇ ದಂತ ಕಾಲೇಜು, ಮುತೂಟ್ ಸ್ನೇಹಾಶ್ರಯ, ಕಾವೇರಿ ರಕ್ತನಿಧಿ ಸಹಯೋಗದಲ್ಲಿ ಈ ಶಿಬಿರ ಹಮ್ಮಿಕೊಳ್ಳಲಾಗಿದೆ.ಮಧುಮೇಹ, ರಕ್ತದೊತ್ತಡ, ಇ.ಎನ್.ಟಿ (ಕಿವಿ, ಮೂಗು, ಗಂಟಲು) ತಪಾಸಣೆ, ಪ್ರಸೂತಿ ಸ್ತ್ರೀರೋಗ, ಶಸ್ತ್ರಚಿಕಿತ್ಸೆ ಚರ್ಮರೋಗ, ಹೃದಯರೋಗ, ಕಣ್ಣು, ಕೀಲು ಮತ್ತು ಮೂಳೆ, ನರ, ಮಕ್ಕಳ ತಪಾಸಣೆ, ಇಸಿಜಿ ಮತ್ತು ಎಕೊ ಹಾಗೂ ಸಾಮಾನ್ಯ ತಪಾಸಣೆ ಸೌಲಭ್ಯಗಳು ಶಿಬಿರದಲ್ಲಿ ಇರಲಿದೆ.

---

# ಕಳ್ಳತನಗಳಿಗಿಲ್ಲ ಕಡಿವಾಣ: ಸಂಚಾರಿ ನಿಯಮ ಅಯೋಮಯ

## ತಮಿಳುನಾಡುಗಳ ಕಸಾಯಿ ಖಾನೆಗೆ ಅಕ್ರಮ ಜಾನುವಾರುಗಳ ಸಾಗಣೆ, ಪರಿಶಿಷ್ಟರ ಮೇಲಿನ ದೌರ್ಜನ್ಯ ಪ್ರಕರಣಗಳ ಮೇಲೆ ನಿರ್ಲಕ್ಷ್ಯ

• **ಉದಯವಾಹಿನಿ, ಹನೂರು**

ಚಾಮರಾಜನಗರ ಹಿಂದುಳಿದ ಜಿಲ್ಲೆ ಎಂಬ ಹಣೆ ಪಟ್ಟಿ ಅಂಟಿಸಿಕೊಂಡಿರುವ ಚಾಮರಾಜನಗರದ ಕೇಂದ್ರಸ್ಥಾನ ಎಲ್ಲಾ ರಂಗಗಳಲ್ಲೂ ಹಿಂದೆಯೇ ಉಳಿದು ನಲುಗುತ್ತಿದ್ದರೂ ಅಧಿಕಾರಿ ವರ್ಗ ಮಾತ್ರ ಮುಂದುವರೆದು ನಳನಳಿಸುತ್ತಿರುವುದು ಜಿಲ್ಲಾಡಳಿತದ ಆಡಳಿತ ವೈಫಲ್ಯಕ್ಕೆ ಹಿಡಿದ ಕನ್ನಡಿಯಾಗಿದೆ. ಈ ಸಾಲಿಗೆ ಪೊಲೀಸ್ ಇಲಾಖೆಯೂ ಸೇರಿರುವುದು ವಿಪರ್ಯಾಸವೇ ಸರಿ. ಪೊಲೀಸ್ ಇಲಾಖೆಯ ವೈಫಲ್ಯಕ್ಕೆ ಪಟ್ಟಣದ ಜನತೆ ಹೈರಾಣಾಗುತ್ತಿದ್ದಾರೆ. ನಗರಕ್ಕೆ ನೂತನ

ಪೊಲೀಸ್ ವರಿಷ್ಠಾಧಿಕಾರಿಗಳ ಆಗಮನದ ನಂತರ ಎಲ್ಲವೂ ಅಯೋಮಯವಾಗಿದೆ. ಅಂದುಕೊಂಡಂತೆ ನಡೆಯುತ್ತಿಲ್ಲ ಎಲ್ಲೆ ಮೀರುತ್ತಿರುವ ಕಳ್ಳತನ,ದರೋಡೆ, ಇಸ್ಪೀಟು ದಂಧೆ, ಗಣಿ ಮಾಫಿಯಾ, ಕ್ಲಬ್ ಹೆಸರಿನಲ್ಲಿ ಇಸ್ಪೀಟ್ ಜೂಜಾಟ, ಮರಳು ದಂಧೆ, ಕೇರಳಾ ತಮಿಳುನಾಡುಗಳ ಕಸಾಯಿ ಖಾನೆಗೆ ಅಕ್ರಮ ಜಾನುವಾರುಗಳ ಸಾಗಣೆ, ಪರಿಶಿಷ್ಟರ ಮೇಲಿನ ದೌರ್ಜನ್ಯ ಪ್ರಕರಣಗಳ ಮೇಲೆ ನಿರ್ಲಕ್ಷ್ಯ, ಉಳ್ಳವರಿಗೆ ಟ್ರಾಫಿಕ್ ಸಲಾಂ, ಹೀಗೆ ಅಪರಾಧಗಳ ಸರಮಾಲೆಯನ್ನು ಹೊತ್ತು ನಿಂತಿದೆ ಪೊಲೀಸ್ ಇಲಾಖೆ, ಇದಕ್ಕೆ ಸ್ಪಷ್ಟ ನಿದರ್ಶನ ಪಟ್ಟಣದ ಶಾಸಕರೇ ಪೊಲೀಸ್ ಕಾರ್ಯ ವೈಖರಿ ಬಗ್ಗೆ ನೇರವಾಗಿ ಅಸಮಾಧಾನ ವ್ಯಕ್ತಪಡಿಸಿರುವುದು ಗುಟ್ಟಾಗಿ ಉಳಿದಿಲ್ಲ.



ಉದಯವಾಹಿನಿ ಚಿತ್ರ

**ಲಕ್ಷಾಂತರ ರೂ ಖರ್ಚು ಮಾಡಿ ಇತ್ತೀಚೆಗೆ ಟೈಲ್ಸ್ ಹಾಕಿ ಅಭಿವೃದ್ಧಿ**

ನೂತನ ಸಾರಥಿ ಆಗಮನದ ಆರಂಭದಲ್ಲಿಯೇ ಬ್ಯಾಟರಿ ಕಳವು ಪ್ರಕರಣ, ಪಟ್ಟಣದ ಖಾಸಗಿ ಶಾಲಾ ಹಾಗೂ ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜು ಕಳ್ಳತನದ ಪ್ರಕರಣಗಳು ದಾಖಲಾಗಿದ್ದವು. ಆದರೆ ಕಳ್ಳರು ಸಿಕ್ಕಿಬಿದ್ದರು ಸಹ ಕದ್ದ ಮಾಲ್‌ನ ರಿಕವರಿ ಇನ್ನು ಆಗಿಲ್ಲ. ಇದೆಲ್ಲವೂ ಒಮ್ಮೆಲೇ ಯೋಚಿಸಿದರೆ ನಿಜವಾಗಿಯೂ ಪೊಲೀಸ್ ವೈಫಲ್ಯತೆ ಎದ್ದು ಕಾಣುತ್ತಿದೆ. ಇತ್ತೀಚೆಗೆ ನಡೆದ ಪಟ್ಟಣದ ಹೃದಯ ಭಾಗದ ಜೋಡಿ ರಸ್ತೆಯ ಬಳಿ ಟಿ ವಿ ಎಸ್ ಶೋರೂಮ್ ಹಿಂಭಾಗ ನಡೆದ ಮನೆ ಕಳ್ಳತನದ ಪ್ರಕರಣವನ್ನು ಪರಿಶೀಲಿಸಿದಾಗ ಸುಮಾರು 750ಗ್ರಾಂ ಚಿನ್ನ ಹಾಗೂ 5ಕೆಜಿ ಬೆಳ್ಳಿ ಆಭರಣ ಜೊತೆಗೆ ನಗದು ದೋಚಿದ್ದರು ಸಹ ಇನ್ನು ಪ್ರಕರಣ ಭೇದಿಸಿಲ್ಲ. ಕಳ್ಳರಿಗೆ ಕೈ ಕೋಳ ತೊಡಿಸಿಲ್ಲ. ಅದರ ಫಲವಾಗಿ ಸ್ಥಳೀಯ ಶಾಸಕ ಇದರ ವಿರುದ್ಧ ಬಹಿರಂಗವಾಗಿ ಪೋಲಿಸ್ ಇಲಾಖೆಯ ವೈಫಲ್ಯದ ವಿರುದ್ಧ ಗರಂ ಆಗಿ ಹೇಳಿಕೆ ನೀಡಿದ್ದಾರೆ. ಪಟ್ಟಣದ ನಾಕಾಬಂದಿ ಬಿಗಿ ಮಾಡಿ ರಾತ್ರಿ ಹಾಗೂ ಹಗಲಿನ ವೇಳೆ ಅನುಮಾನಾಸ್ಪದವಾಗಿ ತಿರುಗಾಡುವ ಆಗಂತಕರನ್ನು ಹಿಡಿಯದ ಇಲಾಖೆ ಗುಬ್ಬಿ ಮೇಲೆ ಬ್ರಹ್ಮಾಸ್ತ್ರ ಎಂಬಂತೆ ಹೊರ ಊರಿನಿಂದ ಆಸ್ಪತ್ರೆ ಚಿಕಿತ್ಸೆಗೆ ,ಕೂಲಿ ವ್ಯಾಪಾರ ಮಾಡುವ ಜನರ ವಿರುದ್ಧ, ಇರುವ ಒಂದೇ ವಾಣಿಜ್ಯ ಬೀದಿ ಆದ ದೊಡ್ಡಂಗಡಿ ಬೀದಿಗೆ ಇರುವ ನಾಲ್ಕೈದು ಮೀಟರ್ ರಸ್ತೆಗೆ ನೋ ಪಾರ್ಕಿಂಗ್ ಶುಲ್ಕ ವಸೂಲಿ, ಗೂಡ್ಸ್ ಗಾಡಿಗಳು ಕಾರುಗಳ ಮೇಲೆ ದಂಡ ವಸೂಲಿ ಮಾಡಿ ಕೇಸ್ ದಾಖಲಿಸುವುದು ಎಷ್ಟರ ಮಟ್ಟಿಗೆ ಸರಿ. ಲಕ್ಷಾಂತರ ರೂ ಖರ್ಚು ಮಾಡಿ ಇತ್ತೀಚೆಗೆ ಟೈಲ್ಸ್ ಹಾಕಿ ಅಭಿವೃದ್ಧಿ ಮಾಡಿದ ಫುಟ್ ಪಾತ್ ಬಹುತೇಕ ವಾಣಿಜ್ಯ ಮಳಿಗೆಗಳ ಮಾಲೀಕರ ಖಾಸಗಿ ಸ್ವತ್ತೆಂಬಂತಾಗಿ ಅತಿಕ್ರಮಣಕ್ಕೆ ಒಳಗಾಗಿರುವುದನ್ನು ಜಿಲ್ಲಾಡಳಿತದ ಪ್ರಮುಖ ಕೇಂದ್ರವಾದ ಜಿಲ್ಲಾಡಳಿತ ಭವನ, ಪೊಲೀಸ್ ವರಿಷ್ಟಾಧಿಕಾರಿಗಳ ಕಛೇರಿಗೆ ತೆರಳುವ ಬಿ.ರಾಚಯ್ಯ ಜೋಡಿ ರಸ್ತೆಯ ಗತಿ ಇದಾದರೆ ಇನ್ನು ಉಳಿದ ರಸ್ತೆಗಳ ಪರಿಸ್ಥಿತಿಯನ್ನು ಕೇಳುವ ಹಾಗೆಯೇ ಇಲ್ಲ.ಚೋಟುದ್ದದ ದೊಡ್ಡ ಅಂಗಡಿ ಬೀದಿಯ ವ್ಯಾಪಾರಸ್ಥರಿಗೆ, ಸಂಚಾರಿಗಳಿಗೆ ,ತೊಂದರೆ ಕೊಟ್ಟು ಉತ್ತರನ ಪೌರಷ ಒಲೆ ಮುಂದೆ ಎಂಬ ಗಾದೆಗೆ ತಕ್ಕಂತೆ ಮೊಬೈಲ್‌ನಲ್ಲಿ ಫೋಟೋ ತೆಗೆದು ಸಾರ್ವಜನಿಕರನ್ನು ಉದ್ದೇಶಪೂರ್ವಕವಾಗಿ ಶಿಕ್ಷೆ ನೀಡುವುದನ್ನು ಬಿಡಲಿ.

> **ಮಾಲೀಕರ ಮೇಲೆ ಸ್ಥಳೀಯ ಸಂಸ್ಥೆಯ ಆಡಳಿತದ ಜೊತೆ ಸೇರಿ ತೆರವು**
>
> ಮೊದಲಿಗೆ ಸುಗಮ ಸಂಚಾರಕ್ಕೆ ಅನುವು ಮಾಡಿ ಸಮರ್ಪಕ ಸಂಚಾರಿ ನಿಯಮವನ್ನು ಜಾರಿಗೆ ತಂದು ಜೋಡಿ ರಸ್ತೆಯಲ್ಲಿ ಪಾದಚಾರಿಗಳು ಓಡಾಡುವ ಪಾದಚಾರಿ ಜಾಗವನ್ನು ಅತಿಕ್ರಮಿಸಿರುವ ವಾಣಿಜ್ಯ ಮಳಿಗೆಗಳ ಮಾಲೀಕರ ಮೇಲೆ ಸ್ಥಳೀಯ ಸಂಸ್ಥೆಯ ಆಡಳಿತದ ಜೊತೆ ಸೇರಿ ತೆರವು ಮಾಡುವ ಕೆಲಸ ಮಾಡಲಿ. ಇದರಿಂದ ಬೆಳಿಗ್ಗೆ ಹಾಗೂ ಸಾಯಂಕಾಲ ಶಾಲಾ ಕಾಲೇಜಿಗೆ ನಡೆದು ಬರುವ ಹೆಣ್ಣು ಮಕ್ಕಳಿಗೂ ಸಹ ಫುಟ್ ಪಾತ್ ಸಂಚಾರಕ್ಕೆ ಮುಕ್ತವಾಗಿಲ್ಲ .

> ಗಣಿ ಮಾಲೀಕರ , ಬಂಡವಾಳಶಾಹಿ ಶ್ರೀಮಂತ ಮಳಿಗೆ ಮಾಲೀಕರ , ಹಣ, ರಾಜಕೀಯ ಬಲ ಉಳ್ಳವರ ನೆರವಿಗೆ ನಿಲ್ಲುವುದನ್ನು ಬಿಟ್ಟು ಇನ್ನಾದರೂ ದರೋಡೆಕೋರರ , ಪುಂಡ ಪೋಕರಿಗಳ, ಜೂಜುಕೋರರು ,ಅಕ್ರಮವಾಗಿ ಫುಟ್ ಪಾತ್ ಅತಿಕ್ರಮಣ ಮಾಡಿರುವರ , ಅಕ್ರಮ ಗಣಿ ಮರಳು ಸಾಗಾಣಿಕೆ ಮಾಡುವವರ ಮತ್ತು ಪರಿಶಿಷ್ಟರ ಮೇಲೆ ದೌರ್ಜನ್ಯ ಎಸಗುವರ ಮೇಲೆ ಕ್ರಮ ಕೈಗೊಂಡು ಜನಸ್ನೇಹಿ ಪೊಲೀಸ್ ಆಗಲಿ ಎಂಬುದು ನಾಗರಿಕರ ಆಶಯ.

---

## ಮಿನಿ ನ್ಯೂಸ್

### ಮನೆ ಬಾಗಿಲು ಒಡೆದು ಚಿನ್ನಾಭರಣ ಕಳವು

• **ಉದಯವಾಹಿನಿ, ಕನಕಪುರ**

ಮನೆ ಬಾಗಿಲು ಒಡೆದು ಚಿನ್ನದ ಸರ, ಮೊಬೈಲ್ ಕಳ್ಳತನ ಮಾಡಿರುವ ಘಟನೆ ಗೇರಹಳ್ಳಿಯಲ್ಲಿ ನಡೆದಿದೆ. ನಾಗರಾಜು ಅಲಿಯಾಸ್ ಶಿವಣ್ಣ ಎಂಬುವರ ಮನೆಯಲ್ಲಿ ಕಳವು ನಡೆದಿದೆ. ಫೆಬ್ರವರಿ 6ರಂದು ನಾಗರಾಜು ಮತ್ತು ಅವರ ಪತ್ನಿ ರಾತ್ರಿ ಮಲಗಿದ್ದಾಗ ಬಾಗಿಲು ಮೀಟಿ ಒಳನುಗ್ಗಿರುವ ಕಳ್ಳರು ಚಿನ್ನಾಭರಣ, ಮೊಬೈಲ್ ಫೋನ್ ಕಳವು ಮಾಡಿ ಪರಾರಿಯಾಗಿದ್ದಾರೆ.ಪ್ರಕರಣ ದಾಖಲಾಗಿದೆ.

### ಹಾಲಿನ ಟ್ಯಾಂಕರ್ ಪಲ್ಟಿ

• **ಉದಯವಾಹಿನಿ, ವೇಮಗಲ್**

ಕೋಲಾರ-ಚಿಕ್ಕಬಳ್ಳಾಪುರ ರಾಜ್ಯ ಹೆದ್ದಾರಿಯ ಮೇಡಿಹಾಳ ಗೇಟ್ ಬಳಿ ಸಂಜೆ ಹಾಲಿನ ಟ್ಯಾಂಕರ್ ಪಾಲ್ಟಿಯಾಗಿದ್ದು ಸುಮಾರು 18 ಸಾವಿರ ಲೀಟರ್ ಹಾಲು ಮಣ್ಣು ಪಾಲಾಗಿದೆ. ಹಾಲಿನ ಟ್ಯಾಂಕರ್ ಹೇಮಗಲ್ ಕಡೆಯಿಂದ ಕೋಲಾರ ಡೇರಿಗೆ ಸಾಗುತ್ತಿತ್ತು. ಮೇಡಿಹಾಳ ಗೇಟ್ ಬಳಿ ಶಾಲಾ ವಾಹನ ಅಡ್ಡ ಬಂದಾಗ ಅದಕ್ಕೆ ಡಿಕ್ಕಿ ಹೊಡೆಯುವುದನ್ನು ತಪ್ಪಿಸಲು ಹೋಗಿ ಪಲ್ಟಿಯಾಗಿದೆ. ಟ್ಯಾಂಕರ್ ಚಾಲಕನಿಗೆ ಸಣ್ಣ ಪುಟ್ಟ ಗಾಯಗಳಾಗಿದ್ದು ಆಸ್ಪತ್ರೆಗೆ ದಾಖಲಿಸಲಾಗಿದೆ. ಕಳೆದ ಮೂರು ನಾಲ್ಕು ತಿಂಗಳ ಹಿಂದೆ ಇದೇ ರೀತಿ, ಇದೇ ಸ್ಥಳದಲ್ಲಿ ಸರ್ಕಾರಿ ಬಸ್ಸು ಅಪಘಾತಕ್ಕೆ ಇಡಾಗಿತ್ತು. ಈ ಭಾಗದಲ್ಲಿ ಮರದ ಕೊಂಬೆಗಳು ಕೆಳಗಡೆ ಇರುವುದರಿಂದ ಬೇರೆ ರಸ್ತೆಯಿಂದ ಬರುವ ವಾಹನಗಳು ಕಾಣಿಸುವುದಿಲ್ಲ. ಹೀಗಾಗಿ ಅಪಘಾತ ಹೆಚ್ಚುತ್ತಿವೆ ಎಂದು ಸ್ಥಳೀಯರು ಆರೋಪಿಸಿದ್ದಾರೆ. ಮರದ ಕೊಂಬೆಗಳು ಕೆಳಗಿರುವ ಕಾರಣ ವೇಮಗಲ್ ಕಡೆಯಿಂದ ಕೋಲಾರಕ್ಕೆ ಸಾಗುತ್ತಿದ್ದ ಹಾಲಿನ ಟ್ಯಾಂಕರ್‌ಗೆ ಆಂಧ್ರಹಳ್ಳಿ ಕಡೆಯಿಂದ ಮುಖ್ಯ ರಸ್ತೆಗೆ ಬರುತ್ತಿದ್ದ ಶಾಲಾ ವಾಹನ ಸರಿಯಾಗಿ ಕಾಣಿಸದೆ ಅಪಘಾತ ಉಂಟಾಗಿದೆ. ಈಗಾದರೂ ಸಂಬಂಧಪಟ್ಟ ಅಧಿಕಾರಿಗಳು ಎಚ್ಚೆತ್ತುಕೊಂಡು ಇಲ್ಲಿನ ಮರದ ಕೊಂಬೆಗಳನ್ನು ಕತ್ತರಿಸುವ ಮೂಲಕ ಸುಗಮ ವಾಹನ ಸಂಚಾರಕ್ಕೆ ಅನುವು ಮಾಡಿಕೊಡಬೇಕು ಎಂದು ಸ್ಥಳೀಯರು ಒತ್ತಾಯಿಸಿದ್ದಾರೆ.

### ಬಸ್ ಓಡಿಸುತ್ತಿದ್ದಾಗಲೇ ಮೂರ್ಛೆ ಹೋದ ಚಾಲಕ

• **ಉದಯವಾಹಿನಿ, ಚಾಮರಾಜನಗರ**

45 ಪ್ರಯಾಣಿಕರಿದ್ದ ಕೆ.ಎಸ್.ಆರ್.ಟಿ.ಸಿ ಬಸ್ ಚಲಿಸುತ್ತಿದ್ದಗಲೇ ಬಸ್ ಚಾಲಕ ಏಕಾಏಕಿ ಮೂರ್ಛ ಹೊದ ಘಟನೆ ನಡೆದಿದೆ. ಬಸ್ ಓಡಿಸುತ್ತಿದ್ದಾಗಲೇ ಬಸ್ ಚಾಲಕ ಮೂರ್ಛೇ ಹೋಗಿದ್ದು. ನಿಯಂತ್ರಣ ತಪ್ಪಿದ ಬಸ್ ಮರಕ್ಕೆ ಡಿಕ್ಕಿ ಹೊಡೆದಿದೆ. ಚಾಮರಾಜನಗರ ಜಿಲ್ಲೆಯ ಹನೂರು ತಾಲೂಕಿನ ಚಿಕ್ಕರಂಗಶೆಟ್ಟಿ ದೊಡ್ಡಿ ಗ್ರಾಮದ ಬಳಿ ಈ ಘಟನೆ ನಡೆದಿದೆ. ಬಸ್ ಚಾಲಕ ಬಸ್ ಓಡಿಸುತ್ತಲೇ ಮೂರ್ಛೇ ಹೋಗಿದ್ದಾನೆ ಅಡ್ಡಾಡಿದ್ಧಿಯಾಗಿ ಓಡಿದ ಬಸ್ ರಸ್ತೆಬದಿಯ ಮರಕ್ಕೆ ಡಿಕ್ಕಿ ಹೊಡೆದಿದೆ. ಬಸ್ ಮುಂಭಾಗದಲ್ಲಿ ಕುಳಿತಿದ್ದ ಐವರು ಪ್ರಯಾಣಿಕರು ಗಾಯಗೊಂಡಿದ್ದಾರೆ. ಅದೃಷ್ಟವಶಾತ್ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ ಎಂದು ತಿಳಿದುಬಂದಿದೆ.

### ಕೃಷಿಯಲ್ಲಿ ಆಧುನಿಕ ತಂತ್ರಜ್ಞಾನ ಬಳಸಿ: ಕೆ.ಕೆ. ಹೇಮಂತ್ ಕುಮಾರ್

• **ಉದಯವಾಹಿನಿ, ಕುಶಾಲನಗರ**

ಕೂಡಿಗೆ ರಾಮೇಶ್ವರ ಕೂಡುಮಂಗಳೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಹಾಗೂ ಖಾಸಗಿ ಕಂಪನಿಯ ಆಶ್ರಯದಲ್ಲಿ ಸಂಘದ ವ್ಯಾಪ್ತಿಯ ರೈತರಿಗೆ ಶುಂಠಿ ಮತ್ತು ಅಡಿಕೆ ಬೆಳೆ ಕುರಿತು ಮಾಹಿತಿ ಕಾರ್ಯಗಾರ ನಡೆಯಿತು.ಸಹಕಾರ ಸಂಘದ ಅಧ್ಯಕ್ಷ ಕೆ.ಕೆ. ಹೇಮಂತ್ ಕುಮಾರ್ ಮಾತನಾಡಿ, 'ರೈತರು ಕೃಷಿಯಲ್ಲಿ ಅಧುನಿಕ ತಂತ್ರಜ್ಞಾನ ಬಳಕೆ ಮಾಡಬೇಕು.

ರಾಸಾಯನಿಕದೊಂದಿಗೆ ಸಾವಯವ ಗೊಬ್ಬರವನ್ನು ಬಳಕೆ ಮಾಡಿಕೊಂಡು ಉತ್ತಮ ಗುಣಮಟ್ಟದ ಬೆಳೆಯನ್ನು ಬೆಳೆಯುವಂತಾಗಬೇಕಿದೆ. ಇಂತಹ ಕೃಷಿ ಕಾರ್ಯಗಾರಗಳು ರೈತರಿಗೆ ಹೆಚ್ಚಿನ ಮಾಹಿತಿ ಒದಗಿಸಲು ಸಹಕಾರಿಯಾಗಿವೆ' ಎಂದು ತಿಳಿಸಿದರು. ಕೃಷಿಗೆ ಸಂಬಂಧಿಸಿದಂತೆ ಡಾ.ರಾಜಶೇಖರ್, ಪ್ರವೀಣ್, ಅಕ್ಷಯ್, ಹರೀಶ್ ಹೆಗಡೆ ಅವರು ಬೆಳೆಯ ಫಲವತ್ತತೆ, ರೈತರ ಜಮೀನಿನ ಮಣ್ಣು ಪರೀಕ್ಷೆಗೆ ಸಂಬಂಧಿಸಿದ ಮಾಹಿತಿ ಒದಗಿಸಿದರು. ಸಹಕಾರ ಸಂಘದ ವ್ಯಾಪ್ತಿಯ ಪ್ರಗತಿಪರ ರೈತರಾದ ಸೋಮಶೇಖರ್ ಮತ್ತು ಕೆ.ಸಿ. ಅನಿಲ್ ಕುಮಾರ್ ಅವರನ್ನು ಗೌರವಿಸಿ ಸನ್ಮಾನಿಸಲಾಯಿತು. ಕಾರ್ಯಾಗಾರದಲ್ಲಿ ಸಹಕಾರ ಸಂಘದ ನಿರ್ದೇಶಕರಾದ ಕೆ.ಪಿ. ರಾಜು, ರಾಮಚಂದ್ರ, ಎಸ್. ಎಸ್. ಕೃಷ್ಣ, ಕೃಷ್ಣಗೌಡ, ರಮೇಶ್, ಪ್ರಗತಿಪರ ರೈತರಾದ. ಸೋಮಶೇಖರ್, ಕೆ. ಸಿ. ಅನಿಲ್ ಕುಮಾರ್ ಇದ್ದರು.

### ಪರಂ ವಿರುದ್ಧ ಟೀಕೆ: ಕಾಂಗ್ರೆಸ್ ಆಕ್ಷೇಪ

• **ಉದಯವಾಹಿನಿ, ತುಮಕೂರು**

ಜಿಲ್ಲಾ ಉಸ್ತುವಾರಿ ಸಚಿವ ಜಿ.ಪರಮೇಶ್ವರ ಅವರನ್ನು ಅನಗತ್ಯವಾಗಿ ಟೀಕಿಸುವುದನ್ನು ಗ್ರಾಮಾಂತರ ಕ್ಷೇತ್ರದ ಶಾಸಕ ಬಿ.ಸುರೇಶ್‌ಗೌಡ ನಿಲ್ಲಿಸಬೇಕು ಎಂದು ಕಾಂಗ್ರೆಸ್ ಜಿಲ್ಲಾ ಘಟಕದ ಅಧ್ಯಕ್ಷ ಜಿ.ಚಂದ್ರಶೇಖರ್ ಗೌಡ ಇಲ್ಲಿ ಒತ್ತಾಯಿಸಿದರು.

ಸಚಿವರ ಬಗ್ಗೆ ಹಗುರವಾಗಿ ಮಾತನಾಡಿ, ಅನಗತ್ಯವಾಗಿ ಸರ್ಕಾರ ಟೀಕಿಸುವುದನ್ನು ಚಟವನ್ನಾಗಿ ಮಾಡಿಕೊಂಡಿದ್ದಾರೆ. ಪ್ರಚಾರಕ್ಕಾಗಿ ಇಲ್ಲ ಸಲ್ಲದ ಹೇಳಿಕೆ ನೀಡುವುದನ್ನು ನಿಲ್ಲಿಸದಿದ್ದರೆ ಘರಾವ್ ಹಾಕಲಾಗುವುದು ಎಂದು ಪತ್ರಿಕಾಗೋಷ್ಠಿಯಲ್ಲಿ ಎಚ್ಚರಿಸಿದರು. 'ಸರ್ಕಾರ ಸತ್ತು ಹೋಗಿದೆ, ಜಿಲ್ಲೆಯಲ್ಲಿ ಅಭಿವೃದ್ಧಿ ಕಾರ್ಯಗಳು ಕುಂಠಿತಗೊಂಡಿವೆ. ಸಚಿವರು ಕೇವಲ ಸಿದ್ಧಾರ್ಥ ಕಾಲೇಜಿಗೆ ಬಂದು ಹೋಗುವುದಕ್ಕೆ ಸೀಮಿತವಾಗಿದ್ದಾರೆ' ಎಂದು ಹೇಳುತ್ತಾರೆ. ಆದರೆ ಬೆಳಗಾದ ತಕ್ಷಣ ಪರಮೇಶ್ವರ ಮನೆಗೆ ಹೋಗಿ ಸುರೇಶ್‌ಗೌಡ ಕುಳಿತಿರುತ್ತಾರೆ. ಇಂತಹ ದ್ವಂದ್ವ ನೀತಿ ಬಿಡಬೇಕು ಎಂದು ಆಗ್ರಹಿಸಿದರು. ಜಿಲ್ಲಾ ಉಸ್ತುವಾರಿ ಸಚಿವರ ನೇತೃತ್ವದಲ್ಲೇ ಫಲಾನುಭವಿಗಳ ಎರಡು ಸಮಾವೇಶ ನಡೆಸಲಾಗಿದೆ. ರೂ 1,500 ಕೋಟಿ ಮೊತ್ತದ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಲಾಗಿದೆ. ಗ್ಯಾರಂಟಿ ಯೋಜನೆಗಳಿಂದ ಜಿಲ್ಲೆಗೆ ರೂ 3,500 ಕೋಟಿ ಅನುದಾನ ಬಂದಿದೆ ಎಂದು ಹೇಳಿದರು. ಕೆಪಿಸಿಸಿ ಉಪಾಧ್ಯಕ್ಷ ಮುರಳೀಧರ ಹಾಲಪ್ಪ, 'ಗ್ರಾಮಾಂತರ ವಿಧಾನಸಭಾ ಕ್ಷೇತ್ರದಲ್ಲೇ ಸಾಕಷ್ಟು ಸಮಸ್ಯೆಗಳಿದ್ದರೂ ಗಮನ ಹರಿಸುತ್ತಿಲ್ಲ. ವಿಶ್ವವಿದ್ಯಾಲಯಕ್ಕೆ ಸರಿಯಾಗಿ ಮೂಲಭೂತ ಸೌಕರ್ಯಗಳಿಲ್ಲ. ಕುಡಿಯುವ ನೀರಿನ ಸಮಸ್ಯೆ ಇದೆ. ಹೈನುಗಾರರು ಸಾಕಷ್ಟು ಸಂಕಷ್ಟದಲ್ಲಿದ್ದಾರೆ. ಅಂತಹ ವಿಚಾರಗಳ ಕಡೆಗೆ ಗಮನ ಹರಿಸಬೇಕು' ಎಂದು ಸಲಹೆ ಮಾಡಿದರು.

ಅಂತರಾಳದಿಂದ.. EDITORIAL

# ಮೌನ ಮುರಿದ ಯಡಿಯೂರಪ್ಪ

ಕೊನೆಗೂ ಯಡಿಯೂರಪ್ಪ ಮೌನ ಮುರಿದಿದ್ದಾರೆ. ಯಡಿಯೂರಪ್ಪ ವಿರುದ್ಧ ಅತ್ಯಂತ ಕೀಳುಮಟ್ಟದಲ್ಲಿ ನಿಂದನೆ ಮಾಡುತ್ತಿರುವುದನ್ನು ಯಾವುದೇ ಕಾರಣಕ್ಕೂ ಸಹಿಸಲು ಸಾಧ್ಯವಿಲ್ಲ. ನಾನು ಮೌನವಹಿಸಿದ್ದೇನೆ ಎಂದರೆ ಅದು ನನ್ನ ದೌರ್ಬಲ್ಯವಲ್ಲ. ಸೂಕ್ತ ಸಂದರ್ಭದಲ್ಲಿ ಎಲ್ಲದಕ್ಕೂ ಉತ್ತರ ನೀಡುತ್ತೇನೆ'' ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ. ವೈ. ವಿಜಯೇಂದ್ರ ಅವರು ಎಚ್ಚರಿಕೆ ನೀಡಿದ್ದಾರೆ. ಹೇಳಿಕೆ ವಿಜಯೇಂದ್ರ ಅವರದ್ದಾದರೂ, ಈ ಎಚ್ಚರಿಕೆಯ ಹಿಂದಿನ ಶಕ್ತಿ ಯಡಿಯೂರಪ್ಪ ಅವರೇ ಆಗಿದ್ದಾರೆ.




ರಾಜ್ಯದ ಭಿನ್ನಮತೀಯರಿಗೆ ಮಾತ್ರವಲ್ಲ, ಭಿನ್ನಮತೀಯರಿಂದ ಯಡಿಯೂರಪ್ಪ ವಿರುದ್ಧ ಹೇಳಿಕೆಗಳನ್ನು ಕೊಡಿಸುತ್ತಿರುವ ಬಿಜೆಪಿಯ ವರಿಷ್ಠರಿಗೂ ನೀಡಿದ ಎಚ್ಚರಿಕೆ ಇದಾಗಿದೆ. ಯತ್ನಾಳ್ ಅವರು ಯಡಿಯೂರಪ್ಪ ಮತ್ತು ಅವರ ಪುತ್ರ ವಿಜಯೇಂದ್ರ ವಿರುದ್ಧ ಬರೇ ರಾಜಕೀಯ ಭಿನ್ನಾಭಿಪ್ರಾಯಕ್ಕೆ ಸಂಬಂಧಿಸಿಯಷ್ಟೇ ಹೇಳಿಕೆಗಳನ್ನು ನೀಡುತ್ತಾ ಬಂದಿಲ್ಲ. ತೀರಾ ಮೂರನೇ ದರ್ಜೆಯ ಭಾಷೆಯಲ್ಲಿ ವಿಜಯೇಂದ್ರ ಅವರ ಮೇಲೆ ವೈಯಕ್ತಿಕ ದಾಳಿ ನಡೆಸಿದ್ದಾರೆ.

ರಾಜಕೀಯವಾಗಿ ಅನನುಭವಿ ಎಂದು ಅವರನ್ನು ನಿಂದಿಸಿರುವುದಷ್ಟೇ ಅಲ್ಲ, ಅವರ ವಿರುದ್ಧ ಅವಾಚ್ಯ ಪದಗಳನ್ನು ಕೂಡ ಹಲವು ಬಾರಿ ಬಳಸಿದ್ದಾರೆ.

ಆದರೆ ವಿಜಯೇಂದ್ರ ಮಾತ್ರ ಇವೆಲ್ಲವನ್ನು ಅತ್ಯಂತ ಮುತ್ಸದ್ದಿತನದಿಂದ, ಪ್ರಬುದ್ಧತೆಯಿಂದ ಎದುರಿಸಿದ್ದಾರೆ. ಮುಖ್ಯವಾಗಿ ಟೀಕೆಗೆ ಪ್ರತಿಯಾಗಿ ಟೀಕೆಗಳನ್ನು ಮಾಡದೆ ಬಹಳಷ್ಟು ಸಂದರ್ಭದಲ್ಲಿ ಮೌನವನ್ನು ಕಾಪಾಡಿಕೊಂಡಿದ್ದಾರೆ. ಯತ್ನಾಳ್ ಕೆಣಕಿದಷ್ಟು ವಿಜಯೇಂದ್ರ ತಾಳ್ಮೆವಹಿಸಿದ್ದಾರೆ. ಯತ್ನಾಳ್ ಗುಂಪುಗಳು ಮಾಧ್ಯಮಗಳ ಮೂಲಕ ಗದ್ದಲ ಎಬ್ಬಿಸುತ್ತಿರುವ ಹೊತ್ತಿನಲ್ಲಿ, ವಿಜಯೇಂದ್ರ ಅವರು ತನ್ನ ಜಾತಿ ಮತ್ತು ಹಣ ಬಲವನ್ನು ಬಳಸಿ ಕೊಂಡು ತಳಸ್ತರದಲ್ಲಿರುವ ಬಿಜೆಪಿ ನಾಯಕರನ್ನು ತನ್ನವರನ್ನಾಗಿಸುವಲ್ಲಿ ಭಾಗಶಃ ಯಶಸ್ವಿಯಾದರು. ತನ್ನ ಬಣದವರನ್ನು ವಿವಿಧ ಜಿಲ್ಲೆಗಳಲ್ಲಿ ಬಿಜೆಪಿಯ ಅಧ್ಯಕ್ಷರನ್ನಾಗಿ ಮಾಡಿ ವರಿಷ್ಠರಿಗೆ ತನ್ನ ಅರ್ಹತೆಯನ್ನು ಸಾಬೀತು ಪಡಿಸಿದರು. ಚುನಾವಣೆಗಳಲ್ಲಿ ವಿಜಯೇಂದ್ರ ಬಣ ಮೇಲುಗೈ ಆಗುತ್ತಿರುವುದು ಕಂಡು, 'ಹಣ ಬಲದಿಂದ ಚುನಾವಣೆಯನ್ನು ಗೆಲ್ಲುತ್ತಿದ್ದಾರೆ. ಇಂತಹ ಚುನಾವಣೆಯಲ್ಲಿ ಸ್ಪರ್ಧಿಸುವುದರಿಂದ ಪ್ರಯೋಜನವೇನು?' ಎಂದು ಯತ್ನಾಳ್ ಚುನಾವಣೆಯಿಂದ ಹಿಂದೆ ಸರಿಯುವ ಮಾತುಗಳನ್ನಾಡಿದರು

ರಾಜ್ಯಾಧ್ಯಕ್ಷ ಚುನಾವಣೆಗೆ ತನ್ನ ಪರವಾಗಿ ನಿರೀಕ್ಷಿತ ಬೆಂಬಲ ಸಿಗದೇ ಇರುವುದರಿಂದ ಯತ್ನಾಳ್ ಬಣ, ಎರಡು ದಿನಗಳ ಹಿಂದೆ ವಿಜಯೇಂದ್ರ ವಿರುದ್ಧ ದೂರನ್ನು ಹೊತ್ತುಕೊಂಡು ದಿಲ್ಲಿಗೆ ತೆರಳಿತು. ಆದರೆ ಅವರಿಗೆ ವರಿಷ್ಠರ ಭೇಟಿ ಸಾಧ್ಯವಾಗಲಿಲ್ಲ. ಇದು ಯತ್ನಾಳ್ ಬಣಕ್ಕೆ ಬಹುದೊಡ್ಡ ಹಿನ್ನಡೆಯಾಗಿದೆ. ಅವರು ಖಾಲಿ ಕೈಯೊಂದಿಗೆ ವಾಪಸಾದ ಬೆನ್ನಿಗೇ ವಿಜಯೇಂದ್ರ ಅವರು ಮೌನವನ್ನು ಮುರಿದಿದ್ದಾರೆ. ''ಕೆಲವು ನಾಯಕರ ವರ್ತನೆಯಿಂದಾಗಿ ಪಕ್ಷದ ಕಾರ್ಯಕರ್ತರು ತಲೆ ಎತ್ತಿಕೊಂಡು ತಿರುಗಾಡಲು ಸಾಧ್ಯವಿಲ್ಲದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಯಡಿಯೂರಪ್ಪ ಅವರ ತೇಜೋವಧೆ ನಡೆಯುತ್ತಿದ್ದರೂ ಅದಕ್ಕೆ ಅಂಕುಶ ಹಾಕುವ ಕೆಲಸವನ್ನು ಹಿರಿಯ ನಾಯಕರು ಮಾಡಿಲ್ಲ ಎಂಬ ನೋವು ನನಗಿದೆ'' ಎಂದು ಬಹಿರಂಗವಾಗಿ ವರಿಷ್ಠರ ವಿರುದ್ಧವೇ ಅವರು ಹರಿಹಾಯ್ದಿದ್ದಾರೆ. ಈ ನೋವನ್ನು ಹಿಂದೆ ಹಲವು ಬಾರಿ ಯಡಿಯೂರಪ್ಪ ಅವರು ವ್ಯಕ್ತಪಡಿಸಿದ್ದರು. ಇದೀಗ ಅವರ ಪುತ್ರನೂ ಅದೇ ನೋವನ್ನು ಅನುಭವಿಸುವ ಸ್ಥಿತಿ ಬಿಜೆಪಿಯೊಳಗೆ ನಿರ್ಮಾಣವಾಗಿದೆ. ಭಿನ್ನಮತ ತೀವ್ರವಾದಾಗ ಅಂತಿಮ ಪರಿಹಾರವಾಗಿ 'ರಾಜ್ಯಾಧ್ಯಕ್ಷ ಸ್ಥಾನಕ್ಕೆ ಚುನಾವಣೆ'ಯನ್ನು ವರಿಷ್ಠರು ಘೋಷಿಸಿದ್ದರು. ಕನಿಷ್ಠ ಚುನಾವಣೆ ಮುಗಿಯುವವರೆಗೆ ಯಾರೂ ಬಾಯಿ ತೆರೆಯಬಾರದು ಎಂದು ರಾಜ್ಯದ ಬಿಜೆಪಿ ಮುಖಂಡರಿಗೆ ಕಡಿವಾಣ ಹಾಕುವುದು ವರಿಷ್ಠರ ಹೊಣೆಗಾರಿಕೆಯಾಗಿತ್ತು. ಚುನಾವಣೆ ನಡೆಯುವ ಮುನ್ನವೇ, ಚುನಾವಣೆಯನ್ನು ಹಣ ಬಲದ ಮೂಲಕ ವಿಜಯೇಂದ್ರ ಗೆಲ್ಲಲು ಹೊರಟಿದ್ದಾರೆ ಎಂದು ಯತ್ನಾಳ್ ಬಣ ಆರೋಪಿಸಿತು. ಅಷ್ಟೇ ಅಲ್ಲ, ವಿಜಯೇಂದ್ರ ಮತ್ತು ಯಡಿಯೂರಪ್ಪ ವಿರುದ್ಧದ ಟೀಕೆಯನ್ನು ಮುಂದುವರಿಸಿತು. ಜಿಲ್ಲಾಧ್ಯಕ್ಷರ ಆಯ್ಕೆಯಲ್ಲಿ ವಿಜಯೇಂದ್ರ ಅವರ ಹಸ್ತಕ್ಷೇಪ ಬಿಜೆಪಿಯೊಳಗೆ ಅಸಮಾಧಾನವನ್ನು ಹೆಚ್ಚಿಸಿತು. ಇದು ಎಷ್ಟು ಬಿಗಡಾಯಿಸಿದೆಯೆಂದರೆ, ಚುನಾವಣೆ ನಡೆದು ಆ ಮೂಲಕ ರಾಜ್ಯಾಧ್ಯಕ್ಷರ ಆಯ್ಕೆಯಾದರೂ, ಆ ಆಯ್ಕೆಯನ್ನು ಪರಸ್ಪರ ಒಪ್ಪಿಕೊಳ್ಳುವ ಸ್ಥಿತಿ ರಾಜ್ಯ ಬಿಜೆಪಿಯೊಳಗಿಲ್ಲ. ವಿಜಯೇಂದ್ರ ಅವರು ಗೆದ್ದರೆ ಅವರಿಗೆ ಯತ್ನಾಳ್, ಈಶ್ವರಪ್ಪ, ಜಾರಕಿಹೊಳಿ ಮೊದಲಾದ ನಾಯಕರು ತಮ್ಮ ಸಹಕಾರವನ್ನು ನೀಡುತ್ತಾರೆಯೆ ಇದೇ ಸಂದರ್ಭದಲ್ಲಿ ಯತ್ನಾಳ್ ಬಣ ಗೆದ್ದರೆ ಅವರನ್ನು ಯಡಿಯೂರಪ್ಪ ಅವರು ಎಷ್ಟರಮಟ್ಟಿಗೆ ಒಪ್ಪಿಕೊಳ್ಳುತ್ತಾರೆ ಎನ್ನುವುದೂ ಪ್ರಶ್ನೆಯಾಗಿಯೇ ಉಳಿಯುತ್ತದೆ. ಒಟ್ಟಿನಲ್ಲಿ ಚುನಾವಣೆಯೂ ಬಿಜೆಪಿಯೊಳಗಿರುವ ಸಮಸ್ಯೆಯನ್ನು ಇತ್ಯರ್ಥಗೊಳಿಸುವ ಸಾಧ್ಯತೆಗಳು ಕಾಣುತ್ತಿಲ್ಲ. ಬಿಜೆಪಿ ವರಿಷ್ಠರು ಬಿಜೆಪಿಯೊಳಗಿರುವ ಬಣ ತಿಕ್ಕಾಟವನ್ನು ಪರಿಹರಿಸುವ ಪ್ರಾಮಾಣಿಕ ಪ್ರಯತ್ನ ನಡೆಸಿಯೇ ಇಲ್ಲ. ಪರಿಹರಿಸುವವರಂತೆ ನಟನೆ ಮಾಡುತ್ತಿದ್ದಾರೆ ಅಷ್ಟೇ. ಒಂದೆಡೆ ತಾನೇ ಚಿವುಟಿ ಮಗುವನ್ನು ಅಳುವಂತೆ ಮಾಡಿ, ಮಗದೊಂದೆಡೆ ಸಮಾಧಾನ ಮಾಡುವ ನಾಟಕವನ್ನು ಮೊದಲು ಬಿಜೆಪಿ ವರಿಷ್ಠರು ನಿಲ್ಲಿಸಬೇಕು. ಯಡಿಯೂರಪ್ಪ ಅವರಿಂದ ಪಕ್ಷದ ಚುಕ್ಕಾಣಿಯನ್ನು ಕಿತ್ತು ಅದನ್ನು ರಾಜ್ಯದ ಕೇಶವಕೃಪದ ಕೈಗೆ ಕೊಡುವ ಉದ್ದೇಶವಿದ್ದರೆ ಅದನ್ನು ನೇರವಾಗಿಯೇ ಪಕ್ಷದ ವರಿಷ್ಠರು ಮಾಡಬೇಕು.

# ಶಕ್ತಿಶಾಲಿ ಶಿವನ ದೇವಾಲಯಗಳು..!





ವಿಶ್ವಾಸ್.ಡಿ.ಗೌಡ
ಉದಯವಾಹಿನಿ, ವಿಶೇಷ

ತ್ರಿಮೂರ್ತಿ ದೇವರುಗಳಲ್ಲಿ ಶಿವನು ಕೂಡ ಒಬ್ಬನು ಹಾಗೂ ಅತ್ಯಂತ ಶಕ್ತಿಶಾಲಿ ದೇವ. ಕರ್ನಾಟಕದಲ್ಲೂ ನಾವು ಅನೇಕ ಶಿವನ ದೇವಾಲಯಗಳನ್ನು ನೋಡಬಹುದು. ಕರ್ನಾಟಕದಲ್ಲಿರುವ ಪ್ರಮುಖ ಶಿವನ ದೇವಾಲಯಗಳಾವುವು.

**ಮಹಾಬಲೇಶ್ವರ ದೇವಸ್ಥಾನ, ಗೋಕರ್ಣ:** ಗೋಕರ್ಣದಲ್ಲಿರುವ ಮಹಾಬಲೇಶ್ವರ ದೇವಾಲಯವು ಕರ್ನಾಟಕದ ಉತ್ತರ ಕನ್ನಡ ಜಿಲ್ಲೆಯ ಕಾರವಾರ ಬೀಚ್ ಅಭಿಮುಖವಾಗಿ ಶಾಸ್ತ್ರೀಯ ದ್ರಾವಿಡ ವಾಸ್ತುಶೈಲಿಯಲ್ಲಿ ನಿರ್ಮಿಸಲ್ಪಟ್ಟ ದೇವಾಲಯ ಇದಾಗಿದೆ. ಈ ದೇವಾಲಯವು ಆತ್ಮಲಿಂಗವನ್ನು ಹೊಂದಿದೆ ಮತ್ತು ಕರ್ನಾಟಕದ ಮೋಕ್ಷದ ಏಳು ಪವಿತ್ರ ಸ್ಥಳಗಳಲ್ಲಿ ಒಂದಾಗಿದೆ.

**ಮುರುಡೇಶ್ವರ ದೇವಾಲಯ, ಭಟ್ಕಳ:** ಕಂದುಕ ಬೆಟ್ಟದ ಮೇಲೆ ಮುರುಡೇಶ್ವರ ದೇವಾಲಯವನ್ನು ನಿರ್ಮಿಸಲಾಗಿದೆ ಮತ್ತು ಮೂರು ಕಡೆ ಅರಬ್ಬಿ ಸಮುದ್ರದ ನೀರಿನಿಂದ ಆವೃತವಾಗಿದೆ. ಈ ದೇವಾಲಯವು 20 ಅಂತಸ್ತಿನ ಗೋಪುರವನ್ನು ಹೊಂದಿದೆ ಮತ್ತು ವಿಶ್ವದ ಎರಡನೇ ಅತಿ ಎತ್ತರದ ಶಿವನ ಪ್ರತಿಮೆಯನ್ನು ಹೊಂದಿರುವ ದೇವಸ್ಥಾನವೆಂಬ ಪ್ರತೀತಿಗೆ ಪಾತ್ರವಾಗಿದೆ. **ಶ್ರೀಕಂಠೇಶ್ವರ ದೇವಸ್ಥಾನ, ನಂಜನಗೂಡು:** ನಂಜನಗೂಡಿ ನಲ್ಲಿರುವ ಶ್ರೀಕಂಠೇಶ್ವರ ದೇವಾಲಯವು ಕಪಿಲಾ ನದಿಯ ಬಲದಂಡೆಯಲ್ಲಿರುವ ನಂಜನಗೂಡು ಪಟ್ಟಣದಲ್ಲಿರುವ ಪುರಾತನ ಹಿಂದೂ ದೇವಾಲಯವಾಗಿದೆ. ನಂಜನಗೂಡನ್ನು ದಕ್ಷಿಣ ಕಾಶಿ ಎಂದೂ ಕರೆಯಲಾಗುತ್ತದೆ ಮತ್ತು ಶ್ರೀಕಂಠೇಶ್ವರ ದೇವರ ಪುರಾತನ ದೇವಾಲಯವು ಇದಾಗಿದೆ.

**ಕೋಟಿಲಿಂಗೇಶ್ವರ ದೇವಸ್ಥಾನ, ಕೋಲಾರ:** ಕೋಲಾರ



ಜಿಲ್ಲೆಯ ಕಮ್ಮಸಂದ್ರ ಗ್ರಾಮದಲ್ಲಿರುವ ಕೋಟಿಲಿಂಗೇಶ್ವರ ದೇವಾಲಯವು ಪ್ರಪಂಚದಲ್ಲೇ ಅತಿ ದೊಡ್ಡ ಲಿಂಗವನ್ನು ಹೊಂದಿರುವ ಶಿವ ದೇವಾಲಯವಾಗಿದೆ. ಈ ದೇವಾಲಯವು 108 ಅಡಿ ಎತ್ತರದ ಬೃಹತ್ ಲಿಂಗವನ್ನು ಮತ್ತು 35 ಅಡಿ ಎತ್ತರದ ನಂದಿ ವಿಗ್ರಹವನ್ನು ಹೊಂದಿದೆ.

**ಬಡವಿಲಿಂಗ ದೇವಸ್ಥಾನ, ಹಂಪಿ:** ಹಂಪಿಯಲ್ಲಿರುವ ಬಡವಿಲಿಂಗ ದೇವಾಲಯವು ಕರ್ನಾಟಕದಲ್ಲಿರುವ ಭಗವಾನ್ ಶಿವನ ದೇವಾಲಯವಾಗಿದೆ, ಇದು ಭಾರತದ ಅತಿ ಎತ್ತರದ ಶಿವಲಿಂಗಗಳಲ್ಲಿ ಒಂದಾಗಿದೆ.

**ಹೊಯ್ಸಳೇಶ್ವರ ದೇವಸ್ಥಾನ, ಹಳೇಬೀಡು :** ಹೊಯ್ಸಳೇಶ್ವರ ದೇವಸ್ಥಾನವು ಹಳೇಬೀಡುನಲ್ಲಿರುವ ಅತಿ ದೊಡ್ಡ ಹಿಂದೂ ದೇವಾಲಯವಾಗಿದ್ದು, ಹೊಯ್ಸಳೇಶ್ವರ ಮತ್ತು ಸಂತಾಲೇಶ್ವರ ಶಿವಲಿಂಗಗಳ ಹೆಸರುಗಳಿಂದ ಶಿವನಿಗೆ ಸಮರ್ಪಿತವಾಗಿದೆ. ಹೊಯ್ಸಳೇಶ್ವರ ದೇವಸ್ಥಾನದ ಜೊತೆಗೆ ಹಳೇಬೀಡು ಕೇದಾರೇಶ್ವರ ದೇವಸ್ಥಾನವನ್ನು ಹೊಯ್ಸಳ ಸಾಮ್ರಾಜ್ಯದ ರಾಜ ವಿಷ್ಣುವರ್ಧನ ಪ್ರಾಯೋಜಿಸಿದನು.

**ವಿರೂಪಾಕ್ಷ ದೇವಸ್ಥಾನ, ಹಂಪಿ:** ವಿರೂಪಾಕ್ಷ ದೇವಾಲಯವು ತುಂಗಭದ್ರಾ ನದಿಯ ದಡದಲ್ಲಿರುವ ಭಗವಾನ್ ಶಿವನ ರೂಪವಾದ ವಿರೂಪಾಕ್ಷ ದೇವರಿಗೆ ಸಮರ್ಪಿತವಾಗಿದೆ. ಈ ದೇವಾಲಯವನ್ನು ವಿಜಯನಗರ ಸಾಮ್ರಾಜ್ಯದ ಸಮಯದಲ್ಲಿ ನಿರ್ಮಿಸಲಾಯಿತು ಮತ್ತು ಕರ್ನಾಟಕದಲ್ಲಿ ಭೇಟಿ ನೀಡಲೇಬೇಕಾದ ಶಿವ ದೇವಾಲಯವಾಗಿದೆ.

**ದ್ವಾದಶ ಜ್ಯೋತಿರ್ಲಿಂಗ ದೇವಸ್ಥಾನ, ಬೆಂಗಳೂರು**

ದ್ವಾದಶ ಜ್ಯೋತಿರ್ಲಿಂಗ ದೇವಾಲಯವು ಬೆಂಗಳೂರಿನ ಓಂಕಾರ್ ಹಿಲ್ಸನಲ್ಲಿದೆ, ಇದು ಕರ್ನಾಟಕದ ಅತ್ಯಂತ ಭವ್ಯವಾದ ಮತ್ತು ದೈತ್ಯ ದೇವಾಲಯಗಳಲ್ಲಿ ಒಂದಾಗಿದೆ. ಈ ದೇವಾಲಯವು ಎಲ್ಲಾ 12 ಜ್ಯೋತಿರ್ಲಿಂಗಗಳನ್ನು ಹೊಂದಿದೆ ಮತ್ತು ಓಂಕಾರೇಶ್ವರ ಜ್ಯೋತಿರ್ಲಿಂಗವು ದೇವಾಲಯದ ಮುಖ್ಯ ಜ್ಯೋತಿರ್ಲಿಂಗವಾಗಿದೆ.

**ಶಿವೋಹಂ ಶಿವ ದೇವಾಲಯ, ಬೆಂಗಳೂರು:** ಶಿವೋಹಂ ಶಿವ ದೇವಾಲಯವು 65 ಅಡಿ ಎತ್ತರದ ಶಿವನ ಪ್ರತಿಮೆಯನ್ನು ಹೊಂದಿದೆ ಮತ್ತು ಬೆಂಗಳೂರಿನ ಜನಪ್ರಿಯ ಆಧ್ಯಾತ್ಮಿಕ ತಾಣವಾಗಿದೆ. ಈ ದೇವಾಲಯವು ಹಳೆಯ ವಿಮಾನ ನಿಲ್ದಾಣ ರಸ್ತೆಯಲ್ಲಿದೆ ಮತ್ತು ಮಹಾ ಶಿವರಾತ್ರಿಯಂದು 2 ಲಕ್ಷಕ್ಕೂ ಅಧಿಕ ಜನರು ಇಲ್ಲಿಗೆ ಭೇಟಿ ನೀಡುತ್ತಾರೆ.

**ಮಂಜುನಾಥ ದೇವಸ್ಥಾನ, ಧರ್ಮಸ್ಥಳ**

**ಧರ್ಮಸ್ಥಳ ಮಂಜುನಾಥ ದೇವಾಲಯವು ಕರ್ನಾಟಕದ ಅತ್ಯಂತ ಹಳೆಯ ದೇವಾಲಯಗಳಲ್ಲಿ ಒಂದಾಗಿದೆ ಮತ್ತು ಈ ದೇವಾಲಯದಲ್ಲಿ ಶಿವನನ್ನು ಮುಖ್ಯ ಆರಾಧನಾ ದೇವನಾಗಿ ಪೂಜಿಸಲಾಗುತ್ತದೆ ಮತ್ತು ಜೈನ ಧರ್ಮದ ದೇವರುಗಳನ್ನು ಹೊಂದಿದೆ.**

**ಲಡ್ಖಾನ್ ದೇವಸ್ಥಾನ, ಐಹೊಳೆ:** ಲಡ್ ಖಾನ್ ದೇವಾಲಯವು ಐಹೊಳೆಯಲ್ಲಿದೆ, ಇದು ಐಹೊಳೆಯ ಪ್ರಸಿದ್ಧ ದುರ್ಗಾ ದೇವಾಲಯದ ಸಮೀಪದಲ್ಲಿದೆ ಮತ್ತು ಇದು ಚಾಲುಕ್ಯ ರಾಜವಂಶದ ಅವಧಿಯಲ್ಲಿ ನಿರ್ಮಿಸಲ್ಪಟ್ಟ ಪ್ರಮುಖದೇವಾಲಯವಾಗಿದೆ. ಈ ದೇವಾಲಯವು ನಂದಿ ಪ್ರತಿಮೆಯೊಂದಿಗೆ ಶಿವಲಿಂಗವನ್ನು ಹೊಂದಿದೆ ಮತ್ತು ಪಂಚಾಯತಾನ ಶೈಲಿಯಲ್ಲಿ ನಿರ್ಮಿಸಲಾಗಿದೆ.

**ಮಹಾದೇವ ದೇವಸ್ಥಾನ, ಇಟಗಿ:** ಇಟಗಿಯಲ್ಲಿರುವ ಮಹಾದೇವ ದೇವಾಲಯವನ್ನು ಚಾಲುಕ್ಯ ಸಾಮ್ರಾಜ್ಯದ ರಾಜ 6ನೇ ವಿಕ್ರಮಾದಿತ್ಯನು ನಿರ್ಮಿಸಿದನು ಮತ್ತು ಸಂಪೂರ್ಣ ಪಾಶ್ಚಾತ್ಯ ಚಾಲುಕ್ಯ ಕಲೆಯ ಉತ್ತಮ ಉದಾಹರಣೆಯಾಗಿ ಇದನ್ನು ನಿರ್ಮಿಸಲಾಗಿದೆ. ಈ ದೇವಾಲಯವು ಪ್ರಧಾನ ದೇವತೆಯಾಗಿ ಶಿವಲಿಂಗವನ್ನು ಹೊಂದಿದೆ, ದೊಡ್ಡಬಸಪ್ಪ ದೇವಾಲಯ, ಗುಡೆ ಮಹಾ ಲಿಂಗೇಶ್ವರ ದೇವಾಲಯ ಮತ್ತು ಕದ್ರಿ ಮಂಜುನಾಥ ದೇವಾಲಯಗಳು ಕರ್ನಾಟಕದ ಇನ್ನಿತರ ಕೆಲವು ಶಿವ ದೇವಾಲಯಗಳಾಗಿವೆ.

ಓಂ ನಮಃ ಶಿವಾಯ.

# ಕಲಾ ನವೀನ್ ಗ್ರ್ಯಾಂಡ್ ಸೌತ್ ಇಂಡಿಯ ಶೋ

• ಉದಯವಾಹಿನಿ,ಬೆಂಗಳೂರು



ಉದಯವಾಹಿನಿ ಚಿತ್ರ

ದೇಶದ ಅತಿಡೊಡ್ಡ ಫ್ಯಾಶನ್ ಶೋ

ಚೌಡಯ್ಯ ಮೆಮೋರಿಯಲ್ ಹಾಲ್ ಕಲಾ ನವೀನ್ ಫಿಲಂ ಅಕಾಡೆಮಿ ವತಿಯಿಂದ ಗ್ರ್ಯಾಂಡ್ ಸೌತ್ ಇಂಡಿಯ ಫ್ಯಾಶನ್ ಶೋ 3ನೇ ಅವೃತ್ತಿ ಕಾರ್ಯಕ್ರಮ. ನ್ಯಾಯ ಮೂರ್ತಿಗಳಾದ ಎಂ.ಎಸ್.ಪಾಟೀಲ್ ಚಲನಚಿತ್ರ ನಿರ್ಮಾಪಕರುಗಳಾದ ಎಸ್.ಎ.ಚಿನ್ನೇಗೌಡರವರು, ಎಂ.ಎನ್.ಸುರೇಶ್ ರವರು, ಕಲಾ ನವೀನ್ ಚಲನಚಿತ್ರ ಅಕಾಡೆಮಿ ಸಂಸ್ಥಾಪಕ ಕಲಾನವೀನ್ ರವರು, ನಟ ನವೀನ್ ಶೇಖರ್, ಪ್ರೆಸ್ ಕ್ಲಬ್ ಕೌನ್ಸಿಲ್ ಅಧ್ಯಕ್ಷರಾದ ಶಿವಕುಮಾರ್ ನಾಗರನವಿಲೆ, ಸಾಹಿತಿ ನಾಗರ್ಜುನ ಶರ್ಮ, ನಿರೂಪಕಿ ಚೈತ್ರಾ, ಸಮಾಜ ಸೇವಕ ಅರ್ಜುನ್, ರೂಪದರ್ಶಿ ರೇಶ್ಮಾ, ನೃತ್ಯ ಕಲಾವಿದ ಮಹೇಶ್ ರವರು ದೀಪ ಬೆಳಗಿಸ ಗ್ರ್ಯಾಂಡ್ ಸೌತ್ ಇಂಡಿಯ ಉದ್ಘಾಟನೆ ಮಾಡಿದರು.

ನಿರೂಪಣೆಯನ್ನು ಚಲನಚಿತ್ರ ನಟ ಧನಂಜಯ್ ರವರು, ಆಶಾರವರು ನೇರವೇರಿಸಿದರು. ಫ್ಯಾಶನ್ ಶೋನಲ್ಲಿ ಚಿಕ್ಕಮಕ್ಕಳು, ಯುವ ಸಮುದಾಯ ಮತ್ತು ಮಿಸ್ಟರ್ ಆಂಡ್ ಮಿಸ್, ಮಿಸಸ್ ಗ್ರ್ಯಾಂಡ್ ಸೌತ್ ಇಂಡಿಯ ಶೋ ನಲ್ಲಿ ಭಾಗವಹಿಸಿದ್ದರು.

ಇಂದು ಭಾರತದಲ್ಲಿ ಸೌಂದರ್ಯ ಮತ್ತು ಫ್ಯಾಶನ್ ವಸ್ತ್ರಗಳ ತೊಡಲು ಉತ್ಸಾಹದಿಂದ ನಾವು ಸಹ ಅಂತರಾಷ್ಟ್ರೀಯ ಗುಣಮಟ್ಟದ ಬಟ್ಟೆಗಳು ನಮ್ಮಲ್ಲಿ ತಯಾರುಗುತ್ತಿದೆ. ಬೆಂಗಳೂರಿನಲ್ಲಿ ಫ್ಯಾಶನ್ ಶೋ ಮಾಡುವುದರಿಂದ ಹೊಸ ಪ್ರತಿಭೆಗಳಿಗೆ ಅವಕಾಶ ಸಿಗಲಿದೆ. ಚಲನಚಿತ್ರ ಮತ್ತು ಮಾಡಲ್ ಉದ್ಯಮ ಹಾಗೂ ಬಟ್ಟೆ ಉದ್ಯಮಕ್ಕೂ ಹೆಚ್ಚು ಆರ್ಥಿಕ ಲಾಭವಾಗಲಿದೆ. ಫ್ಯಾಶನ್ ಶೋ ಎಲ್ಲಾ ವರ್ಗದವರ ಭಾಗವಹಿಸಿದ್ದರು, ವಿಜೇತರಿಗೆ ಪ್ರಶಸ್ತಿ ವಿತರಣೆ ಮಾಡಲಾಯಿತು

**ನಟ ನವೀನ್ ಶೇಖರ್ ರವರು ಮಾತನಾಡಿ ಕಳೆದ 9ವರ್ಷಗಳಿಂದ ಕಲಾ ನವೀನ್ ಫಿಲಂ ಅಕಾಡೆಮಿ ಚಲನಚಿತ್ರ ರಂಗಕ್ಕೆ ಹೊಸ ಪ್ರತಿಭೆಗಳಿಗೆ ಅವಕಾಶ ದೊರಕಿಸಿಕೊಟ್ಟಿದ್ದಾರೆ. ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಹ ನೀಡಬೇಕು.ಜೀವನದಲ್ಲಿ ಶ್ರಮ ಪಟ್ಟು ಸಾಧನೆ ಮಾಡಬೇಕು. ಕ್ಯಾಮರ ಮುಂದೆ ಅಭಿನಯಿಸುವುದು ಬಹಳ ಕಷ್ಟ, ಕಲೆಯ ಕುರಿತು ಉತ್ತಮ ಅಭ್ಯಾಸ ತರಭೇತಿ ಪಡೆದಾಗ ಉತ್ತಮ ಕಲಾವಿದನಾಗಲು ಸಾಧ್ಯ. ಕನ್ನಡ ನಾಡಿನ ನೂರಾರು ಕಲಾವಿದರು ರಾಷ್ಟ್ರದ ಚಲನಚಿತ್ರರಂಗದಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ ಎಂದು ಹೇಳಿದರು. ಆಯೋಜಕರಾದ ಕಲಾ ನವೀನ್ ರವರು ಮಾತನಾಡಿ ಫ್ಯಾಶನ್ ಶೋ ಎಂದರೆ ಯುರೋಪ್ ಮತ್ತು ಅಮೇರಿಕಾ ದೇಶಗಳಲ್ಲಿ ಮಾತ್ರ ಇಂತಹ ಫ್ಯಾಶನ್ ಶೋ ಸಾಧ್ಯ ಎಂದು ಜನರ ಭಾವನೆಯಾಗಿತ್ತು.**

# ಶ್ರೀ ಶ್ರೀಸುಜಯನಿಧಿ ತೀರ್ಥರಿಗೆ ಗುರುವಂದನೆ

• ಉದಯವಾಹಿನಿ,ಬೆಂಗಳೂರು

ಅಖಿಲ ಕರ್ನಾಟಕ ಮಧ್ವ ಮಹಾಸಭಾ ವತಿಯಿಂದ ಮುಳಬಾಗಿಲು ಶ್ರೀಪಾದರಾಜ ಮಠದ ಶ್ರೀ ಶ್ರೀಸುಜಯನಿಧಿ ತೀರ್ಥರಿಗೆ ಗುರುವಂದನೆಯನ್ನು ಮಾಡಲಾಯಿತು, ನಗರದ ರಾಘವೇಂದ್ರ ಕಾಲೋನಿ, ಚಾಮರಾಜಪೇಟೆಯಲ್ಲಿರುವ ಶ್ರೀಶ್ರೀಪಾದರಾಜ ಮಠದಲ್ಲಿ ಮಹಾಸಭಾದ ಸಂಘಟನಾ ಕಾರ್ಯದರ್ಶಿ. ಶ್ರೀ. ಸುಧೀಂದ್ರ ರಾವ್, ಕೋಶಾಧ್ಯಕ್ಷ ಕೆ ವಿ ರಾಮಚಂದ್ರ, ಉಪಾಧ್ಯಕ್ಷ ಅಶ್ವತನಾರಾಯಣ ಸೇರಿದಂತೆ ಮತ್ತಿತರರು ಇದ್ದಾರೆ.


ಶ್ರೀಗಳ ಪೀಠಾರೋಹಣ ನಂತರ ಹಲವಾರು ಉತ್ತಮ ಯೋಜನೆಗಳನ್ನು ಮಾಡಿ ಮಾದರಿಯಾಗುವ ಕಾರ್ಯವನ್ನು ಮಾಡುತ್ತಿದ್ದು ಅದರ ಜತೆಗೆ ಇತ್ತೀಚಿಗೆ ನೆಡೆದ ಎಕೆಬಿಎಂಎಸ್ ಸುವರ್ಣ ಸಂಭ್ರಮದಲ್ಲಿ ಪಾಲ್ಗೊಂಡು ಜ್ಞಾನರ್ಜನೆ ನಿಧಿಯನ್ನು ಆರಂಭಿಸಲು ಶ್ರೀಮಠದ ವತಿಯಿಂದ ಒಂದು ಲಕ್ಷ ರೂಪಾಯಿ ನಿಧಿಯನ್ನು ನೀಡಿದ್ದು ಮಾದರಿಯಾಗಿದೆ ತತ್ಸಾಬಂಧ ನಮ್ಮ ಮಹಾಸಭಾದ ವತಿಯಿಂದ ಗುರುಗಳಿಗೆ ಗುರುವಂದನೆಯನ್ನು ಸಲ್ಲಿಸಿದ್ದು ಅಖಿಲ ಕರ್ನಾಟಕ ಮಧ್ವ ಮಹಾಸಭಾವು ಇಂತಹ ಉತ್ತಮ ಕಾರ್ಯವನ್ನು ಮಾಡುವುದಕ್ಕೆ ಸದಾ ಬೆಂಬಲವಾಗಿ ಅವರುಗಳ ಜತೆ ಇರುತ್ತೆ ಎಂದು ಸುಧೀಂದ್ರ ರಾವ್ ಹೇಳಿದರು.



# ರಾಯರ ಮಠದಲ್ಲಿ ಟಿ ಟಿ ಡಿ ಕಾರ್ಯಕ್ರಮದ ಸಮಾರೋಪ ಸಮಾರಂಭ

• ಉದಯವಾಹಿನಿ,ಬೆಂಗಳೂರು

ಜಯನಗರ 5ನೇ ಬಡಾವಣೆಯ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಪರಮಪೂಜ್ಯ ಶ್ರೀ1008 ಶ್ರೀ ಸುಬುಧೇಂದ್ರತೀರ್ಥ ಶ್ರೀಪಾದಂಗಳವರ ಆದೇಶದಂತೆ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದ ಸಹಕಾರ ಸಹಯೋಗದೊಂದಿಗೆ ತಿರುಮಲ ತಿರುಪತಿ ದೇವಸ್ಥಾನದ ಹಿಂದೂಧರ್ಮ ಪ್ರಚಾರ ಪರಿಷತ್ ವತಿಯಿಂದ ಶ್ರೀಮಠದ ಹಿರಿಯ ವ್ಯವಸ್ಥಾಪಕರಾದ ಆರ್.ಕೆ. ವಾದೀಂದ್ರಾಚಾರ್ ಹಾಗೂ ಟಿ ಟಿ ಡಿ ಹೆಚ್.ಡಿ.ಪಿ.ಪಿ ಸಂಚಾಲಕರಾದ ಡಾ|| ಪಿ. ಭುಜಂಗರಾವ್ ಅವರ ನೇತೃತ್ವದಲ್ಲಿ ಫೆಬ್ರವರಿ 4 ರಿಂದ 7ರ ವರೆಗೆ ನಾಲ್ಕು ದಿನಗಳ ಕಾಲ ವಿವಿಧ ಭಜನಾ ಮಂಡಳಿಗಳಿಂದ ಶ್ರೀ ಹರಿ


ಉದಯವಾಹಿನಿ ಚಿತ್ರ

ಭಜನೆ, ಮ||ಶಾ||ಸಂ|| ವಿದ್ವಾನ್ ಶ್ರೀ ಮಾದನೂರು ಪವಮಾನಾಚಾರ್ಯರಿಂದ ಶ್ರೀ ಮಧ್ವಾಚಾರ್ಯರ ಮಹಿಮೆ ವಿಷಯವಾಗಿ ಧಾರ್ಮಿಕ ಪ್ರವಚನ ಹಾಗೂ ವಿದುಷಿ ಶ್ರೀಮತಿ ಸುಷ್ಮಾ ಶ್ರೇಯಸ್ ಮತ್ತು ಸಂಗಡಿಗರಿಂದ ಹರಿನಾಮ ಸಂಕೀರ್ತನೆ ಕಾರ್ಯಕ್ರಮಗಳು ಜರುಗಿ, ಅದರ ಸಮಾರೋಪ ಸಮಾರಂಭವು ಇಂದು (ಫೆ.7) ನಡೆಯಿತು ಎಂದು ಶ್ರೀ ನಂದಕಿಶೋರ್ ಆಚಾರ್ ತಿಳಿಸಿದರು. ಈ ದಿನ ಪ್ರವಚನ ಮಂಗಳದ ಅಂಗವಾಗಿ ಶ್ರೀಮಠದ ಹಿರಿಯ ವ್ಯವಸ್ಥಾಪಕರಾದ ಆರ್. ಕೆ. ವಾದೀಂದ್ರ ಆಚಾರ್ಯರು ವಿದ್ವಾಂಸರಾದ ಮಾದನೂರು ಶ್ರೀಯುತ ಪವಮಾನ ಆಚಾರ್ಯರಿಗೆ ಶ್ರೀ ಮಠದ ಪರವಾಗಿ ಶ್ರೀ ಗುರುರಾಯರ ಶೇಷ ವಸ್ತ್ರಫಲ ಮಂತ್ರಾಕ್ಷತೆ ನೀಡಿ ಸತ್ಕರಿಸಿದರು.

# ರಾಮಾಯಣ



**ಕೈಕೇಯಿ ದೇವಿಯು ಮಂಥರೆಯ ದುರ್ಬೋಧನೆ ಗೋಳಗಾದದ್ದು**

• ಹಿಂದಿನ ಸಂಚಿಕೆಯಿಂದ 78 ನೆಯ ಅಧ್ಯಾಯ

ಈಗಲೇ ಭರತನಿಗೆ ಪಟ್ಟಾಭಿಷೇಕವನ್ನು ಮಾಡಿಸುವೆನು. ಶ್ರೀರಾಮನಿಗೆ ದೇಶತ್ಯಾಗವನ್ನು ಮಾಡಿಸುವೆನು, ನೀನು ಇದಕ್ಕೆ ತಕ್ಕ ಉಪಾಯವನ್ನು ಯೋಚಿಸಿ ಹೇಳು ಎಂದು ಕೇಳಿದಳು. ಪಾಪಸ್ವರೂಪಿಯಾದ ಮಂಥರೆಯು ಶ್ರೀರಾಮನ ಪಟ್ಟಾಭಿಷೇಕಕ್ಕೆ ಅಡ್ಡಿಯನ್ನು ಯೋಚಿಸಿ ಕೈಕೇಯಾದೇವಿಯನ್ನು ಕುರಿತು ನುಡಿದಳು. ಕೈಕೇಯಾದೇವಿ, ನಿನ್ನ ಮಗನಾದ ಭರತನಿಗೆ ರಾಜ್ಯಾಭಿಷೇಕವೂ ಶ್ರೀರಾಮನಿಗೆ ದೇಶತ್ಯಾಗವೂ ಆಗುವ ಉಪಾಯವನ್ನು ಹೇಳುತ್ತೇನೆ ಕೇಳು : ಪೂರ್ವವೃತ್ತಾಂತವು ಒಂದುಂಟು. ಆದನ್ನು ನೀನು ಮರತೆಯೋ ಅಲ್ಲದೆ ಗೋಪ್ಯವಾಗಿ ಇಟ್ಟಿದ್ದೀಯೋ ತಿಳಿಯದು. ನಾನು ನಿನಗೆ ಹಿತವಾಗಿ ಒಂದು ಮಾತನ್ನು ಹೇಳುತ್ತೇನೆ. ಆ ಮಾತು ನಿನಗೆ ಸಮ್ಮತವಾದರೆ ಹಾಗೆ ಮಾಡು, ಪೂರ್ವದಲ್ಲಿ ದೇವದಾನವರ ಯುದ್ಧದಲ್ಲಿ ದಶರಥ ರಾಯನು ಸಮಸ್ತ ರಾಜರ್ಷಿಗಳ ಸಂಗಡ ನಿನ್ನನ್ನು ಕರೆದುಕೊಂಡು ದೇವೇಂದ್ರನಿಗೆ ಸಹಾಯಕನಾಗಿ ದಂಡಕಾರಣ್ಯ ದೇಶಗಳನ್ನು ಕಳೆದು ತೆಂಕಣ ರಾಜ್ಯಕ್ಕೆ ತೆರಳಿದನು. ಅಲ್ಲಿ ಅತಿ ಮಾಯಾವಿಯಾದ ಶಂಬರನೆಂಬ ಮಹಾರಾಕ್ಷಸನಿದ್ದ ವೈಜಯಂತವೆಂಬ ಪಟ್ಟಣಕ್ಕೆ ಹೋದನು. ಆಗ ಶಂಬರಾಸುರನು ದೇವೇಂದ್ರಾದಿದೇವತೆಗಳಿಗೆ ಸಹಾಯಕನಾಗಿ ಹೋದ ದಶರಥರಾಯನ ಸೇನೆಯು ಮಲಗಿರುವ ಸಮಯದಲ್ಲಿ ಮೋಸದಿಂದ ಎಲ್ಲರನ್ನೂ ಸಂಹರಿಸಲು ನಿನ್ನ ಪತಿಯಾದ ದಶರಥರಾಯನು ಮಹತ್ವಾದ ಯುದ್ಧವನ್ನು ಮಾಡಿ ಆ ರಾಕ್ಷಸನ ಆಸ್ತ್ರಗಳಿಂದ ಗಾಯಪಟ್ಟು ಮೂರ್ಜಿತನಾದನು. ಆಗ ನೀನು ಆ ರಾಯನನ್ನು ರಣರಂಗದಿಂದ ದೂರ ಒಯ್ದು ರಕ್ಷಿಸಿದೆ. ಆತನು ನಿನ್ನನ್ನು ಮೆಚ್ಚಿ ಸಂತೋಷದಿಂದ ಎರಡು ವರಗಳನ್ನು ಕೊಡುವುದಾಗಿ ಹೇಳಿದನು. ನೀನು ನಿನಗೆ ಮನಸ್ಸು ಬಂದಾಗ ಬೇಡಿಕೊಳ್ಳುವುದಾಗಿಯೂ, ಅದುವರೆಗೂ ಆ ಎರಡು ವರಗಳೂ ಆತನ ವಶದಲ್ಲಿಯೇ ಇರಲೆಂದೂ ಹೇಳಿದೆ. ದಶರಥರಾಯನು ಹಾಗೆಯೇ ಆಗಲೆಂದು ಅಂಗೀಕರಿಸಿದನು. ಈ ವೃತ್ತಾಂತವನ್ನು ನೀನೇ ನನಗೆ ಹೇಳಿದ್ದೀಯೆ. ನೀನು ಅದನ್ನು ಮರತೆ, ನಾನು ನಿನ್ನ ಮೇಲಣ ಪ್ರೀತಿಯಿಂದ ಮನಸ್ಸಿನಲ್ಲಿಟ್ಟುಕೊಂಡಿದ್ದೇನೆ. ಈಗ ಆ ಎರಡು ವರಗಳನ್ನು ಕೊಡೆಂದು ನಿನ್ನ ಪತಿಯನ್ನು ಬೇಡಿಕೊ. ಒಂದು ವರದಿಂದ ಭರತನಿಗೆ ಪಟ್ಟಾಭಿಷೇಕವನ್ನು ಮಾಡಿಸು, ಮತ್ತೊಂದು ವರದಿಂದ ಶ್ರೀರಾಮನಿಗೆ ಹದಿನಾಲ್ಕು ಸಂವತ್ಸರ ಪರ್ಯಂತ ವನವಾಸವಾಗುವ ಹಾಗೆ ಮಾಡು, ಶ್ರೀರಾಮನುನಿಂದ ಪರಾಭವಿಸಲ್ಪಡುವನು. ಪೂರ್ವದಲ್ಲಿ ಕೌಸಲಾದೇವಿಯನ್ನು ನೀನು ಗರ್ವದಿಂದ ತಿರಸ್ಕಾರ ನನ್ನು ಮಾಡಿದೆ. ನಿನ್ನ ತಿರಸ್ಕಾರವನ್ನು ಸಹಿಸಿದ್ದ ಆ ದೇವಿಯು ನಿನ್ನಲ್ಲಿ ವೈರವನ್ನು ಬೆಳೆಸದೆ ಸುಮ್ಮನಿರುವವಳಲ್ಲ. ಯಾವಾಗ ಶ್ರೀರಾಮನು ಪರ್ವತ ಸಮುದ್ರ ನಗರಗಳಿಂದ ಸಹಿತವಾದ ಭೂಮಿಯನ್ನು ಆಳುವನೋ ಆಗ ನೀನು ಭರತಸಹಿತಳಾಗಿ ದುಃಖವನ್ನನುಭವಿಸಬೇಕಾಗುತ್ತದೆ. ಆದಕಾರಣ ನೀನು ನಿನ್ನ ಮಗನಿಗೆ ರಾಜ್ಯವೂ ಶ್ರೀರಾಮನಿಗೆ ದನವಾಸವೂ ಆಗಬೇಕೆಂದು ಯತ್ನ ಮಾಡು ಎಂದು ಹೇಳಿದಳು.

**ಕೈಕೇಯಿ ದೇವಿಯು ಮಂಥರೆಯ ದುರ್ಬೋಧನೆ ಗೋಳಗಾದದ್ದು :** ಹೀಗೆ ಮಂಥರೆಯ ಮಾತನ್ನು ಕೇಳುತ್ತಲಿದ್ದ ಕೈಕೇಯಾದೇವಿಯು ಕೋಪಾಗ್ನಿಯಿಂದ ಜ್ವಲಿಸುತ್ತ ಬಿಸುಸುಯ್ದು ಎಲೇ ಮಂಥರೆ, ನಾನು ನಿನ್ನ ಮಾತನ್ನು ಮೀರುವವಳಲ್ಲ.

ಮುಂದುವರಿಯುವುದು...

# ಜಿಗಣಿಯಲ್ಲಿ ಹಿಂದೂ ರಾಷ್ಟ್ರ-ಜಾಗೃತಿ ಸಭೆ ಸಂಪನ್ನ !

## ಮತಾಂತರವನ್ನು ತಡೆಯಲು ಹಿಂದೂಗಳು ಧರ್ಮಶಿಕ್ಷಣ ಪಡೆಯಬೇಕು !

• ಉದಯವಾಹಿನಿ,ಬೆಂಗಳೂರು

ಭಾರತವು ಸ್ವಯಂಭೂ ಹಿಂದೂ ರಾಷ್ಟ್ರವಾಗಿದೆ ಆದರೆ 1975ರಲ್ಲಿ ದೇಶದಲ್ಲಿ ತುರ್ತು ಪರಿಸ್ಥಿತಿಯನ್ನು ಹೇರಿ, ವಿರೋಧ ಪಕ್ಷದವರನ್ನು ಜೈಲಿನಲ್ಲಿಟ್ಟು, ಭಾರತದ ಜನರ ಸ್ವಾತಂತ್ರ್ಯವನ್ನು ಕಸಿದುಕೊಂಡು ಅಂದಿನ ಕೇಂದ್ರ ಸರಕಾರ ಭಾರತವನ್ನು ಜಾತ್ಯತೀತ ರಾಷ್ಟ್ರ'ವನ್ನಾಗಿ ಮಾಡಲು ಸಂವಿಧಾನದಲ್ಲಿ ತಿದ್ದುಪಡಿಯನ್ನು ಮಾಡಿತು.

ಇದರ ಪರಿಣಾಮವಾಗಿ ಇಂದು ನೂರು ಕೋಟಿ ಜನರಿರುವ ಹಿಂದೂಗಳಿಗಾಗಿ ಒಂದೇ ಒಂದು ಹಿಂದೂರಾಷ್ಟ್ರವಿಲ್ಲ. ಅದಕ್ಕಾಗಿ ನಾವೆಲ್ಲಾ ಇಂದು ಹಿಂದೂ ರಾಷ್ಟ್ರದ ಸ್ಥಾಪನೆಗಾಗಿ ಕಟಿಬದ್ಧರಾಗೋಣ ಎಂದು ಹಿಂದೂ ಜನಜಾಗೃತಿ ಸಮಿತಿಯ ರಾಜ್ಯ ವಕ್ತಾರರಾದ ಶ್ರೀ. ಮೋಹನ್ ಗೌಡ ಇವರು ಪ್ರತಿಪಾದಿಸಿದರು. ಅವರು ಜಿಗಣಿಯ ನಿಸರ್ಗ ಲೇಔಟ್ ನಲ್ಲಿ ಆಯೋಜಿಸಲಾದ ಹಿಂದೂ ರಾಷ್ಟ್ರ-ಜಾಗೃತಿ ಸಭೆಯನ್ನು ಉದ್ಘಾಟಿಸಿ ಮಾತನಾಡಿದರು. ಈ ವೇಳೆ ಸ್ಥಳೀಯ ಹಿಂದೂ ಮುಖಂಡರಾದ ಶ್ರೀ. ರಾಜಶೇಖರ್ ರೆಡ್ಡಿ ಮತ್ತು ಸನಾತನ ಸಂಸ್ಥೆಯ ಸೌ. ದೇವಕಿ ಪುಂಡಲೀಕ ಇವರು ಉಪಸ್ಥಿತರಿದ್ದರು. 300 ಕ್ಕೂ ಅಧಿಕ ಧರ್ಮಾಭಿಮಾನಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.



ಉದಯವಾಹಿನಿ ಚಿತ್ರ

ಮೋಹನ್ ಗೌಡ ಅವರು ಮುಂದೆ ಮಾತನಾಡಿ, ಕ್ರೈಸ್ತರ ಮತಾಂತರವನ್ನು ತಡೆಯಲು ಹಿಂದೂಗಳು ಧರ್ಮಶಿಕ್ಷಣವನ್ನು ಪಡೆಯಬೇಕು. ಇಂದು ರಾಜ್ಯದಲ್ಲಿ ಮತಾಂತರ ನಿಷೇಧ ಕಾಯ್ದೆ ಇರುವಾಗಲು ಬಹುದೊಡ್ಡ ಪ್ರಮಾಣದಲ್ಲಿ ಮತಾಂತರ ನಡೆಯುತ್ತಿದೆ. ಅಮಾಯಕ ಹಿಂದೂಗಳನ್ನು ಮೋಸ ಮತ್ತು ವಂಚನೆಯಿಂದ ಮತಾಂತರ ಮಾಡಲಾಗುತ್ತಿದೆ. ಇದನ್ನು ತಡೆಯಲು ಹಿಂದೂಗಳು ದೇವಸ್ಥಾನಗಳ ಮೂಲಕ ಹಿಂದೂ ಧರ್ಮದಶಿಕ್ಷಣವನ್ನು ಸಮಾಜಕ್ಕೆ ನೀಡಬೇಕಾಗಿದೆ. ಅದರಿಂದ ಮತಾಂತರವನ್ನು ತಡೆಯಬಹುದು.

**ಸ್ಥಳೀಯ ಹಿಂದೂ ಮುಖಂಡರಾದ ಶ್ರೀ. ರಾಜಶೇಖರ್ ರೆಡ್ಡಿ ಇವರು ಮಾತನಾಡಿ, ನಮ್ಮ ಹಿರಿಯರು ನಮಗೆ ನೀಡಿದ ಈ ಸನಾತನ ಸಂಸ್ಕೃತಿ ಹಾಗೂ ಹಿಂದೂ ಧರ್ಮವನ್ನು ಉಳಿಸಿ ಬೆಳೆಸಿಕೊಂಡು ಹೋಗುವ ಅನಿವಾರ್ಯತೆ ನಮ್ಮ ಮುಂದಿದೆ, ಕಾಶ್ಮೀರಿ ಹಿಂದೂಗಳು ತಮ್ಮ ಮನೆ-ಮಠ ಬಿಟ್ಟು ಜೀವ ಉಳಿಸಿಕೊಳ್ಳಲು ಇಂದು ನಿರ್ಗತಿಕರಾಗಿ ದೇಶದ ಮೂಲೆ ಮೂಲೆಗಳಲ್ಲಿ ವಾಸಿಸುವ ಪರಿಸ್ಥಿತಿ ಬಂದಿದೆ. ನಾವೆಲ್ಲಾ ಹಿಂದೂಗಳು ಜಾತಿ-ಬೇಧ ಮರೆತು ಹಿಂದೂರಾಷ್ಟ್ರದ ಸ್ಥಾಪನೆಗಾಗಿ ಒಂದುಗೂಡೋಣ ಎಂದರು.**

ದೇಶದಲ್ಲಿ ಲವ್ ಜಿಹಾದ್, ಹಲಾಲ್ ಜಿಹಾದ್, ಜನ ಸಂಖ್ಯೆ ಅಧ್ಯಯನದ ಜಿಹಾದ್ ಮುಂತಾದ ವುಗಳ ಮೂಲಕ ಭಾರತವನ್ನು ಇಸ್ಲಾಮಿಕ್ ರಾಷ್ಟ್ರವನ್ನಾಗಿಸುವ ಪ್ರಯತ್ನ ನಡೆಯುತ್ತಿದೆ. ಈ ಎಲ್ಲಾ ಷಡ್ಯಂತ್ರಗಳನ್ನು ವಿಫಲಗೊಳಿಸಲು ಭಾರತವನ್ನು ಹಿಂದೂ ರಾಷ್ಟ್ರ ಎಂದು ಘೋಷಣೆ ಮಾಡುವುದೊಂದೇ ಪರ್ಯಾಯವಾಗಿದೆ ಎಂದರು.

**ಶ್ರೀ. ಮೋಹನ ಗೌಡ, ರಾಜ್ಯ ವಕ್ತಾರರು, ಹಿಂದೂ ಜನಜಾಗೃತಿ ಸಮಿತಿ**

ಸನಾತನ ಸಂಸ್ಥೆಯ ಸೌ. ದೇವಕಿ ಪುಂಡಲೀಕ ಇವರು ಮಾತನಾಡಿ, ಹಿಂದೂ ವಿರೋಧಿಗಳು ಸನಾತನ ಹಿಂದೂ ಧರ್ಮ ಡೆಂಗ್ಯೂ, ಮಲೇರಿಯಾ ಎನ್ನುವ ಅನೇಕ ಹಿಂದೂ ವಿರೋಧಿ ಹೇಳಿಕೆಗಳನ್ನ ನೀಡುತ್ತಿದ್ದಾರೆ, ಇದನ್ನು ನಾಶಮಾಡಬೇಕು ಎಂದು ಹೇಳುತ್ತಿದ್ದಾರೆ. ಆದರೆ ಸನಾತನ ಹಿಂದೂ ಧರ್ಮವು ನಿತ್ಯ ನೂತನವಾಗಿದ್ದು, ಇದು ಈಶ್ವರನ ನಿರ್ಮಾಣವಾದ್ದರಿಂದ ಇದಕ್ಕೆ ಅಳಿವಿಲ್ಲ. ಹಿಂದಿನ ಗುರುಕುಲ ಪದ್ಧತಿಯಲ್ಲಿ ತಂದೆ ತಾಯಿಯೇ ದೇವರು ಎನ್ನುತ್ತಿದ್ದರು, ಆದರೆ ಇದರ ವಿರುದ್ಧ ಇಂದಿನ ಮೆಕಾಲೆ ಶಿಕ್ಷಣ ಪದ್ಧತಿಯಿಂದ ಅನಾಥಶ್ರಮ, ವೃದ್ಧಾಶ್ರಮಗಳೇ ಹೆಚ್ಚಾಗಿದೆ' ಎಂದರು. ಆಪತ್ಕಾಲದಿಂದ ಸ್ವಂತದ ಮತ್ತು ತಮ್ಮ ಪರಿವಾರದ ರಕ್ಷಣೆಗಾಗಿ ಭಗವಂತನ ನಾಮಜಪ ಇಂದಿನಿಂದಲೇ ಪ್ರಾರಂಭಿಸೋಣ' ಎಂದರು.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಬೆಳಿಗ್ಗೆ | 07:30 ರಿಂದ 09:00 |
| ಗುಳಿಕ ಕಾಲ | ಮಧ್ಯಾಹ್ನ | 01:30 ರಿಂದ 03:00 |
| ಯಮಗಂಡ ಕಾಲ | ಬೆಳಿಗ್ಗೆ | 10:30 ರಿಂದ 12:00 |

**ಮೇಷ** ನಿಮ್ಮ ಅತ್ಯಂತ ಪ್ರೀತಿಯ ಕನಸು ನನಸಾಗುತ್ತದೆ. ಆದರೆ ತುಂಬಾ ಸಂತೋಷ ಸ್ವಲ್ಪ ಸಮಸ್ಯೆಗಳನ್ನು ಉಂಟುಮಾಡಬಹುದಾದ್ದರಿಂದ ನಿಮ್ಮ ಉತ್ಸಾಹವನ್ನು ನಿಯಂತ್ರಣದಲ್ಲಿರಿಸಿಕೊಳ್ಳಿ.

**ವೃಷಭ** ನಿಮ್ಮ ಚಿಂತನೆ ಮತ್ತು ಶಕ್ತಿಯನ್ನು ನೀವು ವಾಸ್ತವವಾಗಿ ಏನನ್ನು ನೋಡಬಯಸುತ್ತೀರೋ ಅದನ್ನು ಸಾಧಿಸುವಲ್ಲಿ ನಿರ್ದೇಶಿಸಿ. ಇದುವರೆಗೆ ನಿಮ್ಮ ಸಮಸ್ಯೆಯೆಂದರೆ ನೀವು ಪ್ರಯತ್ನಿಸದೇ ಕೇವಲ ಆಸೆಪಡುತ್ತೀರಿ.

**ಮಿಥುನ** ಯಾವುದಾದರೂ ಸೃಜನಾತ್ಮಕ ಕೆಲಸದಲ್ಲಿ ನಿಮ್ಮನ್ನು ತೊಡಗಿಸಿಕೊಳ್ಳಿ. ಸೋಮಾರಿಯಾಗಿ ಕುಳಿತುಕೊಳ್ಳುವ ನಿಮ್ಮ ಅಭ್ಯಾಸ ಮಾನಸಿಕ ಶಾಂತಿಗೆ ಮಾರಣಾಂತಿಕವಾಗಬಹುದು.

**ಕರ್ಕಾಟಕ** ಇಂದು ನಿಮ್ಮ ಕೆಟ್ಟ ಅಭ್ಯಾಸಗಳು ನಿಮ್ಮ ಪ್ರೇಮಿಗೆ ಕೆಟ್ಟ ಭಾವನೆ ಉಂಟು ಮಾಡಬಹುದು ಮತ್ತು ಅವರು ನಿಮ್ಮ ಮೇಲೆ ಕೋಪಗೊಳ್ಳಬಹುದು. ಹೊಸ ವಿಷಯಗಳನ್ನು ಕಲಿಯುವ ನಿಮ್ಮ ಯೋಗ್ಯತೆ ಗಮನಾರ್ಹವಾಗಿದೆ.

**ಸಿಂಹ** ನಿಮ್ಮ ಅತ್ಯಂತ ಪ್ರೀತಿಯ ಕನಸು ನನಸಾಗುತ್ತದೆ. ಆದರೆ ತುಂಬಾ ಸಂತೋಷ ಸ್ವಲ್ಪ ಸಮಸ್ಯೆಗಳನ್ನು ಉಂಟುಮಾಡಬಹುದಾದ್ದರಿಂದ ನಿಮ್ಮ ಉತ್ಸಾಹವನ್ನು ನಿಯಂತ್ರಣದಲ್ಲಿರಿಸಿಕೊಳ್ಳಿ.

**ಕನ್ಯಾ** ನೀವು ಧೀರ್ಘಕಾಲದ ಅನಾರೋಗ್ಯಕ್ಕೆ ಪರಿಹಾರ ಹುಡುಕಲು ಸಾಧ್ಯವಾಗಬಹುದು. ದಿನದ ಆರಂಭವು ಚೆನ್ನಾಗಿ ಆಗಿದರು, ಸಂಜೆಯ ಸಮಯದಲ್ಲಿ ಯಾವುದೇ ಕಾರಣದಿಂದ ನಿಮ್ಮ ಹಣ ಖರ್ಚಾಗಬಹುದು.

**ತುಲಾ** ನಿಮ್ಮ ಶೀಘ್ರ ಕ್ರಮ ನಿಮ್ಮ ಸುದೀರ್ಘವಾದ ಸಮಸ್ಯೆಯನ್ನು ಪರಿಹರಿಸುತ್ತದೆ. ಹಣಕಾಸಿನ ಭಾಗವು ಉತ್ತಮವಾಗಿರುತ್ತದೆ ಆದರೆ ಇದರೊಂದಿಗೆ ನಿಮ್ಮ ಹಣವನ್ನು ವ್ಯರ್ಥವಾಗಿ ಖರ್ಚು ಮಾಡದಂತೆ ನೋಡಿಕೊಳ್ಳಬೇಕು.

**ವೃಶ್ಚಿಕ** ನೀವು ಬಹುಕಾಲದಿಂದ ಎದುರು ನೋಡುತ್ತಿದ್ದ ಜೀವನದ ಒತ್ತಡಗಳಿಂದ ಶಮನ ಪಡೆಯುತ್ತೀರಿ. ಅವುಗಳನ್ನು ಶಾಶ್ವತವಾಗಿ ದೂರವಿಸಿರಿಸಲು ನಿಮ್ಮ ಜೀವನಶೈಲಿಯನ್ನು ಬದಲಿಸಲು ಇದು ಸರಿಯಾದ ಸಮಯ.

**ಧನಸ್ಸು** ಸಾಧ್ಯವಾದರೆ ದೀರ್ಘ ಪ್ರಯಾಣವನ್ನು ತಪ್ಪಿಸಿ. ಏಕೆಂದರೆ ನೀವು ಪ್ರಯಾಣಿಸು ತುಂಬಾ ದುರ್ಬಲರಾಗಿದ್ದೀರಿ ಹಾಗೂ ಇದು ಮತ್ತಷ್ಟು ನಿಮ್ಮನ್ನು ದುರ್ಬಲಗೊಳಿಸುತ್ತದೆ.

**ಮಕರ** ನೀವು ಪರಿಸ್ಥಿತಿಯ ನಿಯಂತ್ರಣ ಹೊಂದುತ್ತಿದ್ದಂತೆ ಆತಂಕ ಕಣ್ಮರೆಯಾಗುತ್ತದೆ. ಇದು ಧೈರ್ಯದ ಮೊದಲ ಸ್ಪರ್ಶದಲ್ಲಿ ಕುಸಿದುಹೋಗುವ ಸಾಬೂನಿನ ಗುಳ್ಳೆಯಷ್ಟೇ ಗಟ್ಟಿಯೆಂದು ನೀವು ಅರ್ಥ ಮಾಡಿಕೊಳ್ಳುತ್ತೀರಿ.

**ಕುಂಭ** ಇಂದು ನೀವು ಭರವಸೆಯ ಮಾಯಾಜಾಲದಲ್ಲಿದ್ದೀರಿ. ತಮ್ಮ ವ್ಯಾಪರಕ್ಕಾಗಿ ಮನೆಯಿಂದ ಹೊರಗೆ ಹೋಗಿರುವ ವ್ಯಾಪಾರಿಗಳು, ತನ್ನ ಹಣವನ್ನು ಜಾಗರೂಕವಾಗಿಡಿ, ಹಣದ ಕಳ್ಳತನವಾಗುವ ಸಾಧ್ಯತೆ ಇದೆ.

**ಮೀನ** ಒಬ್ಬ ಸಂತನ ಆಶೀರ್ವಾದದಿಂದ ಮನಶ್ಶಾಂತಿ. ವಿಪರೀತವಾಗಿ ಖರ್ಚು ಮಾಡುವುದನ್ನು ನಿಲ್ಲಿಸಿದಾಗ ಮಾತ್ರ ನಿಮ್ಮ ಹಣವು ನಿಮ್ಮ ಕೆಲಸಕ್ಕೆ ಬರುತ್ತದೆ, ನೀವು ಈ ವಿಷಯವನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಬಹುದು.

## ಆಕಸ್ಮಿಕ ಬೆಂಕಿ : ಅಪಾರ ಹಾನಿ

• ಉದಯವಾಹಿನಿ ಇಂಡಿ



☛ ಉದಯವಾಹಿನಿ ಚಿತ್ರ

ಇಂಡಿ ಪಟ್ಟಣದ ವಿಜಯಪುರ ರಸ್ತೆಯ ಕರ್ನಾಟಕ ಬ್ಯಾಂಕ ಹತ್ತಿರದ ಮೈನೋದ್ದಿನ ಚಪ್ಪರಬಂದ ಇವರಿಗೆ ಸೇರಿದ ಅಂಗಡಿಗೆ ಬೆಳಿಗ್ಗೆ 10.15 ಗಂಟೆಗೆ ಬೆಂಕಿ ಕಾಣಿಸಿಕೊಂಡಿದೆ. ಅಂಗಡಿಯು ಮೋಟಾರು ಬಾಯಿಕ ಶೋ ರೋಮ ಮತ್ತು ಬಿಡಿಭಾಗ ಮತ್ತು ಸೀಟ ಕವರ ಮಾರಾಟ ಮಾಡುವದಾಗಿದೆ. ಅಗ್ನಿಶಾಮಕ ಸಿಬ್ಬಂದಿ ಬಂದು ಬೆಂಕಿ ಆರಿಸುವಲ್ಲಿ ಯಶಸ್ವಿಯಾಗಿದ್ದಾರೆ. ಆದರೂ ಒಂದು ಲಕ್ಷಕ್ಕೂ ಹೆಚ್ಚು ಬೆಲೆ ಬಾಳುವ ವಸ್ತುಗಳು ಸುಟ್ಟು ಕರಕಲಾಗಿವೆ.

### ಗ್ಯಾಸ್ ಪೈಪ್ ಲೈನ್ ಸೋರಿಕೆಯಾಗಿ ಅಗ್ನಿ ಅವಘಡ

## ಮಾರ್ಗದುದ್ದಕ್ಕೂ ಹೊತ್ತಿ ಉರಿದ ಬೆಂಕಿ

• ಉದಯವಾಹಿನಿ ಧಾರವಾಡ

ಮನೆ ಮನೆಗಳಿಗೆ ಸಂಪರ್ಕ ಕಲ್ಪಿಸುವ ಗ್ಯಾಸ್ ಪೈಪ್ ಲೈನ್ ಸೋರಿಕೆಯಾಗಿ ಬೆಂಕಿ ಅವಘಢ ಸಂಭವಿಸಿರುವ ಘಟನೆ ಧಾರವಾಡದ ರಜತಗಿರಿ ಬಡಾವಣೆಯಲ್ಲಿ ನಡೆದಿದೆ. ಮನೆಗಳಿಗೆ ನೇರ ಸಂಪರ್ಕ ಕಲ್ಪಿಸುವ ಗ್ಯಾಸ್ ಪೈಪ್ ಲೈನ್ ಇದಾಗಿದ್ದು, ಬಡಾವಣೆಯಲ್ಲಿ ಪೈಪ್ ಲೈನ್ ಎರಡು ಕಡೆ ಗ್ಯಾಸ್ ಸೋರಿಕೆಯಾಗಿ ಬೆಂಕಿ ಹೊತ್ತಿಕೊಂಡಿದೆ. ಪರಿಣಾಮ ಪೈಪ್ ಲೈನ್ ಮಾರ್ಗದುದ್ದಕ್ಕೂ ಬೆಂಕಿ ಧಗಧಗನೆ ಹೊತ್ತಿ ಉರಿದಿದೆ. ಸ್ಥಳೀಯ ನಿವಾಸಿಗಳು ಆತಂಕಕ್ಕೀಡಾಗಿ ಮನೆಗಳಿಂದ ಹೊರಗೋಡಿಬಂದಿದ್ದಾರೆ.

ಸ್ಥಳಕ್ಕಾಗಮಿಸಿದ ಅಗ್ನಿಶಾಮಕ ಸಿಬ್ಬಂದಿ ಬೆಂಕಿಯನ್ನು ನಂದಿಸಲು ಹರಸಾಹಸ ಪಟ್ಟಿದ್ದಾರೆ. ವಿದ್ಯಾಗಿರಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

## ಜಾತ್ರೆಯಲ್ಲಿ ನಿಲ್ಲಿಸುವ ಕಾರುಗಳೇ ಇವರ ಟಾರ್ಗೆಟ್, ಅಂತರರಾಜ್ಯ ಕಳ್ಳನ ಬಂಧನ



☛ ಉದಯವಾಹಿನಿ ಚಿತ್ರ

• ಉದಯವಾಹಿನಿ ಕಲಬುರಗಿ

ಇತ್ತೀಚೆಗೆ ಕೋರಿಸಿದ್ದೇಶ್ವರ ಜಾತ್ರೆಯಲ್ಲಿ ಗುತ್ತಿಗೆದಾರರೋರ್ವರು ನಿಲ್ಲಿಸಿದ್ದ ಕಾರು ಕಳ್ಳತನ ಪ್ರಕರಣ ಸಂಬಂಧ ಓರ್ವ ಆರೋಪಿಯನ್ನು ಪೊಲೀಸರು ಅರೆಸ್ಟ್ ಮಾಡಿ, ಇನೋವಾ ಕಾರನ್ನು ಜಪ್ತಿ ಮಾಡಿದಿದ್ದಾರೆ. ಈ ಕುರಿತು ಮಾಹಿತಿ ನೀಡಿರುವ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ (ಎಸ್ ಪಿ) ಅಡೂರು ಶ್ರೀನಿವಾಸಲು ಅವರು, ಪ್ರಕರಣ ಸಂಬಂಧ ಅಂತರರಾಜ್ಯ ಕಳ್ಳನನ್ನು ಬಂಧಿಸಿ, ರೂ.6 ಲಕ್ಷ ಮೌಲ್ಯದ ಒಂದು ಇನ್ನೋವಾ ಕಾರನ್ನು ಮಾಲೀಕರಿಗೆ ಹಸ್ತಾಂತರಿಸಿದ್ದೇವೆ ಎಂದರು.

ಮಹಾರಾಷ್ಟ್ರದ ಆರೋಪಿ ವಿಠಲ್ ಲಸ್ಕರೆ ಎಂಬುವವನನ್ನು ಬಂಧಿಸಲಾಗಿದೆ ಎಂದ ಅವರು, ಇನ್ನಿತರೆ ಆರೋಪಿಗಳಾದ ಪ್ರಶಾಂತ, ಸಹದೇವ ತಾಂದಳೆ, ಸುನೀಲ್ ಬೀಡ್, ರಾಜು ಗಾಯಕವಾಡ್ ಎಂಬುವವರು ಕಳ್ಳತನದಲ್ಲಿ ಭಾಗಿಯಾಗಿ ಬದಾಮಿಯ ಬನಶಂಕರಿ ಜಾತ್ರೆ ಮತ್ತು ಆಂಧ್ರಪ್ರದೇಶದ ಎಮ್ಮಿಗನೂರ್ ಜಾತ್ರೆಯಲ್ಲೂ ಕಾರುಗಳನ್ನು ಕಳವು ಮಾಡಿದ್ದಾಗಿ ವಿಚಾರಣೆ ವೇಳೆ ಲಸ್ಕರೆ ಬಾಯಿ ಬಿಟ್ಟಿದ್ದಾನೆ. ಪ್ರಕರಣದ ಇನ್ನುಳಿದ ಆರೋಪಿಗಳ ಪತ್ತೆಗೆ ಪೊಲೀಸರು ಶೋಧ ನಡೆಸಿದ್ದಾರೆ ಎಂದು ವಿವರಿಸಿದರು. ಇನ್ನು ನಗರದ ಎಸ್‌ಪಿ ಕಚೇರಿ ಬಳಿ ಮಾಲೀಕನಿಗೆ ಕಾರನ್ನು ಹಸ್ತಾಂತರಿಸಲಾಯಿತು.

## ಭಾಷೆ, ಬದುಕು ಸಂಶೋಧನೆಯಾಗಲಿ: ಬಿ.ಟಿ.ಲಲಿತಾ ನಾಯಕ್

• ಉದಯವಾಹಿನಿ, ಹುಬ್ಬಳ್ಳಿ

ಬಂಜಾರ ಸಮಾಜದವರ ಮೂಲ, ಭಾಷೆಯ ಕುರಿತು ಸಂಶೋಧನೆ ನಡೆಯಬೇಕು. ಮೂಢನಂಬಿಕೆಯಿಂದ ಸಮಾಜದಲ್ಲಿ ಆಗುತ್ತಿರುವ ಅನೇಕ ತಪ್ಪುಗಳು ನಿವಾರಣೆ ಆಗಬೇಕು' ಎಂದು ಸಾಹಿತಿ ಬಿ.ಟಿ.ಲಲಿತಾ ನಾಯಕ್ ತಿಳಿಸಿದರು. ಇಲ್ಲಿ ಬಂಜಾರ ಭವನದಲ್ಲಿ ಕರ್ನಾಟಕ ಬಂಜಾರ ಸಾಹಿತ್ಯ ಪರಿಷತ್ತು ಮತ್ತು ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಬಂಜಾರ ಸಮಾಜದವರು ಹೊಸ ಕಾಲಘಟ್ಟಕ್ಕೆ ತಕ್ಕಂತೆ ಜೀವನಶೈಲಿ ರೂಢಿಸಿಕೊಳ್ಳಬೇಕು. ಸುಧಾರಣೆ ಕಂಡುಕೊಳ್ಳಲು ಸಾಹಿತ್ಯದ ಮೂಲಕ ಅವಲೋಕನ ಮಾಡಬೇಕು' ಎಂದರು.

ಮಾಜಿ ಸಚಿವ ಪಿ.ಟಿ.ಪರಮೇಶ್ವರ ನಾಯ್ಕ ಮಾತನಾಡಿ, 'ಹುಬ್ಬಳ್ಳಿಯಲ್ಲಿ ಪರಿಷತ್ತಿನ ಕಟ್ಟಡ ನಿರ್ಮಾಣಕ್ಕೆ ಸರ್ಕಾರ ನಿವೇಶನ ನೀಡಬೇಕು. ಬಂಜಾರರ ಬದುಕಿನ ಸುಧಾರಣೆಗೆ ಆದ್ಯತೆ ನೀಡಬೇಕು' ಎಂದರು. ಸಚಿವ ಸಂತೋಷ್ ಲಾಡ್



☛ ಉದಯವಾಹಿನಿ ಚಿತ್ರ

ಪರಿಷತ್ತಿನ ಲಾಂಛನ ಬಿಡುಗಡೆ ಮಾಡಿದರು.

ಪರಿಷತ್ತಿನ ಅಧ್ಯಕ್ಷ ಶ್ರೀಕಾಂತ ಆರ್.ಜಾಧವ, ಗೌರವಾಧ್ಯಕ್ಷ ಪ್ರೊ.ಪಿ.ಕೆ.ಖಂಡೋಬಾ, ಕಾರ್ಯಾಧ್ಯಕ್ಷ ಎಲ್.ಮಧುನಾಯ್ಕ ಮಾತನಾಡಿದರು. ವಿಧಾನಸಭಾ ಉಪಸಭಾಪತಿ ರುದ್ರಪ್ಪ ಲಮಾಣಿ, ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಪಿ.ರಾಜೀವ್, ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಎನ್.ಜಯದೇವ ನಾಯ್ ಗೊಟಗೋಡಿಯ ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಡಿ.ಬಿ.ನಾಯಕ ಇದ್ದರು.


# ಗರ್ಭಕೋಶದ ಮೇಲೆ ಬೆಳೆದ ಅತಿದೊಡ್ಡ 4.1ಕೆಜಿ ಗಡ್ಡೆ: ಯಶಸ್ವಿ ಶಸ್ತ್ರಚಿಕಿತ್ಸೆ

## • ಮಹಿಳೆಗೆ ಮರುಜೀವ ಕೊಟ್ಟು ಐತಿಹಾಸಿಕ ಸಾಧನೆ ಮಾಡಿದ: ಡಾ.ಬಸವೇಶ ವೈಜೇನಾಥ ಪಾಟೀಲ

• ಉದಯವಾಹಿನಿ, ಚಿಂಚೋಳಿ



☛ ಉದಯವಾಹಿನಿ ಚಿತ್ರ



**ಗ್ರಾಮೀಣ ಪ್ರದೇಶದಲ್ಲಿ ಐತಿಹಾಸಿಕ ಸಾಧನೆ**

ಪಟ್ಟಣದ ಕೇತಕಿ ಸಂಗಮೇಶ್ವರ ಮಲ್ಟಿಸ್ಪೇಷಾಲಿಟಿ ಆಸ್ಪತ್ರೆಯಲ್ಲಿ 52 ವರ್ಷದ ಮಹಿಳೆಯೊಬ್ಬಳ ಗರ್ಭಕೋಶದ ಮೇಲೆ ಬೆಳೆದ ಅತಿದೊಡ್ಡ 4.1ಕೆಜಿ ಗಡ್ಡೆಯನ್ನು ಯಶಸ್ವಿ ಶಸ್ತ್ರಚಿಕಿತ್ಸೆ ಮಾಡಿ ಹೊರತೆಗೆದು ಮಹಿಳೆ ಆರೋಗ್ಯವಾಗಿದ್ದು ಇದು ಚಿಂಚೋಳಿ ತಾಲ್ಲೂಕಿನಲ್ಲಿಯೇ ಗ್ರಾಮೀಣ ಪ್ರದೇಶದಲ್ಲಿ ಐತಿಹಾಸಿಕ ಸಾಧನೆಯನ್ನು ಡಾ.ಬಸವೇಶ ವೈಜೇನಾಥ ಪಾಟೀಲ ಮಾಡಿದ್ದಾರೆ.

ಪಟ್ಟಣದ ಕೇತಕಿ ಸಂಗಮೇಶ್ವರ ಮಲ್ಟಿಸ್ಪೇಷಾಲೀಟಿ ಆಸ್ಪತ್ರೆಯಲ್ಲಿ ಡಾ.ಬಸವೇಶ ವೈಜೇನಾಥ ಪಾಟೀಲ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದ ಅವರು, ತಾಲ್ಲೂಕಿನ ಭಕ್ತಂಪಳ್ಳಿ ಗ್ರಾಮದ ಈರಮ್ಮ ಎಂಬುವ ಮಹಿಳೆಯು ವಿವಿಧ ಆಸ್ಪತ್ರೆಗಳಿಗೆ ತೆರಳಿ ಚಿಕಿತ್ಸೆ ಪಡೆದಿದ್ದಳು ಆದರೆ ಯಾವುದೇ ವ್ಯತ್ಯಾಸ ಕಂಡುಬಂದಿಲ್ಲ ತದನಂತರ ನಮ್ಮ ಆಸ್ಪತ್ರೆಗೆ ನರಳುತ್ತಾ ಚಿಕಿತ್ಸೆಗೆ ಬಂದಿದಳು ನಾನು ವಿವಿಧ ರೀತಿಯ ಸ್ಕ್ಯಾನ್ ರಕ್ತ ಪರೀಕ್ಷೆ ಚಿಂಚೋಳಿಯಲ್ಲಿ ಲಭ್ಯಯಿರದ ಕಾರಣ ತಾಂಡೂರ ಬೀದರ ಸೇರಿದಂತೆ ಮಾಡಿಸಲಾಗಿತ್ತು ವರದಿಯಲ್ಲಿ ರಕ್ತದೊತ್ತಡ ಕಡಿಮೆ,ಹಾಗೂ ಹೊಟ್ಟೆಯಲ್ಲಿ 17ರಿಂದ 25ಸೆ.ಮೀ ಗಡ್ಡೆಯಿದೆ ಎಂದು ವರದಿ ಕೊಟ್ಟದರು ಇದನ್ನು ಆಧಾರಿಸಿ ನಾನು ಐದು ದಿವಸ ಅದಕ್ಕೆ ಸೂಕ್ತ ಚಿಕಿತ್ಸೆ ನೀಡದಿದ್ದೇನೆ.

ಐದು ದಿವಸದ ನಂತರ ಮೂರು ಜನ ವೈದ್ಯರು ಸಮಾಲೋಚನೆ ನಡೆಸಿ ಫೆ.06ರಂದು ನುರಿತ ವೈದ್ಯರ ತಂಡದೊಂದಿಗೆ ಯಂತ್ರೋಪಕರಣ ಮೂಲಕ ಒಂದುವರೆ ಗಂಟೆಯಲ್ಲಿ ಯಶಸ್ವಿಯಾಗಿ ಶಸ್ತ್ರಚಿಕಿತ್ಸೆ ಮಾಡಲಾಯಿತು.

ಮಹಿಳೆಯು ಈಗ ಆರೋಗ್ಯವಾಗಿದ್ದು ಮಾತು ನಾಡುತ್ತಿದ್ದು ಕಾಲ್ನಡಿಗೆ ನಡೆಯುತ್ತಿದ್ದಾಳೆ,ಮಹಿಳೆಗೆ 30ವರ್ಷ ಯಾವುದೇ ತೊಂದರೆಯಿಲ್ಲ ವಾರದಲ್ಲಿ ಮಹಿಳೆಗೆ ಬಿಡುಗಡೆ ಮಾಡಲಾಗುವುದು.

ಗರ್ಭಕೋಶದ ಮೇಲೆ ಬೆಳೆದ ಗಡ್ಡೆಯಲ್ಲಿ ಪ್ರತಿಶತಃ 30ರಷ್ಟು ರಕ್ತ ಸಂಗ್ರವಾಗಿದೆ ಗಡ್ಡೆಯಲ್ಲಿನ ರಕ್ತವನ್ನು ತೆಗೆದು ಮತ್ತೆ ದೇಹದಲ್ಲಿ ಹಾಕಬೇಕು,ಇಂಥಹ ದೊಡ್ಡ ಶಸ್ತ್ರಚಿಕಿತ್ಸೆಯನ್ನು ಗ್ರಾಮೀಣ ಪ್ರದೇಶದಲ್ಲಿ ಮಾಡಿದ್ದು ದೊಡ್ಡ ಸಾಧನೆಯಾಗಿದೆ.

ಯಾಕೆಂದರೆ ಇಲ್ಲಿ ಒಂದು ದೊರೆತರೆ ಮತ್ತೊಂದು ದೊರೆಯುವುದಿಲ್ಲ,ಮೊದಲ ಬಾರಿ ಚಿಕಿತ್ಸೆಗೆ ಬಂದಾಗ ನೋಡಿದರೆ 6ತಿಂಗಳ ಗರ್ಭದಂತೆ ಕಾಣುತ್ತಿತ್ತು ಗರ್ಭಕೋಶದ ಮೇಲೆ ಬೆಳೆದ ಗಡ್ಡೆಯು ಇನ್ನು ಸ್ವಲ್ಪ ಸಮಯ ಬಿಟ್ಟಿದರೆ ಹೊಟ್ಟೆಯಲ್ಲಿ ಗಡ್ಡೆ ಒಡೆಯುವ ಸಾಧ್ಯತೆ ಹೆಚ್ಚಿತ್ತು ಇದರಿಂದ ಜೀವಕ್ಕೆ ಕೂಡ ಹಾನಿಯಾಗಿತ್ತು,ಈಗ ಆರೋಗ್ಯವಾಗಿ 30ವರ್ಷ ಬದುಕಬಹುದು.

ನಗರ ಪ್ರದೇಶಗಳಲ್ಲಿ ಇಂಥಹ ದೊಡ್ಡದಾದ ಅಪರೇಷನ್ ಮಾಡಲು ಕನಿಷ್ಠ 2–3ಲಕ್ಷ ರೂಪಾಯಿ ಖರ್ಚು ಆಗಲಿದೆ,ನಮ್ಮಲ್ಲಿ ಅತ್ಯಂತ ಕಡಿಮೆ ಖರ್ಚಿನಲ್ಲಿ ಅಪರೇಷನ್ ಮಾಡಿದ್ದೇನೆ, ರೋಗಿಯ ಅನುಮತಿ ಮೇರೆಗೆ ಶಸ್ತ್ರಚಿಕಿತ್ಸೆ ಮತ್ತು ಪತ್ರಿಕಾಗೋಷ್ಠಿ ಮಾಡಿದ್ದೇನೆ ಎಂದರು.

**ಅಪರೇಷನ್ ಮಾಡಿದ ನುರಿತ ವೈದ್ಯರ ತಂಡ:-** ಡಾ.ಬಸವೇಶ ವೈಜೇನಾಥ ಪಾಟೀಲ, ಡಾ.ಅರುಣ, ಡಾ.ರೇಷ್ಮಾ ಬಿ.ಪಾಟೀಲ, ಡಾ.ರಾಚಣ್ಣ ಪಾಟೀಲ, ಡಾ.ತೇಜಸ್ ಪಾಟೀಲ, ಡಾ.ಶಶಿಕುಮಾರ ಮುಕ್ಕಾ,ಡಾ.ಪ್ರೇಮಸಾಗರ ,ಡಾ.ಪ್ರಿಯಾಂಕಾರೆಡ್ಡಿ, ಶಸ್ತ್ರಚಿಕಿತ್ಸೆ ಮಾಡಿದರು.

**ಶಸ್ತ್ರಚಿಕಿತ್ಸೆಯ ಸಿಬ್ಬಂದಿ ವರ್ಗದವರು:-** ಪ್ರತಿಭಾರೆಡ್ಡಿ, ನಿರಂಜನ್, ವೈಶಾಲಿ, ಸೋನಿ, ಕವಿತಾ, ಟೇಕ್ನಿಕಲ್ ನಾಗೇಶ್ವೇರಿ, ಫಾರ್ಮೊಸಿ ಮನೋಜಪಾಟೀಲ, ಮತ್ತು ಸುಪ್ರೀತ್,ಇಮ್ರಾನ್, ಸದಾಶೀವರೆಡ್ಡಿ,ಇದ್ದರು,ಶಸ್ತ್ರಚಿಕಿತ್ಸೆ ಹೆಲ್ಪರ್ ರಾಧಾಬಾಯಿ,ಪ್ರವೀಣಾ,ಸೈಯದ್ ಹಮ್ಜಾ, ಶಕೀಲ್ ಇದ್ದರು.

ಈ ಸಂದರ್ಭದಲ್ಲಿ ಜಿಪಂ.ಮಾಜಿ ಸದಸ್ಯ ಗೌತಮ್ ವೈಜೇನಾಥ ಪಾಟೀಲ,ಶಾಂತವೀರ ಹೀರಾಪೂರ,ಗೋಪಾಲರೆಡ್ಡಿ ಕೊಳ್ಳೂರ, ಸತೀಶ ರೆಡ್ಡಿ, ಗೌರಿಶಂಕರ ಉಪ್ಪಿನ,ಇದ್ದರು.

> **ಕೇತಕಿ ಸಂಗಮೇಶ್ವರ ಮಲ್ಟಿಸ್ಪೇಷಾಲೀಟಿ ಆಸ್ಪತ್ರೆಯು 2020ರಲ್ಲಿ ಸಣ್ಣ ಪ್ರಮಾಣದಲ್ಲಿ ಪ್ರಾರಂಭಿಸಿ 2021ಮತ್ತು 2022ರಲ್ಲಿ ಅಲ್ಪ ಪ್ರಮಾಣದ ಚಿಕಿತ್ಸೆ 2023ರಲ್ಲಿ ಸ್ವಲ್ಪ ಚೇತರಿಕೆ ಕಂಡುಬಂತ್ತು 2024ರಲ್ಲಿ ಒಂದೇ ವರ್ಷದಲ್ಲಿ 500 ವಿವಿಧ ಶಸ್ತ್ರಚಿಕಿತ್ಸೆ ಮಾಡಿದ್ದೇನೆ,ಕೊರಳಿನ ಶಸ್ತ್ರಚಿಕಿತ್ಸೆ,ಕಿಡ್ನಿ ಸ್ಟೊನ್,ಎಲುಬು ಜೋಡಣೆ,ಹೆರಿಗೆ ಶಸ್ತ್ರಚಿಕಿತ್ಸೆ ಸೇರಿದಂತೆ 2025ರ ಇಲ್ಲಿಯವರೆಗೆ 700ಕ್ಕೂ ಹೆಚ್ಚು ಶಸ್ತ್ರಚಿಕಿತ್ಸೆ ಮಾಡಲಾಗಿದೆ. 2023ರಲ್ಲಿ ನಮ್ಮ ತಂದೆ ದಿ.ಮಾಜಿ ಸಚಿವರು ವೈಜೇನಾಥ ಪಾಟೀಲ ಅವರ ಹೆಸರಿನಲ್ಲಿ 25 ಶಸ್ತ್ರಚಿಕಿತ್ಸೆಗಳು ಉಚಿತವಾಗಿ ಮಾಡಲಾಗಿದೆ**
>
> **– ಡಾ.ಬಸವೇಶ ವೈಜೇನಾಥ ಪಾಟೀಲ**
> **ಕೇತಕಿ ಸಂಗಮೇಶ್ವರ ಆಸ್ಪತ್ರೆ, ಚಿಂಚೋಳಿ.**

> **ಮಹಿಳೆ ಹೊಟ್ಟೆಯಲ್ಲಿನ ಗರ್ಭಕೋಶದ ಮೇಲೆ ಬೆಳೆದಿರುವ ಗಡ್ಡೆಯನ್ನು ಸವಾಲಾಗಿ ಸ್ವೀಕರಿಸಿ ಉತ್ತಮ ಶಸ್ತ್ರಚಿಕಿತ್ಸೆ ನಡೆಸಿ 4.1ಕೆಜಿ ಗಡ್ಡೆ ಹೊರತೆಗೆದು ಮಹಿಳೆಗೆ ಮರುಜೀವ ನೀಡಿದ್ದೇವೆ,ಹೀಗೆ ಸ್ವಲ್ಪದಿನ ಬಿಟ್ಟದರೆ ಹೊಟ್ಟೆಯಲ್ಲಿ ಗಡ್ಡೆ ಒಡೆಯುವ ಸಾಧ್ಯತೆ ಹೆಚ್ಚಿತ್ತು ಜೀವ ಕಳೆದುಕೊಳ್ಳುವುದು ಖಚಿತವಾಗಿತ್ತು,ಶಸ್ತ್ರಚಿಕಿತ್ಸೆ ಸಕ್ಸಸ್ ಮಹಿಳೆ ಇನ್ನು 30ವರ್ಷ ಬದುಕುಳಿಯಬಹುದು ಯಾವುದೇ ತೊಂದರೆಯಿಲ್ಲ.**
>
> **– ಡಾ.ಬಸವೇಶ ವೈಜೇನಾಥ ಪಾಟೀಲ**
> **ಕೇತಕಿ ಸಂಗಮೇಶ್ವರ ಮಲ್ಟಿಸ್ಪೇಷಾಲೀಟಿ ಆಸ್ಪತ್ರೆ, ಚಿಂಚೋಳಿ.**

## ಉತ್ತಮ ಪ್ರಾಥಮಿಕ ಶಿಕ್ಷಣ ದೇಶದ ಬುನಾದಿ: ಶ್ರೀಮತಿ ಸೀಮ

• ಉದಯವಾಹಿನಿ, ಚಿತ್ರದುರ್ಗ



☛ ಉದಯವಾಹಿನಿ ಚಿತ್ರ

**ಗ್ರೀಷ್ಮ ಡೇ ಕೇರ್ ಸೆಂಟರ್ ಶಿಕ್ಷಣ ಸಂಸ್ಥೆಯ ವಾರ್ಷಿಕೋತ್ಸವ**

ಸಮರ್ಥ ಹಾಗೂ ಸದೃಢ ಭಾರತ ದೇಶದ ನಿರ್ಮಾಣಕ್ಕಾಗಿ ನಮ್ಮ ಮಕ್ಕಳಿಗೆ ಬಾಲ್ಯದಲ್ಲಿ ಮಕ್ಕಳ ಉತ್ತಮ ಶಿಕ್ಷಣವು ಅತ್ಯಂತ ಮಹತ್ವದ್ದಾಗಿದೆ. ಉತ್ತಮ ಪೂರ್ವ ಪ್ರಾಥಮಿಕ ಶಿಕ್ಷಣವು ಸದೃಢ ಭಾರತ ನಿರ್ಮಾಣದ ಬುನಾದಿಯಾಗಿದೆ ಇದು ಮಕ್ಕಳ ಮತ್ತು ದೇಶದ ಭವಿಷ್ಯದ ಅಡಿಪಾಯವನ್ನು ನಿರ್ಮಿಸುತ್ತದೆ. ಎಂದು ಗ್ರೀಷ್ಮ ಡೇ ಕೇರ್ ಸೆಂಟರ್ ಆಡಳಿತ ಅಧಿಕಾರಿ ಶ್ರೀಮತಿ ಸೀಮಾ ಅಭಿಪ್ರಾಯಪಟ್ಟಿದ್ದಾರೆ.

ಚಿತ್ರದುರ್ಗ ಮಲ್ಲಯ್ಯ ಬಡಾವಣೆಯ ಗ್ರೀಷ್ಮ ಡೇ ಕೇರ್ ಸೆಂಟರ್ ಶಿಕ್ಷಣ ಸಂಸ್ಥೆಯ ವಾರ್ಷಿಕೋತ್ಸವದ ಅಂಗವಾಗಿ ತರಾಸು ರಂಗಮಂದಿರದಲ್ಲಿ ಇದೇ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡುತ್ತಾ ಪೂರ್ವ ಪ್ರಾಥಮಿಕ ಶಿಕ್ಷಣವು ಮಕ್ಕಳನ್ನು ಜವಾಬ್ದಾರಿಯುತ ಮತ್ತು ಸಕ್ರಿಯ ನಾಗರಿಕರನ್ನಾಗಿ ಮಾಡಲು ಸಹಾಯ ಮಾಡುತ್ತದೆ ಎಂದು ಅವರು ಹೇಳಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಮದಕರಿಪುರ ಸರ್ಕಾರಿ ಶಾಲಾ ಶಿಕ್ಷಕಿ ಶ್ರೀಮತಿ ನಾಗಲತಾ ಮಾತನಾಡಿ ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಶಿಕ್ಷಣದ ಜೊತೆಗೆ ಉತ್ತಮ ಸಂಸ್ಕಾರ ಕಲಿಸುವುದು ಇಂದಿನ ಅವಶ್ಯವಾಗಿದೆ ಶಿಕ್ಷಣದಿಂದ ಮಕ್ಕಳು ಅಕ್ಷರಸ್ಥರಾಗಬಹುದು, ಜ್ಞಾನ ಪಡೆಯಬಹುದು, ಉದ್ಯೋಗ ಪಡೆಯಬಹುದು.

ಆದರೆ ಸಂಸ್ಕಾರವಿಲ್ಲದಿದ್ದರೆ, ಆ ಜ್ಞಾನವನ್ನು ಸಮಾಜಕ್ಕೆ ಒಳ್ಳೆಯದಕ್ಕಾಗಿ ಬಳಸಲು ಸಾಧ್ಯವಿಲ್ಲ. ಸಂಸ್ಕಾರವು ನೈತಿಕ ಮೌಲ್ಯಗಳನ್ನು, ಸದಾಚಾರವನ್ನು, ದೊಡ್ಡವರನ್ನು ಗೌರವಿಸುವ ಗುಣವನ್ನು, ಸತ್ಯ ನುಡಿಯುವ ಮತ್ತು ನ್ಯಾಯಯುತವಾಗಿರುವಂತಹ ವಿಷಯಗಳನ್ನು ಕಲಿಸುತ್ತದೆ.

ಮಕ್ಕಳಿಗೆ ಸಂಸ್ಕಾರವನ್ನು ಕಲಿಸಲು ಹಲವಾರು ಮಾರ್ಗಗಳಿವೆ. ತಂದೆ ತಾಯಿ ಮತ್ತು ಹಿರಿಯರ ನಡವಳಿಕೆ ತಮ್ಮ ಮಕ್ಕಳ ಮುಂದೆ ಉತ್ತಮ ಉದಾಹರಣೆಯಾಗಿರಬೇಕು. ಅವರು ಹೇಗೆ ನಡೆದುಕೊಳ್ಳುತ್ತಾರೆ, ಮಾತನಾಡುತ್ತಾರೆ, ಇತರ'ರೊಂದಿಗೆ ವ್ಯವಹರಿಸುತ್ತಾರೆ ಎಂಬುದನ್ನು ಮಕ್ಕಳು ಗಮನಿಸುತ್ತಾರೆ ಮತ್ತು ಅನುಕರಿಸುತ್ತಾರೆ. ಶಾಲೆಗಳಲ್ಲಿ ಪಠ್ಯದ ಜೊತೆಗೆ ನೈತಿಕ ಶಿಕ್ಷಣವನ್ನು ನೀಡುವ ಮೂಲಕ, ಕಥೆಗಳ ಮೂಲಕ ಮಕ್ಕಳಿಗೆ ಉತ್ತಮ ಮೌಲ್ಯಗಳನ್ನು ತಿಳಿಸಬಹುದು. ಮಕ್ಕಳು ಸಮಾಜದಲ್ಲಿನ ಒಳ್ಳೆಯ ಮತ್ತು ಕೆಟ್ಟ ಸಂಗತಿಗಳನ್ನು ನೋಡುವ ಮೂಲಕ ಕಲಿಯುತ್ತಾರೆ.ಆದ್ದರಿಂದ, ಸಮಾಜದಲ್ಲಿ ಉತ್ತಮ ವಾತಾವರಣವನ್ನು ನಿರ್ಮಿಸುವುದು ಅವಶ್ಯಕ. ಮಕ್ಕಳಿಗೆ ಶಿಕ್ಷಣದ ಜೊತೆಗೆ ಸಂಸ್ಕಾರವನ್ನು ನೀಡುವುದರಿಂದ, ಅವರು ಉತ್ತಮ ವ್ಯಕ್ತಿಗಳಾಗಿ ಬೆಳೆಯುತ್ತಾರೆ ಮತ್ತು ಸಮಾಜಕ್ಕೆ ಒಳ್ಳೆಯ ಕೊಡುಗೆ ನೀಡುತ್ತಾರೆ. ಎಂದು ತಿಳಿಸಿದರು.

ಶಾಲೆಯ ಪುಟ್ಟ ಮಕ್ಕಳ ದೀಪ ಬೆಳಗಿಸುವುದರೊಂದಿಗೆ ಉದ್ಘಾಟನೆಗೊಂಡ ಕಾರ್ಯಕ್ರಮಕ್ಕೆ ಕುಮಾರಿ ಕಾರುಣ್ಯ ಮತ್ತು ಕುಮಾರಿ ಅರುಷ ದೇವರ ನಾಮ ಹಾಡುವುದರೊಂದಿಗೆ ಪ್ರಾರ್ಥಿಸಿದ ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜ್ಞಾನಸೌರಭ ವಿದ್ಯಾ ಸಂಸ್ಥೆಯ ಅಧ್ಯಕ್ಷರಾದ ಟಿ ಸಿದ್ದಲಿಂಗಪ್ಪ ವಹಿಸಿ ಆಯುರ್ವೇದ ಚಿಕಿತ್ಸಕರಾದ ಡಾ.ಅಶ್ವಿನಿನಟರಾಜ್ ,ಡಾ. ರುದ್ರೇಶ್, ಅತಿಥಿಗಳಾಗಿ ಭಾಗವಹಿಸಿದ್ದ ಈ ಕಾರ್ಯಕ್ರಮದಲ್ಲಿ ಶ್ರೀಮತಿ ಪದ್ಮ ಮಾತಾಜಿ, ಪವಿತ್ರ ರಂಜಿತಾ ಉಪಸ್ಥರಿದ್ದರು. ವಿದ್ಯಾಸಂಸ್ಥೆಯ ಪುಟ್ಟ ಮಕ್ಕಳು ಪ್ರಸ್ತುತಪಡಿಸಿದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನೋಡುಗರ ಕಣ್ಮನ ಸೆಳೆದವು.

## ಜನಪರ ಸರ್ಕಾರಕ್ಕೆ ಜನರ ಬೆಂಬಲ



☛ ಉದಯವಾಹಿನಿ ಚಿತ್ರ

• ಉದಯವಾಹಿನಿ, ಗಜೇಂದ್ರಗಡ

ದೆಹಲಿ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಬಹುಮತದ ಸಾಧಿಸಿದ ಹಿನ್ನೆಲೆಯಲ್ಲಿ ಪಟ್ಟಣದ ಕಾಲಕಾಲೇಶ್ವರ ವೃತ್ತದಲ್ಲಿ ಬಿಜೆಪಿ ಕಾರ್ಯಕರ್ತರು ಪಟಾಕಿ ಸಿಡಿಸಿ ವಿಜಯೋತ್ಸವ ಆಚರಿಸಿದರು.

ದೇಶದ ರಾಜಧಾನಿ ನವದೆಹಲಿಯಲ್ಲಿ ಬಿಜೆಪಿಗೆ ಅಧಿಕಾರ ಲಭಿಸಿರುವುದು ಭಾರತದ ಅಭಿವೃದ್ಧಿಗೆ ಪೂರಕವಾಗಿದೆ. ಭ್ರಷ್ಟಾಚಾರ ಗುಡಿಸುತ್ತೇವೆಂದು ಅಧಿಕಾರಕ್ಕೆ ಬಂದಿದ್ದ ಆಮ್ ಆದ್ಮ ಪಕ್ಷವನ್ನು ದೆಹಲಿ ಜನರು ತಿರಸ್ಕರಿಸಿದ್ದಾರೆ. ಶೂನ್ಯ ಮತಗಳಿಗೆ ಮೂಲಕ ಕಾಂಗ್ರೆಸ್ ಸತತ ಮೂರನೇ ಬಾರಿ ಹ್ಯಾಟ್ರಿಕ್ ಸೋಲು ಕಂಡಿದ್ದು, ದೇಶದಲ್ಲಿ ಅದು ಮುಳುಗುತ್ತಿರುವ ಹಡಗು ಎಂಬುದು ಮತ್ತೊಮ್ಮೆ ಸಾಬೀತಾಗಿದೆ' ಎಂದು ಮುಖಂಡರು ಹೇಳಿದರು. ದೇಶದ ಜನರು ಪ್ರಧಾನಿ ನರೇಂದ್ರ ಮೋದಿ ಅವರ ಬಲಿಷ್ಠ ನಾಯಕತ್ವ, ಜನಪರ, ಅಭಿವೃದ್ಧಿಗೆ ಪೂರಕವಾದ ಸರ್ಕಾರವನ್ನು ಬೆಂಬಲಿಸುತ್ತಿದ್ದಾರೆ.

ಮುಂಬರುವ ದಿನಗಳಲ್ಲಿ ರಾಜ್ಯದಲ್ಲೂ ಕಮಲ ಅರಳಲಿದೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು. ಬಿಜೆಪಿ ರೋಣ ಮಂಡಲದ ಅಧ್ಯಕ್ಷ ಉಮೇಶ ಮಲ್ಲಾಪುರ, ನಗರ ಘಟಕದ ಅಧ್ಯಕ್ಷ ರಾಜೇಂದ್ರ ಘೋರ್ಪಡೆ, ಮುಖಂಡರಾದ ಶಿವಾನಂದ ಮಠದ ಅಶೋಕ ವನ್ನಾಲ, ಬುಡ್ಡಪ್ಪ ಮೂಲಿಮನಿ, ವೀರಪ್ಪ ಪಟ್ಟಣಶೆಟ್ಟಿ, ಬಾಳಾಜಿರಾವ್ ಬೋಸ್ಲೆ, ಮಹಾಂತೇಶ ಪೂಜಾರ, ಡಿ.ಜಿ.ಕಟ್ಟಿಮನಿ, ಶಿವಕುಮಾರ ಜಾಧವ, ಮುತ್ತಯ್ಯ ಬಾಳಿಕಾಯಿಮಠ, ಅಂದಪ್ಪ ಅಂಗಡಿ ಇದ್ದರು.

## ಸ್ನೇಹಿತರ ಮನೆಗೆ ಹೋಗುತ್ತೇನೆ ಎಂದು ಹೇಳಿ, 'ರಿಮ್ಸ್' ಮೆಡಿಕಲ್ ಕಾಲೇಜು ವಿದ್ಯಾರ್ಥಿನಿ ನಾಪತ್ತೆ

• ಉದಯವಾಹಿನಿ, ರಾಯಚೂರು



ಸ್ನೇಹಿತರ ಮನೆಗೆ ಹೋಗಿ ಬರುತ್ತೇನೆ ಎಂದು ಪೋಷಕರಿಗೆ ತಿಳಿಸಿ ರಾಯಚೂರಿನ ರಿಮ್ಸ್ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿನಿಯೊಬ್ಬಳು ನಾಪತ್ತೆಯಾಗಿರುವ ಘಟನೆ ಇಂದು ನಡೆದಿದೆ. ನಾಪತ್ತೆಯಾದ ವಿದ್ಯಾರ್ಥಿನಿಯನ್ನು ಕಲಬುರಗಿ ಮೂಲದ ವಿದ್ಯಾರ್ಥಿನಿ ಡಾ.ಭಾಗ್ಯಲಕ್ಷ್ಮಿ ಕಾಣೆಯದ ವಿದ್ಯಾರ್ಥಿ ಎಂದು ತಿಳಿದುಬಂದಿದೆ. ಈಕೆ ಕಳೆದ 15 ದಿನಗಳ ಹಿಂದೆ ರಿಮ್ಸ್ ಮೆಡಿಕಲ್ ಕಾಲೇಜಿನಲ್ಲಿ ಸ್ನಾತಕೋತ್ತರ ಪದವಿಗೆ ಪ್ರವೇಶ ಪಡೆದಿದ್ದಳು. ಭಾಗ್ಯಲಕ್ಷ್ಮಿ ಸ್ನೇಹಿತರ ಮನೆ ಹೋಗುವುದಾಗಿ ಹೇಳಿ ತೆರಳಿದ್ದು, ಮರಳಿ ಬಂದಿಲ್ಲ. ಮಗಳ ಫೋನ್ ಸ್ವಿಚ್ ಆಫ್ ಆಗಿದಕ್ಕೆ ಆತಂಕಗೊಂಡ ಪೋಷಕರು ಮಾರ್ಕೆಟ್ ಯಾರ್ಡ್ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

## ಆಶ್ರಯ ಮನೆ, ಎರಡು ತಿಂಗಳೊಳಗೆ ವಿತರಿಸಲು ಕ್ರಮ: ಸಚಿವ ಡಿ. ಸುಧಾಕರ್

• ಉದಯವಾಹಿನಿ, ಹಿರಿಯೂರು



☛ ಉದಯವಾಹಿನಿ ಚಿತ್ರ

ನಗರದ ನಂಜಯ್ಯನಕೊಟ್ಟಿಗೆ ಬಡಾವಣೆಯಲ್ಲಿ ಆಶ್ರಯ ಯೋಜನೆಯಡಿ ನಿರ್ಮಿಸಿರುವ ಜಿ+2 ಮನೆಗಳನ್ನು ಎರಡು ತಿಂಗಳ ಒಳಗೆ ಫಲಾನುಭವಿಗಳಿಗೆ ವಿತರಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಿ. ಸುಧಾಕರ್ ನಗರಸಭೆ ಅಧಿಕಾರಿಗಳಿಗೆ ತಾಕೀತು ಮಾಡಿದರು. ಮೂರು ವರ್ಷದ ಹಿಂದೆ ಮೊದಲ ಹಂತದಲ್ಲಿ ಆರಂಭಿಸಿರುವ ಜಿ +2 ವಿನ್ಯಾಸದ 624 ಮನೆಗಳ ನಿರ್ಮಾಣ ಸ್ಥಳಕ್ಕೆ ಭೇಟಿ ನೀಡಿದ್ದ ಸಚಿವರು, ಮನೆಗಳು ಬಹುತೇಕ ಪೂರ್ಣಗೊಂಡಿದ್ದು ವಿದ್ಯುತ್, ನೀರಿನ ವ್ಯವಸ್ಥೆ, ರಸ್ತೆ ಇತ್ಯಾದಿ ಸೌಲಭ್ಯಗಳನ್ನು ಶೀಘ್ರ ಪೂರ್ಣಗೊಳಿಸಬೇಕು. ಎರಡನೇ ಹಂತದ ಜಿ+2 ನ 1628 ಮನೆಗಳ ನಿರ್ಮಾಣವನ್ನು ಆದಷ್ಟು ಬೇಗ ಪೂರ್ಣಗೊಳಿಸಿ ಎಂದು ಅಧಿಕಾರಿಗಳಿಗೆ ಸೂಚಿಸಿದರು. ಮುಂದಿನ ಮೂರು ವರ್ಷದಲ್ಲಿ ನಗರದಲ್ಲಿ ವಸತಿ ರಹಿತರು ಇಲ್ಲದ ರೀತಿಯಲ್ಲಿ ವಿವಿಧ ಯೋಜನೆಗಳಡಿ ಸೂರು ಕಲ್ಪಿಸುವ ಕೆಲಸ ಮಾಡಲಾಗುವುದು. ಅಧಿಕಾರಿಗಳು ಈ ನಿಟ್ಟಿನಲ್ಲಿ ಬದ್ಧತೆಯಿಂದ ಕೆಲಸ ನಿರ್ವಹಿಸಬೇಕು ಎಂದು ಸುಧಾಕರ್ ತಿಳಿಸಿದರು.

ಮನೆಗಳನ್ನು ಪರಿಶೀಲಿಸಿದ ನಂತರ ನಗರಸಭೆಯಲ್ಲಿ ಏರ್ಪಡಿಸಿದ ಕಾರ್ಯಕ್ರಮದಲ್ಲಿ ಪೌರಕಾರ್ಮಿಕರಿಗೆ ಎಸ್‌ಟಿಪಿಟಿಎಸ್‌ಟಿ ಯೋಜನೆಯಡಿ ಎಸ್ಸಿ, ಎಸ್ಟಿ ಸಮುದಾಯದ 31 ಪೌರಕಾರ್ಮಿಕರಿಗೆ ಸಚಿವರು ಫ್ರಿಡ್ಜ್‌ಗಳನ್ನು ವಿತರಿಸಿದರು.

ನಗರಸಭೆ ಅಧ್ಯಕ್ಷ ಅಜಯ್ ಕುಮಾರ್, ಉಪಾಧ್ಯಕ್ಷೆ ಅಂಬಿಕಾ ಆರಾಧ್ಯ, ಸ್ಥಾಯಿ ಸಮಿತಿ ಅಧ್ಯಕ್ಷ ಎಚ್.ಎಸ್. ಅನಿಲ್ ಕುಮಾರ್, ಪೌರಾಯುಕ್ತ ಎ. ವಾಸೀಂ, ಸದಸ್ಯರಾದ ಈ. ಮಂಜುನಾಥ್, ಈರಲಿಂಗೇಗೌಡ, ಶಿವರಂಜನಿ, ಗೀತಾ ಗಂಗಾಧರ್, ಎಂ.ಡಿ.ಸಣ್ಣಪ್ಪ ಹಾಜರಿದ್ದರು.

# ಹೊಳೆಹೊನ್ನೂರು ಪಂಚಾಯಿತಿಗಳಲ್ಲಿ ಆಟೊ, ಬಕೆಟ್ ಮಾಯ

## ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆಯ ಸ್ವಚ್ಛ ಭಾರತ ಯೋಜನೆಯಡಿ ಗ್ರಾಮ ಪಂಚಾಯಿತಿಗಳಿಗೆ ವಿತರಿಸಿದ ಲಗೇಜ್ ಆಟೊ

• ಉದಯವಾಹಿನಿ ಹೊಳೆಹೊನ್ನೂರು

ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆಯ ಸ್ವಚ್ಛ ಭಾರತ ಯೋಜನೆಯಡಿ ಗ್ರಾಮ ಪಂಚಾಯಿತಿಗಳಿಗೆ ವಿತರಿಸಿದ ಲಗೇಜ್ ಆಟೊಗಳು ಕಾಣದಂತಾಗಿವೆ.

ಯೋಜನೆಯಡಿ ಮೂರು ವರ್ಷಗಳ ಹಿಂದೆ ಗ್ರಾಮ ಪಂಚಾಯಿತಿಗೊಂದು ಲಗೇಜ್ ಆಟೊ, ಪ್ರತಿ ಮನೆಗೂ ಬಕೆಟ್ ವಿತರಣೆ ಮಾಡಲಾಗಿತ್ತು. ಆದರೆ ಈಗ ಆ ಆಟೊಗಳು ಕೆಲಸಕ್ಕೆ ಬಾರದಂತಾಗಿವೆ. ಒಂದು ಆಟೊ ಬೆಲೆ 6.5 ಲಕ್ಷ ಎಂದು ಅಂದಾಜಿಸಲಾಗಿದೆ. ರಾಜ್ಯದ 5,963 ಗ್ರಾಮ ಪಂಚಾಯಿತಿಗಳಿಗೆ ಇವುಗಳನ್ನು ಪೂರೈಸಲು 387 ಕೋಟಿ ಖರ್ಚು ಮಾಡಲಾಗಿದೆ. ಪಟ್ಟಣದ 16 ಗ್ರಾಮ ಪಂಚಾಯಿತಿಗೆ ಲಗೇಜ್ ಆಟೊಗಾಗಿ 1.4 ಕೋಟಿ ಖರ್ಚು ಮಾಡಲಾಗಿದೆ. ಜೊತೆಗೆ ಡ್ರೈವರ್, ಡೀಸೆಲ್ ವೆಚ್ಚವನ್ನೂ ನೀಡಲಾಗುತ್ತಿದೆ. ಪಟ್ಟಣದ ಸುತ್ತಮುತ್ತಲಿನ 16 ಗ್ರಾಮ ಪಂಚಾಯಿತಿಗಳ ಪೇಕಿ ಒಂದರಲ್ಲೂ ಕಸ ವಿಲೇವಾರಿ ಕಾರ್ಯ ನಡೆಯುತ್ತಿಲ್ಲ ಎಂಬ ಆರೋಪ ಕೇಳಿಬಂದಿದೆ. ವರ್ಷದಲ್ಲೊಮ್ಮೆ ಸ್ವಚ್ಛ ಭಾರತ್ ದಿನದಂದು ಈ ಆಟೊ ಕಾರ್ಯ ನಿರ್ವಹಿಸುತ್ತದೆ. ಅಂದು ಗ್ರಾಮ ಪಂಚಾಯಿತಿ ಸಿಬ್ಬಂದಿ ಕೆಲವು ಸಂಘಟನೆಗಳೊಂದಿಗೆ ಸೇರಿ ಗ್ರಾಮಗಳಲ್ಲಿ ಸ್ವಚ್ಛತೆ ಬಗ್ಗೆ ಜಾಗೃತಿ ಮೂಡಿಸುತ್ತದೆ.

### ಕಸ ವಿಲೇವಾರಿ ಘಟಕಗಳೇ ಇಲ್ಲ

**ಕಸ ವಿಲೇವಾರಿ ಘಟಕಗಳೇ ಇಲ್ಲ ಪಟ್ಟಣದ ಸುತ್ತಲಿನ 16 ಗ್ರಾಮ ಪಂಚಾಯಿತಿಗಳಲ್ಲಿ ಕಸ ವಿಲೇವಾರಿ ದೊಡ್ಡ ಸಮಸ್ಯೆಯಾಗಿದೆ. ವಿಲೇವಾರಿಗೆ ನಿರ್ದಿಷ್ಟ ಸ್ಥಳಾವಕಾಶವಿಲ್ಲ. ಕೆಲವೆಡೆ ಕಸ ವಿಲೇವಾರಿ ಘಟಕಗಳೇ ಇಲ್ಲ. ಗ್ರಾಮ ಪಂಚಾಯಿತಿಯೇ ಜನರ ತೆರಿಗೆ ಹಣ ಹಾಗೂ ನರೇಗಾ ಯೋಜನೆಯ ಹಣ ವಿನಿಯೋಗಿಸಿ ಕಸ ವಿಲೇವಾರಿ ಘಟಕ ಸ್ಥಾಪಿಸಬೇಕಿದೆ. ಆದರೆ ಈ ಕಾರ್ಯಕ್ಕೆ ಗ್ರಾಮಾಡಳಿತ ಹಾಗೂ ಸಿಬ್ಬಂದಿ ನಿರ್ಲಕ್ಷ್ಯ ವಹಿಸುತ್ತಿದ್ದಾರೆ. ಇದುವರೆಗೂ ಗ್ರಾಮ ಪಂಚಾಯಿತಿಯಲ್ಲೂ ತ್ಯಾಜ್ಯ ವಿಲೇವಾರಿ ಘಟಕ ಸ್ಥಾಪನೆಯಾಗಿಲ್ಲ ಎಂಬ ಆರೋಪಗಳು ಕೇಳಿಬಂದಿವೆ.**



☛ ಉದಯವಾಹಿನಿ ಚಿತ್ರ

> **ತ್ಯಾಜ್ಯ ವಿಲೇವಾರಿ ಘಟಕ ಸ್ಥಾಪನೆ ವಿಳಂಬವಾಗುತ್ತಿದೆ. ತಕ್ಷಣವೇ ಕಾಮಗಾರಿ ಪೂರ್ಣಗೊಳಿಸಲಾಗುವುದು. ಕಸ ಸಂಗ್ರಹಿಸಲು ಮಹಿಳಾ ಡ್ರೈವರ್‌ಗಳನ್ನು ನಿಯೋಜಿಸಬೇಕು. ಆದರೆ ನಮ್ಮಲ್ಲಿ ಅವರ ಕೊರತೆ ಇದೆ. ಇದರಿಂದಾಗಿ ಸ್ವಲ್ಪ ಸಮಸ್ಯೆಯಾಗಿದೆ**
>
> **– ಹುತ್ತೇಶ್, ದಾಸರಕಲ್ಲಹಳ್ಳಿ ಗ್ರಾಮ ಪಂಚಾಯಿತಿ ಪಿಡಿಒ**

ನಂತರದ ದಿನಗಳಲ್ಲಿ ಅದನ್ನು ಶೆಡ್ ವೊಂದರ ಕೆಳಗೆ ನಿಲುಗಡೆ ಮಾಡಲಾಗುತ್ತದೆ.

ಕೆಲವು ಗ್ರಾಮ ಪಂಚಾಯಿತಿಗಳಲ್ಲಿ ಮಾತ್ರ ಆಟೊಗಳನ್ನು ಕಸ ವಿಲೇವಾರಿಗೆ ಬಳಸಲಾಗುತ್ತಿದೆ.

ಇನ್ನೂ ಕೆಲವು ಕಡೆ ನರೇಗಾ ಯೋಜನೆಯಡಿ ಕೆಲಸಕ್ಕೆ ಜನರನ್ನು ಕರೆದೊಯ್ಯಲಷ್ಟೇ ಇವು ಬಳಕೆಯಾಗುತ್ತಿವೆ. ಈಗ ಅದೂ ಬಂದ್ ಆಗಿದೆ. ಕಸ ಸಂಗ್ರಹಿಸಿಡಲು ಪ್ರತಿ ಮನೆಗೂ ಬಕೆಟ್ ವಿತರಿಸಲಾಗಿತ್ತು. ಆದರೆ, ಬಕೆಟ್‌ಗಳು ಮನೆಯಲ್ಲಿ ನೀರು ತುಂಬಲು, ಬಟ್ಟೆ ತೊಳೆಯಲು ಪಾತ್ರೆ ತೊಳೆಯಲು ಬಳಕೆ ಆಗುತ್ತಿವೆ. ಕಸ ವಿಲೇವಾರಿ ಮಾಡಿರುವುದು ತುಂಬಾ ವಿರಳ.



> **ನಿರ್ಲಕ್ಷ್ಯದಿಂದ ಯೋಜನೆ ನನೆಗುದಿಗೆ ಬೀಳುವಂತಾಗಿದೆ. ಕೂಡಲೆ ಎಚ್ಚೆತ್ತು ಗ್ರಾಮಗಳಲ್ಲಿ ಸ್ವಚ್ಛತೆ ಕೈಗೊಳ್ಳಬೇಕು. ಸಾರ್ವಜನಿಕರಿಗೆ ಉತ್ತಮ ವಾತಾವರಣ ಕಲ್ಪಿಸಬೇಕು –ವೀರೇಶ್, ರಾಜ್ಯ ರೈತ ಸಂಘದ ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿ**

**ಕಸ ವಿಲೇವಾರಿ ದೊಡ್ಡ ಸಮಸ್ಯೆ**

> **ಹೊಳೆಹೊನ್ನೂರು ಸುತ್ತಮುತ್ತಲಿನ ಗ್ರಾಮಗಳಲ್ಲಿ ಕಸ ಸಂಗ್ರಹಿಸುತ್ತಿಲ್ಲ. ಎಂಬ ವಿಚಾರ ಗಮನಕ್ಕೆ ಬಂದಿಲ್ಲ. ಸಂಬಂಧಪಟ್ಟವರ ಜೊತೆ ಮಾತನಾಡಿ ಮಾಹಿತಿ ಪಡೆಯುವೆ.– ಗಂಗಣ್ಣ**
> **ಭದ್ರಾವತಿ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಣಾಧಿಕಾರಿ**

ವಾಣಿಜ್ಯ ಮಳಿಗೆಗಳಿಗೆ ಕಸದ ತೊಟ್ಟಿ (ಡಸ್ಟ್‌ಬಿನ್) ನೀಡಲಾಗಿದೆ. ಅದು ತುಂಬಿದಾಗ ಗ್ರಾಮ ಪಂಚಾಯಿತಿ ಸಿಬ್ಬಂದಿಯನ್ನು ಪರಿಪರಿಯಾಗಿ ಬೇಡಿ ಕಸ ವಿಲೇವಾರಿ ಮಾಡಬೇಕಾದ ಪರಿಸ್ಥಿತಿ ಇದೆ.

**ಎಲ್ಲೆಂದರಲ್ಲಿ ಕಸ:** ಗ್ರಾಮೀಣ ಪ್ರದೇಶದ ಸರ್ಕಾರಿ ಸ್ಥಳಗಳಲ್ಲಿ ಎಲ್ಲೆಂದರಲ್ಲಿ ಕಸದ ರಾಶಿ ಇದ್ದು, ಗ್ರಾಪಂ ಸಿಬ್ಬಂದಿ ಇದಕ್ಕೂ ತಮಗೂ ಸಂಬಂಧವೇ ಇಲ್ಲದಂತೆ ವರ್ತಿಸುತ್ತಿದ್ದಾರೆ. ಸರ್ಕಾರಿ ಸ್ಥಳಗಳಲ್ಲಿ ಕಸದ ರಾಶಿ ಹಾಕಿರುವುದರಿಂದ ಸೊಳ್ಳೆಗಳ ಸಂಖ್ಯೆ ಹೆಚ್ಚಾಗಿದೆ ಎಂದು ಸಾರ್ವಜನಿಕರು ದೂರುತ್ತಿದ್ದಾರೆ.

# ಇಂಗ್ಲಿಷ್‌ನಲ್ಲೂ 'ಪುಷ್ಪ 2' ವಿಶ್ವಾದ್ಯಂತ ಅಲ್ಲು ಅರ್ಜುನ್ ಹವಾ



ಪುಷ್ಪ 2' ಸಿನಿಮಾ ಮಾಡಿದ ದಾಖಲೆಗಳು ಒಂದೆರಡಲ್ಲ. ಚಿತ್ರಮಂದಿರದಲ್ಲಿ ಹಲವು ವಾರಗಳ ಕಾಲ ಹೌಸ್‌ಫುಲ್ ಪ್ರದರ್ಶನ ಕಂಡ ಈ ಸಿನಿಮಾ ಸಖತ್ ಸದ್ದು ಮಾಡಿತು. ವಿಶ್ವಾದ್ಯಂತ ಅಂದಾಜು 1800 ಕೋಟಿ ರೂಪಾಯಿ ಕಲೆಕ್ಷನ್ ಮಾಡಿದ್ದು ಈ ಸಿನಿಮಾದ ಹೆಚ್ಚುಗಾರಿಕೆ. ಥಿಯೇಟರ್‌ನಲ್ಲಿ ಅಬ್ಬರಿಸಿದ ಬಳಿಕ ನೆಟ್ ಫ್ಲಿಕ್ಸ್ ಒಟಿಟಿಯಲ್ಲೂ ಈ ಸಿನಿಮಾ ಅಬ್ಬರಿಸುತ್ತಿದೆ. ವಿಶೇಷ ಏನೆಂದರೆ, ಈಗ 'ಪುಷ್ಪ 2' ಸಿನಿಮಾ ಇಂಗ್ಲಿಷ್ ಭಾಷೆಯಲ್ಲೂ ಪ್ರಸಾರ ಕಾಣುತ್ತಿದೆ. ಇದರಿಂದ ಅಲ್ಲು ಅರ್ಜುನ್ ಅವರ ಖ್ಯಾತಿ ಹೆಚ್ಚಾಗಿದೆ.

ಪ್ಯಾನ್ ಇಂಡಿಯಾ ಮಟ್ಟದಲ್ಲಿ ಬೇರೆ ಬೇರೆ ಭಾಷೆಗಳಿಗೆ ಡಬ್ ಆಗಿ 'ಪುಷ್ಪ 2' ಸಿನಿಮಾ ಬಿಡುಗಡೆ ಆಗಿತ್ತು. ಒಟಿಟಿಯಲ್ಲಿ ಕೂಡ ತೆಲುಗು, ಕನ್ನಡ, ತಮಿಳು, ಮಲಯಾಳಂ, ಹಿಂದಿ, ಬೆಂಗಾಲಿ ಮುಂತಾದ ಭಾಷೆಯಲ್ಲಿ ಸಿನಿಮಾ ಲಭ್ಯವಾಗಿತ್ತು. ಅವುಗಳ ಜೊತೆಗೆ ಈಗ ಇಂಗ್ಲಿಷ್ ಭಾಷೆಗೂ ಈ ಸಿನಿಮಾ ಡಬ್ ಆಗಿದೆ. ಹಾಗಾಗಿ ಬೇರೆ ಬೇರೆ ದೇಶಗಳಲ್ಲಿ ಇರುವ ಪ್ರೇಕ್ಷಕರು ನೆಟ್ ಫ್ಲಿಕ್ಸ್ ಮೂಲಕ 'ಪುಷ್ಪ 2' ಇಂಗ್ಲಿಷ್ ವರ್ಷನ್ ನೋಡಿ ಎಂಜಾಯ್ ಮಾಡುತ್ತಿದ್ದಾರೆ.

ನೆಟ್‌ಫ್ಲಿಕ್ಸ್‌ನಲ್ಲಿ ಬಿಡುಗಡೆ ಆದಾಗಿನಿಂದಲೂ 'ಪುಷ್ಪ 2' ಸಿನಿಮಾ ಜಾಗತಿಕ ಟ್ರೆಂಡಿಂಗ್‌ನಲ್ಲಿ ಸ್ಥಾನ ಪಡೆದುಕೊಂಡಿದೆ. ಈಗ ಇಂಗ್ಲಿಷ್ ವರ್ಷನ್ ಕೂಡ ಸೇರ್ಪಡೆ ಆಗಿರುವುದರಿಂದ ಇನ್ನಷ್ಟು ಕ್ರೇಜ್ ಜಾಸ್ತಿ ಆಗಿದೆ. ಸುಕುಮಾರ್ ಅವರು ಈ ಸಿನಿಮಾಗೆ ನಿರ್ದೇಶನ ಮಾಡಿದ್ದು, ಅಲ್ಲು ಅರ್ಜುನ್ ಜೊತೆ ರಶ್ಮಿಕಾ ಮಂದಣ್ಣ, ಫಹಾದ್ ಫಾಸಿಲ್ ಮುಂತಾದವರು ಮಿಂಚಿದ್ದಾರೆ.

ಸಿನಿಮಾ ಬಿಡುಗಡೆ ಆದ ಬಳಿಕ ಪ್ರಚಾರ ಕಾರ್ಯದಲ್ಲಿ ಭಾಗಿಯಾಗಲು ಅಲ್ಲು ಅರ್ಜುನ್ ಅವರಿಗೆ ಸಾಧ್ಯವಾಗಲಿಲ್ಲ. ಮೊದಲ ದಿನವೇ ಕಾಲ್ತುಳಿತದಿಂದ ಅಭಿಮಾನಿ ನಿಧನರಾಗಿದ್ದು ಅಲ್ಲು ಅರ್ಜುನ್ ಅವರಿಗೆ ನೋವುಂಟು ಮಾಡಿತ್ತು.

ಆ ಘಟನೆ ಬಳಿಕ ಅವರು ಸಾರ್ವಜನಿಕವಾಗಿ ಕಾಣಿಸಿಕೊಂಡು ಸಿನಿಮಾಗೆ ಪ್ರಚಾರ ನೀಡಲಿಲ್ಲ. ಹಲವು ದಿನಗಳು ಕಳೆದ ಬಳಿಕ ಅವರು ಸಾರ್ವಜನಿಕವಾಗಿ ಕಾಣಿಸಿಕೊಳ್ಳಲು ಆರಂಭಿಸಿದರು. ಇತ್ತೀಚೆಗೆ ಸಕ್ಸಸ್ ಪಾರ್ಟಿ ಮಾಡಲಾಗಿದೆ. ಅಲ್ಲು ಅರ್ಜುನ್ ಅವರು ಈ ಚಿತ್ರದ ಗೆಲುವನ್ನು ನಿರ್ದೇಶಕ ಸುಕುಮಾರ್ ಅವರಿಗೆ ಅರ್ಪಿಸಿದ್ದಾರೆ.



# ಕಾಲು ನೋವಿನಿಂದ ಸಂಪೂರ್ಣ ಚೇತರಿಸಿಕೊಂಡ ನಟಿ ರಶ್ಮಿಕಾ ಮಂದಣ್ಣ

ಇಷ್ಟು ದಿನ ರಶ್ಮಿಕಾ ಮಂದಣ್ಣ ಅವರು ಕಾಲು ನೋವಿನಿಂದ ಬಳಲುತ್ತಿದ್ದರು. ನಡೆದಾಡಲು ಅವರಿಗೆ ಕಷ್ಟವಾಗಿತ್ತು. ಈಗ ಚೇತರಿಕೆ ಕಂಡಿದ್ದಾರೆ. ವ್ಹೀಲ್ ಚೇರ್ ಹಾಗೂ ಯಾರ ಸಹಾಯವೂ ಇಲ್ಲದೇ ಅವರು ನಡೆಯಲು ಶುರು ಮಾಡಿಕೊಂಡಿದ್ದಾರೆ. ಅವರ ಹೊಸ ವಿಡಿಯೋ ನೋಡಿ ಅಭಿಮಾನಿಗಳು ನಿಟ್ಟುಸಿರು ಬಿಟ್ಟಿದ್ದಾರೆ.

**ಕಾಲು ನೋವಿನಿಂದ ಸಂಪೂರ್ಣ ಚೇತರಿಸಿಕೊಂಡ ನಟಿ ರಶ್ಮಿಕಾ ಮಂದಣ್ಣ:** ನಟಿ ರಶ್ಮಿಕಾ ಮಂದಣ್ಣ ಅವರು ಒಂದರ ಹಿಂದೊಂದು ಸಿನಿಮಾಗಳನ್ನು ಒಪ್ಪಿಕೊಂಡು ನಟಿಸುತ್ತಿದ್ದಾರೆ. ಶೂಟಿಂಗ್, ಪ್ರಮೋಷನ್ ಎಂದು ಸದಾ ಸುತ್ತಾಡುವ ಅವರು ಇತ್ತೀಚೆಗೆ ಕಾಲಿಗೆ ಪೆಟ್ಟು ಮಾಡಿಕೊಂಡಿದ್ದರು. ಜಿಮ್‌ನಲ್ಲಿ ವರ್ಕೌಟ್ ಮಾಡುವಾಗ ಅವರಿಗೆ ಪೆಟ್ಟಾಗಿತ್ತು. ಇದರಿಂದ ಅವರಿಗೆ ನಡೆದಾಡಲು ಕೂಡ ಕಷ್ಟ ಆಗುತ್ತಿತ್ತು. ಆದರೆ ಈಗ ರಶ್ಮಿಕಾ ಮಂದಣ್ಣ ಅವರು ಕಾಲು ನೋವಿನಿಂದ ಸಂಪೂರ್ಣ ಚೇತರಿಕೆ ಕಂಡಿದ್ದಾರೆ. ಹೈದರಾಬಾದ್ ವಿಮಾನ ನಿಲ್ದಾಣದಲ್ಲಿ ಅವರು ನಡೆದುಕೊಂಡು ಹೋಗುತ್ತಿರುವ ವಿಡಿಯೋ ವೈರಲ್ ಆಗಿದೆ. ಯಾವುದೇ ತೊಂದರೆ ಇಲ್ಲದೇ ಅವರು ನಡೆದುಕೊಂಡು ಹೋಗಿದ್ದು ನೋಡಿ ಫ್ಯಾನ್ಸ್ ಖುಷಿಪಟ್ಟಿದ್ದಾರೆ.

ರಶ್ಮಿಕಾ ಮಂದಣ್ಣ ನಟನೆಯ 'ಛಾವಾ' ಸಿನಿಮಾ ಸದ್ಯದಲ್ಲೇ ಬಿಡುಗಡೆ ಆಗಲಿದೆ. ಈ ಸಿನಿಮಾದ ಪ್ರಮೋಷನ್‌ನಲ್ಲಿ ಭಾಗವಹಿಸುವ ಸಂದರ್ಭಕ್ಕೆ ಸರಿಯಾಗಿ ಅವರ ಕಾಲಿಗೆ ಪೆಟ್ಟಾಗಿದ್ದರಿಂದ ಅವರಿಗೆ ಸಖತ್ ಬೇಸರ ಆಗಿತ್ತು. ಹಾಗಿದ್ದರೂ ಕೂಡ ವ್ಹೀಲ್ ಚೇರ್‌ನಲ್ಲಿ ಬಂದು ಅವರು ಟ್ರೇಲರ್ ಬಿಡುಗಡೆ ಕಾರ್ಯಕ್ರಮದಲ್ಲಿ ಭಾಗಿ ಆಗಿದ್ದರು. ಆಗ ಅವರ ಪರಿಸ್ಥಿತಿ ಕಂಡು ಅಭಿಮಾನಿಗಳಿಗೆ ನೋವಾಗಿತ್ತು. ಆದರೆ ಈಗ ರಶ್ಮಿಕಾ ಗುಣಮುಖರಾಗಿದ್ದಾರೆ. ಕಾಲಿಗೆ ಪೆಟ್ಟು ಮಾಡಿಕೊಂಡ ಬಳಿಕ ರಶ್ಮಿಕಾ ಮಂದಣ್ಣ ಕುಂಟುವಂತಾಗಿತ್ತು. ನಡೆಯುವಾಗ ಅವರಿಗೆ ಇನ್ನೊಬ್ಬರ ಸಹಾಯ ಬೇಕಾಗುತ್ತಿತ್ತು. ಆದರೆ ಈಗ ಅವರು ಹೈದರಾಬಾದ್ ವಿಮಾನ ನಿಲ್ದಾಣದಲ್ಲಿ ಯಾರ ಸಹಾಯವೂ ಇಲ್ಲದೇ ನಡೆದು ಬಂದಿದ್ದಾರೆ. ಹೈದರಾಬಾದ್‌ನಿಂದ ಮುಂಬೈಗೆ ಅವರು ಪ್ರಯಾಣ ಬೆಳೆಸಿದ್ದಾರೆ. 'ಛಾವಾ' ಸಿನಿಮಾ ಫೆಬ್ರವರಿ 14ರಂದು ಬಿಡುಗಡೆ ಆಗಲಿದೆ. ಆ ಸಿನಿಮಾದ ಪ್ರಮೋಷನ್‌ನಲ್ಲಿ ರಶ್ಮಿಕಾ ಮಂದಣ್ಣ ಭಾಗಿ ಆಗಲಿದ್ದಾರೆ.

# 3 ದಿನಕ್ಕೆ 50 ಕೋಟಿ ರೂ. ಸಮೀಪಿಸಿದ 'ವಿದಾಮುಯರ್ಚಿ'

## ಚಿತ್ರಮಂದಿರದ ಒಳಗೆ ಸಂಭ್ರಮ



ಅಜಿತ್ ಕುಮಾರ್ ಅವರ 'ವಿದಾಮುಯರ್ಚಿ' ಸಿನಿಮಾ ಮೇಲೆ ಅಭಿಮಾನಿಗಳಿಗೆ ತುಂಬ ನಿರೀಕ್ಷೆ ಇತ್ತು. ಆದರೆ ಆ ನಿರೀಕ್ಷೆಯ ಮಟ್ಟವನ್ನು ತಲುಪಲು ಸಿನಿಮಾಗೆ ಸಾಧ್ಯವಾಗಿಲ್ಲ. ಮೊದಲ ದಿನ ಸಿನಿಮಾ ನೋಡಿದ ಪ್ರೇಕ್ಷಕರಿಂದ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಯಿತು. ಹಾಗಾಗಿ ಎರಡನೇ ದಿನವೇ ಸಿನಿಮಾದ ಗಳಿಕೆ ಕುಸಿಯಿತು. ಮೂರು ದಿನ ಕಳೆದರೂ 'ವಿದಾಮುಯರ್ಚಿ' ಚಿತ್ರದ ಬಾಕ್ಸ್ ಆಫೀಸ್ ಗಳಿಕೆ 50 ಕೋಟಿ ರೂಪಾಯಿ ದಾಟಿಲ್ಲ. ಈ ಬಗ್ಗೆ ಇಲ್ಲಿದೆ ಮಾಹಿತಿ.. 'ವಿದಾಮುಯರ್ಚಿ' ಸಿನಿಮಾದಲ್ಲಿ ಅಜಿತ್ ಕುಮಾರ್ ಜೊತೆ ತ್ರಿಶಾ ಕೃಷ್ಣನ್, ರೆಜಿನಾ ಕ್ಯಾಸಂಡ್ರ, ಆರವ್, ಅರ್ಜುನ್ ಸರ್ಜಾ ಮುಂತಾದವರು ನಟಿಸಿದ್ದಾರೆ.

ಇದು 1997ರಲ್ಲಿ ಬಿಡುಗಡೆ ಆದ ಅಮೆರಿಕದ 'ಬ್ರೇಕ್‌ಡೌನ್' ಸಿನಿಮಾದಿಂದ ಸ್ಫೂರ್ತಿ ಪಡೆದು ಮಾಡಲಾದ ಸಿನಿಮಾ. ನಿರೀಕ್ಷೆ ಹೆಚ್ಚಿದ್ದರಿಂದ ಮೊದಲ ದಿನ ಅದ್ದೂರಿ ಓಪನಿಂಗ್ ಪಡೆದುಕೊಂಡಿತು. ಬಿಡುಗಡೆ ಆದ ದಿನ (ಫೆಬ್ರವರಿ 6) 'ವಿದಾಮುಯರ್ಚಿ' ಸಿನಿಮಾ 26 ಕೋಟಿ ರೂಪಾಯಿ ಗಳಿಕೆ ಮಾಡಿತು. ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದ್ದರಿಂದ 'ವಿದಾಮುಯರ್ಚಿ' ಚಿತ್ರಕ್ಕೆ 2ನೇ ದಿನ ಕೇವಲ 10.25 ಕೋಟಿ ರೂಪಾಯಿ ಕಲೆಕ್ಷನ್ ಆಯಿತು. ಮೂರನೇ ದಿನ ಅಂದಾಜು 10.52 ಕೋಟಿ ರೂಪಾಯಿ ಕಲೆಕ್ಷನ್ ಮಾಡಿದೆ. ವೀಕೆಂಡ್ ಇದ್ದರೂ ಕೂಡ ಈ ಸಿನಿಮಾದ ಗಳಿಕೆಯಲ್ಲಿ ಏರಿಕೆ ಆಗಿಲ್ಲ. ಮೂರು ದಿನಕ್ಕೆ ಒಟ್ಟು ಕಲೆಕ್ಷನ್ 46.77 ಕೋಟಿ ರೂಪಾಯಿ ಆಗಿದೆ. 50 ಕೋಟಿ ರೂಪಾಯಿ ಗಡಿ ಮುಟ್ಟಲು ಈ ಸಿನಿಮಾ ಕಷ್ಟಪಡುತ್ತಿದೆ. ಮೊದಲ ದಿನ 'ವಿದಾಮುಯರ್ಚಿ' ಸಿನಿಮಾವನ್ನು ನೋಡಲು ಅಜಿತ್ ಫ್ಯಾನ್ಸ್ ಮುಗಿ ಬಿದ್ದಿದ್ದರು. ಭಾರಿ ಉತ್ಸಾಹದಲ್ಲಿ ಚಿತ್ರಮಂದಿರದ ಒಳಗೆ ಸಂಭ್ರಮಿಸಿದರು. ಚಿತ್ರಮಂದಿರದ ಒಳಗೆ ಪಟಾಕಿ ಸಿಡಿಸಿ ಖುಷಿಪಡಲಾಗಿತ್ತು.

# ಫೆ.16ರಂದು 'ಡೆವಿಲ್' ಚಿತ್ರದ ಟೀಸರ್ ರಿಲೀಸ್



ದರ್ಶನ್ ನಟನೆಯ 'ಡೆವಿಲ್' ಸಿನಿಮಾದ ಅಪ್‌ಡೇಟ್‌ಗಾಗಿ ಕಾಯುತ್ತಿದ್ದ ಅಭಿ ಮಾನಿಗಳಿಗೆ ಸಿಹಿಸುದ್ದಿ ಸಿಕ್ಕಿದೆ. 'ಡೆವಿಲ್' ಚಿತ್ರದ ಟೀಸರ್ ರಿಲೀಸ್ ಆಗಲಿದೆ ಎಂದು ಸ್ವತಃ ದರ್ಶನ್ ಸೋಶಿಯಲ್ ಮೀಡಿಯಾದಲ್ಲಿ ತಿಳಿಸಿದ್ದಾರೆ. ಇದೇ ಫೆ.16ರಂದು ದರ್ಶನ್ 47ನೇ ವಸಂತಕ್ಕೆ ಕಾಲಿಡಲಿದ್ದಾರೆ. ಹಾಗಾಗಿ 'ಡೆವಿಲ್' ಚಿತ್ರದ ಟೀಸರ್ ಆಗಲಿದೆ. ನಮ್ಮ ಹೊಸ ಪ್ರಯತ್ನದ ಹಾರಿವು ಶೀಘ್ರದಲ್ಲೇ ನಿಮ್ಮ ಮುಂದೆ ಎಂದು 'ಡೆವಿಲ್' ಪೋಸ್ಟರ್ ಶೇರ್ ಮಾಡಿ ದರ್ಶನ್ ಸೋಶಿಯಲ್ ಮೀಡಿಯಾದಲ್ಲಿ ಬರೆದುಕೊಂಡಿದ್ದಾರೆ.

ಇನ್ನೂ ರೇಣುಕಾಸ್ವಾಮಿ ಕೊಲೆ ಕೇಸ್‌ನಲ್ಲಿ ದರ್ಶನ್ ಅರೆಸ್ಟ್ ಆಗುವ ಮುನ್ನ 'ಡೆವಿಲ್' ಸಿನಿಮಾದ ಶೂಟಿಂಗ್‌ನಲ್ಲಿ ಭಾಗಿಯಾಗಿದ್ದರು.

ಆ ವೇಳೆ, ಚಿತ್ರದ ಮೊದಲ ಗ್ಲಿಂಪ್ಸ್ ಬಿಡುಗಡೆ ಆಗಿತ್ತು. ಬೇಲ್ ಮೇಲೆ ಹೊರಬಂದ ಬಳಿಕ ಸಿನಿಮಾದ ಡಬ್ಬಿಂಗ್ ಕೆಲಸದಲ್ಲಿ ದರ್ಶನ್ ಭಾಗಿಯಾಗಿದ್ದರು. ಒಟ್ನಲ್ಲಿ ನಾನಾ ಕಾರಣಗಳಿಂದ ಡೆವಿಲ್ ಸಿನಿಮಾದ ಮೇಲೆ ಫ್ಯಾನ್ಸ್‌ಗೆ ಭಾರೀ ನಿರೀಕ್ಷೆಯಿದೆ.

# ರೊಚ್ಚಿಗೆದ್ದ ರೋಹಿತ್: ಕೊಚ್ಚಿ ಹೋದ ಆಂಗ್ಲರು

## 2ನೇ ಏಕದಿನ ಪಂದ್ಯ ಗೆದ್ದು ಸರಣಿ ವಶಪಡಿಸಿಕೊಂಡ ಭಾರತ



ಹಿಟ್ ಮ್ಯಾನ್ ಎಂದೇ ಖ್ಯಾತರಾಗಿರುವ ರೋಹಿತ್ ಶರ್ಮಾ ಅವರ ಬ್ಯಾಟ್ ಇತ್ತೀಚ್ಚಿನ ದಿನಗಳಲ್ಲಿ ಮೌನಕ್ಕೆ ಶರಣಾಗಿತ್ತು. ಹೀಗಾಗಿ ಭಾರತ ಕ್ರಿಕೆಟ್‌ನಲ್ಲಿ ರೋಹಿತ್ ಯುಗಾಂತ್ಯವಾಯಿತೆಂದೇ ಹಲವರು ಅಭಿಪ್ರಾಯಟ್ಟಿದ್ದರು. ಆದರೆ ಇಂಗ್ಲೆಂಡ್ ವಿರುದ್ಧ ಕಟಕ್‌ನಲ್ಲಿ ನಡೆಯುತ್ತಿರುವ ಎರಡನೇ ಏಕದಿನ ಪಂದ್ಯದಲ್ಲಿ ರೋಹಿತ್ ಶರ್ಮಾ ತಮ್ಮ ಹಳೆಯ ಅವತಾರವನ್ನು ತೋರಿಸಿದ್ದಾರೆ. ಆಂಗ್ಲರ ವಿರುದ್ಧ ಉಗ್ರರೂಪ ತಾಳಿರುವ ರೋಹಿತ್ ಶರ್ಮಾ ಕೇವಲ 76 ಎಸೆತಗಳಲ್ಲಿ ತಮ್ಮ ಏಕದಿನ ವೃತ್ತಿಜೀವನದ 32 ನೇ ಶತಕವನ್ನು ಬಾರಿಸಿದ್ದಾರೆ. ಈ ಮೂಲಕ ರೋಹಿತ್ ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ 338 ದಿನಗಳ ನಂತರ ಮತ್ತು ಏಕದಿನ ಪಂದ್ಯದಲ್ಲಿ 475 ದಿನಗಳ ನಂತರ ತಮ್ಮ ಶತಕದ ಬರವನ್ನು ನೀಗಿಸಿಕೊಂಡಿದ್ದಾರೆ. ಮೇಲೆ ಹೇಳಿದಂತೆ ರೋಹಿತ್ ಶರ್ಮಾ ಅವರ ಕಳಪೆ ಬ್ಯಾಟಿಂಗ್ ಬಗ್ಗೆ ಸಾಕಷ್ಟು ಪ್ರಶ್ನೆಗಳು ಉದ್ಭವಿಸಿದ್ದವು. ಆದಾಗ್ಯೂ ರೋಹಿತ್ ಗೆ ಒಂದೇ ಒಂದು ಗಮನಾರ್ಹ ಇನ್ನಿಂಗ್ಸ್ ಆಡಲು ಸಾಧ್ಯವಾಗಿರಲಿಲ್ಲ. ಆದರೆ ಕಟಕ್‌ನಲ್ಲಿ ಬೇರೆಯದೇ ಶೈಲಿಯಲ್ಲಿ ಕಾಣಿಸಿಕೊಂಡ ರೋಹಿತ್ ಈ ಪಂದ್ಯದಲ್ಲಿ ಮೊದಲು 3 ಡಾಟ್ ಬಾಲ್‌ಗಳನ್ನು ಆಡಿದ ನಂತರ ಬೌಂಡರಿ ಬಾರಿಸುವುದರೊಂದಿಗೆ ತಮ್ಮ ಇನ್ನಿಂಗ್ಸ್ ಅನ್ನು ಪ್ರಾರಂಭಿಸಿದರು. ಮುಂದಿನ ಎಸೆತದಲ್ಲೇ ಅವರು ಸಿಕ್ಸರ್ ಬಾರಿಸಿದರು.

ಅದಾದ ನಂತರ ರೋಹಿತ್ ಶತಕ ಬಾರಿಸುವವರೆಗೂ ಹಿಂತಿರುಗಿ ನೋಡಲಿಲ್ಲ. ತಮ್ಮ ಆಕ್ರಮಣಕಾರಿ ಬ್ಯಾಟಿಂಗ್ ಮುಂದುವರಿಸಿದ ರೋಹಿತ್ 75 ಎಸೆತಗಳಲ್ಲಿ 6 ಸಿಕ್ಸರ್ ಮತ್ತು 9 ಬೌಂಡರಿಗಳ ಸಹಾಯದಿಂದ 96 ರನ್ ಗಳಿಸಿದರು. ಇದಾದ ನಂತರ, 26 ನೇ ಓವರ್‌ನಲ್ಲಿ ಆದಿಲ್ ರಶೀದ್ ಬೌಲಿಂಗ್‌ನಲ್ಲಿ ಸಿಕ್ಸರ್ ಬಾರಿಸುವ ಮೂಲಕ ತಮ್ಮ ಶತಕವನ್ನು ಪೂರ್ಣಗೊಳಿಸಿದರು.

**ಮೂರನೇ ಸ್ಥಾನಕ್ಕೇರಿದ ರೋಹಿತ್ :** ಶತಕದ ಇನ್ನಿಂಗ್ಸ್‌ನೊಂದಿಗೆ ರೋಹಿತ್ ತಮ್ಮ ಏಕದಿನ ವೃತ್ತಿಜೀವನದಲ್ಲಿ ಆಡಿರುವ 266 ಪಂದ್ಯಗಳಲ್ಲಿ 48 ಸರಾಸರಿಯಲ್ಲಿ 10868 ರನ್ ಪೂರ್ಣಗೊಳಿಸಿದ್ದಾರೆ. ಇದಲ್ಲದೆ ರೋಹಿತ್ ತಮ್ಮ ಶತಕದೊಂದಿಗೆ ಸ್ಟೀವ್ ಸ್ಮಿತ್ ರನ್ನು ಹಿಂದಿಕ್ಕಿದ್ದು, ಇದೀಗ ರೋಹಿತ್ ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಅತಿ ಹೆಚ್ಚು ಶತಕಗಳನ್ನು ಗಳಿಸಿದ ಸಕ್ರಿಯ ಕ್ರಿಕೆಟಿಗರ ಪಟ್ಟಿಯಲ್ಲಿ ಮೂರನೇ ಸ್ಥಾನಕ್ಕೇರಿದ್ದಾರೆ. ರೋಹಿತ್ 526 ಇನ್ನಿಂಗ್ಸ್‌ಗಳಲ್ಲಿ 49 ಶತಕಗಳನ್ನು ಗಳಿಸಿದ್ದರೆ, ಸ್ಮಿತ್ 410 ಇನ್ನಿಂಗ್ಸ್‌ಗಳಲ್ಲಿ 48 ಶತಕಗಳನ್ನು ಬಾರಿಸಿದ್ದಾರೆ. ಈ ಪಟ್ಟಿಯಲ್ಲಿ ವಿರಾಟ್ ಕೊಹ್ಲಿ 81 ಶತಕಗಳೊಂದಿಗೆ ಮೊದಲ ಸ್ಥಾನದಲ್ಲಿದ್ದರೆ, ಜೋ ರೂಟ್ 52 ಶತಕಗಳೊಂದಿಗೆ ಎರಡನೇ ಸ್ಥಾನದಲ್ಲಿದ್ದಾರೆ.

## ರೋಹಿತ್ ಶತಕದ ಆರ್ಭಟ

# ಟೀಮ್ ಇಂಡಿಯಾದಿಂದಲೇ ಯಶಸ್ವಿ ಜೈಸ್ವಾಲ್ ಔಟ್

ಇತ್ತೀಚೆಗೆ ನಡೆದ ಮೊದಲ ಏಕದಿನ ಪಂದ್ಯದಲ್ಲಿ ಟೀಮ್ ಇಂಡಿಯಾ ಇಂಗ್ಲೆಂಡ್ ತಂಡ ವಿರುದ್ಧ 4 ವಿಕೆಟ್‌ಗಳಿಂದ ಗೆದ್ದು ಬೀಗಿದೆ. ಇಂದು ನಡೆಯುತ್ತಿರೋ ಮಹತ್ವದ 2ನೇ ಏಕದಿನ ಪಂದ್ಯದಲ್ಲಿ ಟೀಮ್ ಇಂಡಿಯಾ, ಇಂಗ್ಲೆಂಡ್ ಮುಖಾಮುಖಿ ಆಗಿವೆ. ಹೇಗಾದ್ರೂ ಗೆದ್ದು ಸರಣಿಯನ್ನು ತನ್ನದಾಗಿಸಿಕೊಳ್ಳಲು ಭಾರತ ತಂಡ ಎದುರು ನೋಡುತ್ತಿದೆ. ಟೀಮ್ ಇಂಡಿಯಾದ ಪ್ಲೇಯಿಂಗ್ ಎಲೆವೆನ್‌ನಲ್ಲಿ ಸ್ಟಾರ್ ಬ್ಯಾಟರ್ ವಿರಾಟ್ ಕೊಹ್ಲಿಗೆ ಅವಕಾಶ ಸಿಕ್ಕಿದೆ. ಇದು ಭಾರತದ ಅಭಿಮಾನಿಗಳಿಗೆ ಸಮಾಧಾನಕರ ಸುದ್ದಿ ಆಗಿದ್ದು, ಕೊಹ್ಲಿ ಬ್ಯಾಟಿಂಗ್ ಕಣ್ತುಂಬಿಸಿಕೊಳ್ಳಲು ಕಾಯುತ್ತಿದ್ದಾರೆ. ವಿರಾಟ್ ಕೊಹ್ಲಿ ಎರಡನೇ ಏಕದಿನ ಪಂದ್ಯದಲ್ಲಿ ಆಡುತ್ತಿದ್ದಾರೆ. ಹೀಗಾಗಿ ಮೊದಲನೇ ಏಕದಿನ ಪಂದ್ಯದಲ್ಲಿ ಚೊಚ್ಚಲ ಪಂದ್ಯವನ್ನಾಡುವ ಅವಕಾಶ ಪಡೆದಿದ್ದ ಯುವ ಆರಂಭಿಕ ಬ್ಯಾಟರ್ ಯಶಸ್ವಿ ಜೈಸ್ವಾಲ್‌ಗೆ ಗೇಟ್ ಪಾಸ್ ನೀಡಲಾಗಿದೆ. ಇದಕ್ಕೆ ಕಾರಣ ಮೊದಲ ಪಂದ್ಯದಲ್ಲಿ ಜೈಸ್ವಾಲ್ ಗಮನಾರ್ಹ ಪ್ರದರ್ಶನ ನೀಡಲಿಲ್ಲ ಎಂಬುದು. ಕೊಹ್ಲಿ ಸಂಪೂರ್ಣ ಫಿಟ್ ಆಗಿದ್ದು, 2ನೇ ಏಕದಿನ ಪಂದ್ಯಕ್ಕೆ ಕಮ್ ಬ್ಯಾಕ್ ಮಾಡಿದ್ದಾರೆ. ಚಾಂಪಿಯನ್ಸ್ ಟ್ರೋಫಿ ಇನ್ನು ಕೆಲವೇ ದಿನಗಳಲ್ಲಿ ಆರಂಭವಾಗುತ್ತಿದ್ದು, ಕೊಹ್ಲಿ 2ನೇ ಏಕದಿನ ಪಂದ್ಯ ಆಡಲೇಬೇಕಿತ್ತು. ಕಳೆದ ಕೆಲವು ದಿನಗಳಿಂದ ಕಳಪೆ ಫಾರ್ಮ್‌ನಿಂದ ಬಳಲುತ್ತಿರೋ ಇವರು ಉಳಿದ ಎರಡು ಪಂದ್ಯಗಳಲ್ಲಿ ಲಯಕ್ಕೆ ಮರಳಬೇಕಿದೆ. ನಾಗ್ಪುರ ಏಕದಿನ ಪಂದ್ಯಕ್ಕೂ ಮುನ್ನ ಅಭ್ಯಾಸದ ವೇಳೆ ಕೊಹ್ಲಿ ಮೊಣಕಾಲಿಗೆ ಇಂಜುರಿ ಆಗಿತ್ತು. ಹಾಗಾಗಿ ಇವರು ಮೊದಲ ಪಂದ್ಯದಿಂದ ಹೊರಗುಳಿದಿದ್ದರು.

# ಕಾರ್ಬಿನ್‌ಗೆ ಚಾಂಪಿಯನ್ಸ್ ಟ್ರೋಫಿಯಲ್ಲಿ ಸ್ಥಾನ



ಚಾಂಪಿಯನ್ಸ್ ಟ್ರೋಫಿಗೆ ಕೆಲವು ದಿನಗಳ ಮೊದಲು ಏಕದಿನ ಪಂದ್ಯ ಆಡಿದ ಕ್ರಿಕೆಟಿಗನ ಅದೃಷ್ಟ ಮಿಂಚಿದೆ. ಅವರನ್ನು ಚಾಂಪಿಯನ್ಸ್ ಟ್ರೋಫಿ ತಂಡದಲ್ಲಿ ವೇಗಿಯೊಬ್ಬನ ಬದಲಿಯಾಗಿ ಸೇರಿಸಿಕೊಳ್ಳಲಾಗಿದೆ. ಗಾಯಗೊಂಡ ವೇಗದ ಬೌಲರ್ ಅನ್ರಿಚ್ ನಾರ್ಖಿಯಾ ಬದಲಿಗೆ ದಕ್ಷಿಣ ಆಫ್ರಿಕಾದ ವೇಗದ ಬೌಲಿಂಗ್ ಆಲ್‌ರೌಂಡರ್ ಕಾರ್ಬಿನ್ ಬಾಷ್ ಅವರಿಗೆ ಚಾಂಪಿಯನ್ಸ್ ಟ್ರೋಫಿ ತಂಡದಲ್ಲಿ ಸ್ಥಾನ ನೀಡಲಾಗಿದೆ. ಫೆಬ್ರವರಿ 19 ರಿಂದ ಪಾಕಿಸ್ತಾನ ಮತ್ತು ದುಬೈನಲ್ಲಿ ಪ್ರಾರಂಭವಾಗುವ ಚಾಂಪಿಯನ್ಸ್ ಟ್ರೋಫಿಗೆ ನಾರ್ಖಿಯಾ ಸಮಯಕ್ಕೆ ಚೇತರಿಸಿಕೊಳ್ಳುವ ಸಾಧ್ಯತೆ ಕಡಿಮೆ ಎಂದು ಕಳೆದ ತಿಂಗಳು ಕ್ರಿಕೆಟ್ ದಕ್ಷಿಣ ಆಫ್ರಿಕಾ ಹೇಳಿತ್ತು. ಕಾರ್ಬಿನ್ ಬಾಷ್ ಇಲ್ಲಿಯವರೆಗೆ ಕೇವಲ ಒಂದು ಏಕದಿನ ಪಂದ್ಯವನ್ನು ಮಾತ್ರ ಆಡಿದ್ದಾರೆ. ಚಾಂಪಿಯನ್ಸ್ ಟ್ರೋಫಿಯಲ್ಲಿ ಸ್ಥಾನ ಪಡೆದಿರುವುದು ಅವರಿಗೆ ಸಿಕ್ಕ ಅದೃಷ್ಟ.

# ಮೈದಾನದಲ್ಲಿ ಫೀಲ್ಡಿಂಗ್ ವೇಳೆ ಹಣೆಗೆ ಬಡಿದ ಚೆಂಡು ರಕ್ತ ಸೋರುತ್ತಲೇ ಹೊರನಡೆದ ರಚಿನ್ ರವೀಂದ್ರ



ಲಾಹೋರ್: ಇದೇ ಫೆಬ್ರವರಿ 19ರಿಂದ ಐಸಿಸಿ ಚಾಂಪಿಯನ್ಸ್ ಟ್ರೋಫಿ ನಡೆಯಲಿರುವ ಲಾಹೋರ್‌ನ ಗಡಾಫಿ ಕ್ರೀಡಾಂಗಣದಲ್ಲಿ ಕಿವೀಸ್ ಸ್ಟಾರ್ ಆಟಗಾರ ಬೆಂಗಳೂರು ಮೂಲದ ರಚಿನ್ ರವೀಂದ್ರ, ಹಣೆಗೆ ಚೆಂಡು ಬಡಿದು ಗಾಯಗೊಂಡಿದ್ದಾರೆ. ಈ ಬೆನ್ನಲ್ಲೇ ಪಾಕಿಸ್ತಾನದ ಕ್ರಿಕೆಟ್ ಅಂಗಳದಲ್ಲಿ ಕ್ರಿಕೆಟ್ ಫ್ಲಡ್ ಲೈಟ್ ವ್ಯವಸ್ಥೆ ಸರಿಯಾಗಿ ಕೆಲಸ ಮಾಡ್ತಿದೆಯೇ ಎನ್ನುವ ಪ್ರಶ್ನೆಯೂ ಎದ್ದಿದೆ.

ಚಾಂಪಿಯನ್ಸ್ ಟ್ರೋಫಿಗೂ ಮುನ್ನ ಪಾಕಿಸ್ತಾನ ಕ್ರಿಕೆಟ್ ಬೋರ್ಡ್ ತನ್ನ ವ್ಯವಸ್ಥೆ ಎಲ್ಲವೂ ಸರಿಯಾಗಿದೆಯೆಂದು ಜಗತ್ತಿನೆದುರು ಖಾತ್ರಿ ಪಡಿಸಲು ನ್ಯೂಜಿಲೆಂಡ್, ದಕ್ಷಿಣ ಆಫ್ರಿಕಾ ತಂಡದೊಂದಿಗೆ ತ್ರಿಕೋನ ಸರಣಿ ಏರ್ಪಡಿಸಿದೆ. ಪಾಕಿಸ್ತಾನದಲ್ಲಿ ಆಡುವುದಿಲ್ಲ ಎಂದು ಪಟ್ಟು ಹಿಡಿದು ತನ್ನ ಪಂದ್ಯಗಳನ್ನು ದುಬೈಗೆ ಸ್ಥಳಾಂತರ ಮಾಡಿಸಿಕೊಂಡ ಭಾರತಕ್ಕೆ ಛಾಟಿಯೇಟು ನೀಡುವ ಉದ್ದೇಶವೂ ಈ ಗಡಿಬಿಡಿಯ ಟೂರ್ನಿಯಲ್ಲಿ ಇತ್ತು ಎಂಬುದು ಸ್ಪಷ್ಟ. ಆದ್ರೆ ಎಲ್ಲವೂ ಸುಸೂತ್ರವಾಗಿ ಸಾಗುತ್ತಿದೆ ಎನ್ನುವಾಗಲೇ ಆ ಘಟನೆ ನಡೆದು ಹೋಗಿದೆ. ಪಿಸಿಬಿ ಅರೆಬರೆ ಕಾರ್ಯಗಳ ಕಡೆಗೆ ಕೈ ತೋರಿಸುವಂತೆ ಆಗಿದೆ. ಲಾಹೋರ್ ಮೈದಾನದಲ್ಲಿ ಆಗಿದ್ದೇನು.



ಪಾಕಿಸ್ತಾನದ ಇನ್ನಿಂಗ್ಸ್‌ನ 38ನೇ ಓವರ್ ನಲ್ಲಿ ರಚಿನ್ ರವೀಂದ್ರ ಅವರು ಸ್ಕ್ವೇರ್ ಲೆಗ್‌ನಲ್ಲಿ ಫೀಲ್ಡಿಂಗ್ ಮಾಡುತ್ತಿದ್ದರು. ಈ ವೇಳೆ ಪಾಕಿಸ್ತಾನದ ಖುಷ್ದಿಲ್ ಶಾ ಹೊಡೆದ ಸ್ವೀಪ್ ಶಾಟ್ ನೇರವಾಗಿ ರಚಿನ್ ರವೀಂದ್ರ ಅವರ ಕಡೆಗೆ ಹೋಗಿತ್ತು. ಮಾಮಾಲಿ ಫೀಲ್ಡರ್ ಅಲ್ಲಿದ್ದಿದ್ದರೂ ಕ್ಲೀಯರ್ ಕ್ಯಾಚ್ ಆಗುತ್ತಿತ್ತು. ಹಾಗೆಯೇ ಗುಡ್ ಫೀಲ್ಡರ್ ಕೂಡ ಆಗಿರುವ ರಚಿನ್ ಕ್ಯಾಚ್ ಕ್ಲಿಯರ್ ಮಾಡುತ್ತಾರೆ ಎಂಬ ವಿಶ್ವಾಸ ಕಿವೀಸ್ ಆಟಗಾರರಿಗೂ ಇತ್ತು. ಆದ್ರೆ ಅಲ್ಲಿ ಆಗಿದ್ದೇ ಬೇರೆ.

ಕ್ಯಾಚ್ ಆಗಿ ಕೈಸೇರಬೇಕಾದ ಚೆಂಡು ನೇರವಾಗಿ ಹೋಗಿ ರಚಿನ್ ರವೀಂದ್ರ ಅವರ ಹಣೆವಗೆ ಬಡಿಯಿತು. ಅವರಿಗೆ ಚೆಂಡು ಬಂದ ದಾರಿಯನ್ನು ಕೊಂಚವೂ ಅಂದಾಜಿಸಲು ಸಾಧ್ಯವಾಗಿಲ್ಲ. ಚೆಂಡು ಹಣೆಗೆ ಬಡಿಯುತ್ತಿದ್ದಂತೆ ಅಲ್ಲಿಯೇ ರಚಿನ್ ಕುಸಿದು ಬಿದ್ದಿದ್ದಾರೆ. ಏನಾಗುತ್ತಿದೆ ಎಂದು ಎಲ್ಲರೂ ಗಾಬರಿಯಾಗಬೇಕಾದರೆ ಅವರ ಮುಖದಿಂದ ರಕ್ತ ಸೋರುತ್ತಿತ್ತು. ತಕ್ಷಣವೇ ಮೈದಾನಕ್ಕೆ ಆಗಮಿಸಿದ ನ್ಯೂಜಿಲೆಂಡ್ ತಂಡದ ಫಿಸಿಯೋ ಮತ್ತು ಮೈದಾನದಲ್ಲಿದ್ದ ರಕ್ಷಣಾ ಸಿಬ್ಬಂದಿ ಅವರ ಮುಖವನ್ನು ಟವೆಲ್‌ನಿಂದ ಮುಚ್ಚಿಕೊಂಡು ಮೈದಾನದಿಂದ ಹೊರ ನಡೆದರು.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966